02 September 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬರಿ ಮಾತಿನಲ್ಲಿ ಭರವಸೆ ಕೊಡುವವರ
ಮಾತನ್ನು ನಂಬಿ ಕೆಲಸಕ್ಕೆ
ಅಡಿ ಇಡಬಾರದು!

-ಸ್ನೇಹಾ ಆನಂದ್

info.varthaman@gmail.com


ಗುಂಡ್ಲುಪೇಟೆಯಲ್ಲಿ ವಿಜೃಂಭಣೆಯ ಭಗೀರಥ ಜಯಂತೋತ್ಸವ — ಪುಟ ಸಂ. 2

ರಾಹುಲ್ ಗಾಂಧಿ ವಿರುದ್ಧ ಎಫ್ಐಆರ್: ಕೇಂದ್ರದ ವಿರುದ್ಧ ಪ್ರತಿಭಟನೆ — ಪುಟ ಸಂ. 3

ಜೀವದ ಜೊತೆ ಕೆಎಸ್ಆರ್‌ಟಿಸಿ ಚೆಲ್ಲಾಟ: ಜನರ ಆಕ್ರೋಶ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 259 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ವೈಜ್ಞಾನಿಕ ಪರಿಶೀಲನೆಗೆ ಕ್ರಮ

### ಕೇಂದ್ರದ ಮಾರ್ಗಸೂಚಿ ಪ್ರಕಾರ ಬರ ಪ್ರದೇಶ ಘೋಷಣೆ: ಸಿಎಂ ಡಿಕೆಶಿ



**ಹುಬ್ಬಳ್ಳಿ:** ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿದ ನಂತರ ಬರ ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಅಲ್ಲಿಯವರೆಗೆ ರೈತರು ತಾಳ್ಮೆಯಿಂದ ಇರಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಡೀ ರಾಜ್ಯವನ್ನೇ ಬರ ಪೀಡಿತ ಎಂದು ಘೋಷಣೆ ಮಾಡಬೇಕು ಎಂಬ ಒತ್ತಾಯ ಇದೆ. ಆದರೆ, ಹಾಗೆ ಮಾಡಲು ಬರುವುದಿಲ್ಲ. ಅದಕ್ಕೆ ಕೇಂದ್ರ, ರಾಜ್ಯ ಸರ್ಕಾರದ ಮಾರ್ಗಸೂಚಿಗಳಿವೆ ಎಂದರು.

ಕೇಂದ್ರದ ಮಾರ್ಗಸೂಚಿ ಪ್ರಕಾರ ಸದ್ಯಕ್ಕೆ 101 ತಾಲ್ಲೂಕುಗಳನ್ನು ಮಾತ್ರ ಬರ ಪೀಡಿತ ಎಂದು ಘೋಷಣೆ ಮಾಡಲಾಗಿದೆ. ರಾಜಕೀಯವಾಗಿ ಈ ಬಗ್ಗೆ ತೀರ್ಮಾನ ಮಾಡಲು ಬರುವುದಿಲ್ಲ. ಕೇಂದ್ರ ತಂಡ ಯಾವುದಾದರೂ ತಾಲ್ಲೂಕಿಗೆ ಭೇಟಿ ನೀಡಿ ಪರಿಶೀಲಿಸಿ ಬರ ಇಲ್ಲ, ತಪ್ಪು ವರದಿ ನೀಡಿದ್ದೀರಿ ಎಂದರೆ ಅದಕ್ಕೆ ಯಾರು ಜವಾಬ್ದಾರಿ ಎಂದು ಪ್ರಶ್ನಿಸಿದರು.

ನಮ್ಮ ಸಚಿವರುಗಳು ಎಲ್ಲ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ವರದಿ ನೀಡಿದ್ದಾರೆ. ಆ ವರದಿ ಸರಿ ಇದೆಯೇ ಎಂದು ಅಧಿಕಾರಿಗಳು ಪರಿಶೀಲನೆ ಮಾಡುತ್ತಾರೆ.ಬರಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕವಾಗಿ ಪರಿಶೀಲನೆ ನಡೆಸಿ, ಕೇಂದ್ರ ಸರ್ಕಾರಕ್ಕೆ ವರದಿ ನೀಡಲಾಗುವುದು. ಈ ವಿಷಯದಲ್ಲಿ ವಿರೋಧ ಪಕ್ಷದವರೂ ಚರ್ಚೆ ಮಾಡಬೇಕು. ಆದರೆ, ಅವರು ಸದನದಲ್ಲಿ ಚರ್ಚೆ ನಡೆಸಿ, ಬರದ ಬಗ್ಗೆ ಗಮನ ಸೆಳೆಯಲಿಲ್ಲ. ಅವರಿಗೆ ರಾಜಕಾರಣವೇ ಮುಖ್ಯ. ರಾಜ್ಯ, ರೈತರ ಹಿತ ಅವರಿಗೆ ಬೇಕಿಲ್ಲ ಎಂದು ಹೇಳಿದರು.

# ಬರ: ಕೇಂದ್ರಕ್ಕೆ ಸಮಗ್ರ ವರದಿ

## ಕೇಂದ್ರ ಸರ್ಕಾರದ ನಿಯಮಗಳಡಿ 101 ತಾಲ್ಲೂಕುಗಳ ಘೋಷಣೆ: ಡಿಸಿಎಂ ಪರಮೇಶ್ವರ್

**ಮೈಸೂರು:** ರಾಜ್ಯದ ಕಾನೂನಿನಡಿ ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದರೆ ಪರಿಹಾರ ಸಿಗುವುದಿಲ್ಲ. ಕೇಂದ್ರ ಸರ್ಕಾರದ ನಿಯಮಗಳಡಿಯಲ್ಲೇ ಮಾಡಬೇಕು. ಹೀಗಾಗಿ ಸದ್ಯಲ್ಲೆ 101 ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಿದ್ದೇವೆ ಎಂದು ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಸೋಮವಾರ ಬರ ವೀಕ್ಷಣೆ ಪ್ರಾರಂಭಿಸಿದ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು. ರಾಜ್ಯದ ವಿವಿಧೆಡೆ ಇನ್ನೊಂದು ವಾರ ಬಿಟ್ಟು ಪರಿಶೀಲನೆ ನಡೆಸಿ ಇನ್ನಷ್ಟು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುವುದು ಎಂದು ಭರವಸೆ ನೀಡಿದರು.

ಪ್ರಸ್ತುತ ಇರುವ ಎನ್‌ಡಿಆರ್‌ಎಫ್ ನಿಯಮಗಳನ್ನು ಸಡಿಲಗೊಳಿಸಿ, ಬರದಿಂದ ತೀವ್ರವಾಗಿ ಬಾಧಿತವಾಗಿರುವ ಹೆಚ್ಚಿನ ತಾಲೂಕುಗಳಿಗೂ ಪರಿಹಾರ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು.

ಇನ್ನೆರಡು ವಾರದೊಳಗೆ ಕೇಂದ್ರಕ್ಕೆ ಸಮಗ್ರ ಬರ ವರದಿ ಸಲ್ಲಿಸುತ್ತೇವೆ. ಆ ಬಳಿಕ ಕೇಂದ್ರದ ತಂಡಗಳು ಬಂದು ಪರಿಶೀಲನೆ ನಡೆಸಿ, ನಂತರವಷ್ಟೇ ಪರಿಹಾರ ಬಿಡುಗಡೆಯಾಗುತ್ತದೆ. ಅದರ ಮೊದಲು ನಮಗೆ ಯಾವುದೇ ಪರಿಹಾರ ಹಣವನ್ನು ನಮಗೆ ಕೊಡುವುದಿಲ್ಲ. ರೈತರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬೇಕು. ಇನ್ಶೂರೆನ್ಸ್ ಏನು ಮಾಡಬೇಕು ಎಂದು ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.



### ಮೈಕ್ರೋಫೈನಾನ್ಸ್‌ಗೆ ಸಚಿವರ ಎಚ್ಚರಿಕೆ

ಮೈಸೂರು: ಬರ ಪರಿಸ್ಥಿತಿಯಿಂದ ರೈತರು ಆರ್ಥಿಕ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಸಾಲ ವಸೂಲಾತಿ ಹೆಸರಿನಲ್ಲಿ ಮೈಕ್ರೋಫೈನಾನ್ಸ್ ಸಂಸ್ಥೆಗಳು ರೈತರಿಗೆ ಯಾವುದೇ ರೀತಿಯ ಕಿರುಕುಳ ನೀಡಬಾರದು ಎಂದು ಉಪ ಮುಖ್ಯಮಂತ್ರಿ ಪರಮೇಶ್ವರ್ ಸೂಚಿಸಿದರು. ಸರ್ಕಾರ ರೂಪಿಸಿರುವ ನಿಯಮಗಳನ್ನು ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಚ್ಚರಿಕೆ ನೀಡಿದರು. ರೈತರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಬರ ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು.

### ಮೋಡ ಬಿತ್ತನೆಯಿಂದ ತುಂತುರು ಮಳೆ ಅಷ್ಟೇ

ಮೋಡ ಬಿತ್ತನೆಯ ಪ್ರಶ್ನೆಗೆ ಉತ್ತರಿಸಿದ ಅವರು, ಮೋಡ ಬಿತ್ತನೆ ಮಾಡಲು ಆದೇಶ ಕೊಟ್ಟಿದ್ದಾರೆ. ಈ ಬಗ್ಗೆ ನಮ್ಮ ಟೆಕ್ನಿಕಲ್ ತಂಡದವರು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಅದರಲ್ಲಿ ಎಷ್ಟರ ಮಟ್ಟಿಗೆ ಸಹಾಯ ಆಗುತ್ತದೆ ಎಂಬುದನ್ನು ನೋಡಬೇಕು. ತಾಂತ್ರಿಕ ವರದಿಯ ಪ್ರಕಾರ ಹೆಚ್ಚು ಮಳೆ ಬರುವುದಿಲ್ಲ. ತುಂತುರು ಮಳೆ ಬಂದ ಹಾಗೆ ಬರುತ್ತದೆ. ಜೊತೆಗೆ ಅದು ಬೆಳೆಗಳಿಗೆ ಸಾಕಾಗುತ್ತದೆ ಎಂದು ಹೇಳಿದ್ದಾರೆ. ಹೀಗಾಗಿ ಇದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ ಎಂದು ಉಪಮುಖ್ಯಮಂತ್ರಿ ಪರಮೇಶ್ವರ್ ತಿಳಿಸಿದರು.



# ಡೀಲ್ ಕುದುರಿಸಿದ್ದು ಕನ್ನಾಳಿ

## ಆತ ಹೇಳಿದಂತೆ ನನ್ನ ಕೆಲಸ: ಐಎಎಸ್ ಅಧಿಕಾರಿ ಜ್ಞಾನೇಂದ್ರ ಕುಮಾರ್

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ ಪಶುವೈದ್ಯಾಧಿಕಾರಿ ನೇಮಕ ಅಕ್ರಮ ಹಗರಣದ ಪ್ರಮುಖ ರೂವಾರಿ ಮಧ್ಯವರ್ತಿ ಬಸವರಾಜ್ ಕನ್ನಾಳಿ. ಆತ ಹೇಳಿದಂತೆಯೇ ನಾನು ಕೆಲಸ ಮಾಡಿದ್ದೇನೆ ಎಂದು ಕೆಪಿಎಸ್ಸಿ ಅಧಿಕಾರಿ ಆಗಿದ್ದ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಸಿಐಡಿ ತನಿಖೆಯಲ್ಲಿ ಬಹಿರಂಗ ಪಡಿಸಿದ್ದಾರೆ.

ನಾನು ಯಾವುದೇ ಅಭ್ಯರ್ಥಿಗಳ ಜೊತೆ ನೇರವಾಗಿ ಮಾತನಾಡಿಲ್ಲ ಅಥವಾ ಮುಖಾಮುಖಿ ಭೇಟಿಗೆ ಅವಕಾಶ ನೀಡಿಲ್ಲ. ಅಭ್ಯರ್ಥಿಗಳನ್ನು ಸಂಪರ್ಕಿಸಿ ಡೀಲ್ ಕುದುರಿಸಿದ್ದೆಲ್ಲವೂ ಬಸವರಾಜ್ ಎಂದು ತಪ್ಪೊಪ್ಪಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಬೀದರ್‌ನಿಂದಲೇ ಬಸವರಾಜ್ ಕನ್ನಾಳಿ ಪರಿಚಯವಿದ್ದ. ಆತ ರಾಜಕಾರಣಿಯಂತೆ ಬಿಂಬಿಸಿಕೊಂ



ಡಿದ್ದ. ಜಯಮಹಲ್‌ನಲ್ಲಿರುವ ಮನೆ ಹಾಗೂ ನಗರದ ವಿವಿಧ ಹೋಟೆಲ್‌ಗಳಲ್ಲಿ ಭೇಟಿಯಾಗಿ ಡೀಲ್ ಕುರಿತು ಚರ್ಚೆ ನಡೆಸುತ್ತಿದ್ದೆವು.

ಪ್ರಿಂಟ್ ಆದ ಪ್ರಶ್ನೆ ಪತ್ರಿಕೆಯನ್ನು ನೇರವಾಗಿ ಹೊರಗೆ ತಂದಿಲ್ಲ. ಬದಲಾಗಿ, ಪ್ರಶ್ನೆ ಪತ್ರಿಕೆ ಪುಟ 2ಕ್ಕೆ

### ಕೆಪಿಎಸ್ಸಿ ಹಗರಣ: 10 ಅಭ್ಯರ್ಥಿಗಳು ಮಾಫಿಸಾಕ್ಷಿ

**ಬೆಂಗಳೂರು:** ಕೆಪಿಎಸ್‌ಸಿ ನೇಮಕಾತಿ ಹಗರಣದಲ್ಲಿ ಭಾಗಿಯಾಗಿದ್ದ 10 ಅಭ್ಯರ್ಥಿಗಳು ಅಪ್ರೂವರ್ ಆಗಲು ಸಿದ್ಧ ಆಗಿದ್ದಾರೆ. ಸಿಐಡಿ ಮುಂದೆ ತಮ್ಮ ತಪ್ಪೊಪ್ಪಿಗೆ ಹೇಳಿಕೆ ದಾಖಲಿಸಲು ಸಿದ್ಧರಾಗಿದ್ದಾರೆ. ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ 6 ಅಭ್ಯರ್ಥಿಗಳ ಅಪ್ರೂವರ್ ಹೇಳಿಕೆಯನ್ನು ತನಿಖಾಧಿಕಾರಿಗಳು ದಾಖಲಿಸಿಕೊಂಡಿದ್ದಾರೆ.

ಅಕ್ರಮದ ಗುಟ್ಟು ರಟ್ಟು ಮಾಡುತ್ತಿರುವ ಅಭ್ಯರ್ಥಿಗಳಲ್ಲಿ ಇದೀಗ ತಪ್ಪೊಪ್ಪಿಗೆ ಪುಟ 2ಕ್ಕೆ

# ಜಲವಿವಾದ: ವಿಸ್ತೃತ ಚರ್ಚೆ



**ನವದೆಹಲಿ:** ರಾಜ್ಯದ ಹಿತಾಸಕ್ತಿಯ ಪ್ರಮುಖ ಅಂತಾರಾಜ್ಯ ನದಿ ನೀರು ಹಂಚಿಕೆ ವ್ಯಾಜ್ಯಗಳು ಮತ್ತು ನೀರಾವರಿ ಯೋಜನೆಗಳ ಕುರಿತು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಸೋಮವಾರ ಸುಪ್ರೀಂ ಕೋರ್ಟ್ನ ಹಿರಿಯ ವಕೀಲ ಶ್ಯಾಮ್ ದಿವಾನ್ ಜೊತೆ ಸಮಾಲೋಚನಾ ಸಭೆ ನಡೆಸಿದರು.

ಮೇಕೆದಾಟು ಯೋಜನೆಯ ಮಹತ್ವವನ್ನು ಪ್ರಸ್ತಾಪಿಸಿದ ಸಚಿವರು, ಪ್ರಸ್ತುತ ಹವಾಮಾನ ವೈಪರೀತ್ಯ ಹಾಗೂ ಪರಿಸರದಲ್ಲಿನ ಏರುಪೇರುಗಳಿಂದಾಗಿ ಮಳೆಯ ಪ್ರಮಾಣ ಕ್ಷೀಣಿಸಿರುವ ಇಂತಹ ಸಂಕಷ್ಟದ ಸಂದರ್ಭದಲ್ಲಿ ಮೇಕೆದಾಟು ಅಣೆಕಟ್ಟು ನಿರ್ಮಾಣ ಎರಡೂ ರಾಜ್ಯಗಳ ರೈತರಿಗೆ ಮತ್ತು ಸಾರ್ವಜನಿಕರಿಗೆ ಎಷ್ಟು ಫಲಪ್ರದ ಮತ್ತು ಉಪಯುಕ್ತ ಎಂಬುದಕ್ಕೆ ಇಂದಿನ ಪರಿಸ್ಥಿತಿಗಿಂತ ದೊಡ್ಡ ನಿದರ್ಶನ ಮತ್ತೊಂದಿಲ್ಲ ಎಂದು ಹಿರಿಯ ವಕೀಲರಿಗೆ ಮನವರಿಕೆ ಮಾಡಿಕೊಟ್ಟರು.

ನೆರೆ ರಾಜ್ಯಗಳೊಂದಿಗಿನ ಜಲವಿವಾದಗಳಲ್ಲಿ ಕರ್ನಾಟಕದ ಹಕ್ಕೊತ್ತಾಯ ಮತ್ತು ರೈತರ ಹಿತರಕ್ಷಣೆ ಖಚಿತಪಡಿಸಿಕೊಳ್ಳಲು ಸುಪ್ರೀಂ ಕೋರ್ಟ್ನಲ್ಲಿ ಮಂಡಿಸಬೇಕಾದ ಪ್ರಬಲ ವಾದಗಳ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

## ವಾಣಿಜ್ಯ ಸಿಲಿಂಡರ್ ಬೆಲೆ 9 ರೂ. ಏರಿಕೆ

**ನವದೆಹಲಿ:** ತೈಲ ಮಾರುಕಟ್ಟೆ ಕಂಪನಿಗಳು 19 ಕೆಜಿ ತೂಕದ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರವನ್ನು ಹೆಚ್ಚಿಸಿವೆ.



ಕಮರ್ಷಿಯಲ್ ಸಿಲಿಂಡರ್ ದರದಲ್ಲಿ 9.50 ರೂಪಾಯಿ ಏರಿಕೆ ಮಾಡಲಾಗಿದೆ. ಆದರೆ ಗೃಹ ಬಳಕೆದಾರರಿಗೆ ಕೊಂಚ ರಿಲೀಫ್ ಸಿಕ್ಕಿದೆ. 14 ಕೆಜಿ ತೂಕದ ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಯಾವುದೇ ಪರಿಷ್ಕರಣೆ ಮಾಡಿಲ್ಲ. ಜೊತೆಗೆ 5 ಕೆಜಿ, 10 ಕೆಜಿ ಸಿಲಿಂಡರ್ ಬೆಲೆಯಲ್ಲೂ ಬದಲಾವಣೆ ಆಗಿಲ್ಲ.

## ಪರಿಷ್ಕರಣೆಗೂ ಮುನ್ನ ಗೃಹಲಕ್ಷ್ಮಿ ಹಣ ಬಿಡುಗಡೆ

**ಬೆಂಗಳೂರು:** ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳ ಪರಿಷ್ಕರಣೆಗೂ ಮೊದಲು ಬಾಕಿ ಉಳಿದಿರುವ 33ನೇ ಕಂತಿನ ಹಣವನ್ನು ಈ ತಿಂಗಳಲ್ಲಿ ಖಾತೆಗೆ ಜಮೆ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.




ಅನರ್ಹ ಫಲಾನುಭವಿಗಳನ್ನು ಪತ್ತೆಹಚ್ಚಲು ಸರ್ಕಾರ ಮನೆ–ಮನೆ ಸರ್ವೆ ನಡೆಸಿ ಗೃಹಲಕ್ಷ್ಮಿ ಯೋಜನೆ ಪರಿಷ್ಕರಣೆ ಮಾಡಲು ಮುಂದಾಗಿದೆ. ಈ ಹಿನ್ನೆಲೆಯಲ್ಲಿ ಪರಿಷ್ಕರಣೆ ನಡೆಯುವ ವೇಳೆ ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡದಿರಲು ಇಲಾಖೆ ನಿರ್ಧರಿಸಿತ್ತು. ಆದರೆ, ಈಗ 33ನೇ ಕಂತಿನ ಹಣವನ್ನು ಈ ತಿಂಗಳಲ್ಲಿ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಗ್ಯಾರಂಟಿ ಪ್ರಾಧಿಕಾರದ ಸದಸ್ಯರ ಜೊತೆ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಈ ಕುರಿತು ಸೂಚನೆ ನೀಡಿದ್ದಾರೆ.

## ಪ್ರದೋಷ್ ಮಾಫಿ ಸಾಕ್ಷಿ ಪ್ರಶ್ನಿಸಿ ಹೈಕೋರ್ಟ್‌ಗೆ ದರ್ಶನ್ ಮೊರೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣದ 14ನೇ ಆರೋಪಿ ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಲು ಸೆಷನ್ಸ್ ಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ ಕೊಲೆ ಆರೋಪಿ ದರ್ಶನ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.




ಪ್ರದೋಷ್ ಅವರನ್ನ ಮಾಫಿ ಸಾಕ್ಷಿಯನ್ನಾಗಿ ಪರಿಗಣಿಸಿರುವ ಸೆಷನ್ಸ್ ಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಕೋರಿ ದರ್ಶನ್ ಹೈಕೋರ್ಟ್ನಲ್ಲಿ ಅರ್ಜಿ ಸಲ್ಲಿಸಿದ್ದಾರೆ. ಪ್ರದೋಷ್ ಅವರನ್ನು ಪ್ರತಿವಾದಿ ಮಾಡಲಾಗಿದೆ.

ಪ್ರದೋಷ್ ಅವರನ್ನು ಮಾಫಿ ಸಾಕ್ಷಿಯಾಗಿ ಪರಿಗಣಿಸಿರುವ ಕ್ರಮದ ಕಾನೂನುಬದ್ಧತೆಯನ್ನ ದರ್ಶನ್ ಪ್ರಶ್ನಿಸಿದ್ದಾರೆ. ಮಾಫಿ ಸಾಕ್ಷಿಯಾಗಿ ಹೇಳಿಕೆ ನೀಡಲು ಪ್ರದೋಷ್ ಪುಟ 2ಕ್ಕೆ

## ಒಂದೇ ಮನೆಯಲ್ಲಿ 28 ಶವ ಪತ್ತೆ

**ಕಠ್ಮಂಡು:** ನೇಪಾಳ–ಟಿಬೆಟ್ ಗಡಿಯುದ್ದಕ್ಕೂ ಸಂಭವಿಸಿದ ವಿನಾಶಕಾರಿ ಹಠಾತ್ ಪ್ರವಾಹದ ಬಳಿಕ ನಾಪತ್ತೆಯಾಗಿರುವ ಸಾವಿರಾರು ಜನರಿಗಾಗಿ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗಿದೆ. ಸಾವಿನ ಸಂಖ್ಯೆ ಒಂದು ಸಾವಿರಕ್ಕೂ ಹೆಚ್ಚಾಗಿದೆ. 4,000ಕ್ಕೂ ಹೆಚ್ಚು ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ.

ಈ ನಡುವೆ ನುವಾಕೋಟ್‌ನಲ್ಲಿ ಪ್ರವಾಹದ ಅವಶೇಷಗಳಡಿ ಹೂತುಹೋಗಿದ್ದ ಒಂದೇ ಮನೆಯಲ್ಲಿ 23 ಮೃತದೇಹಗಳು ಪತ್ತೆಯಾಗಿರುವುದು ದುರಂತದ ಭೀಕರತೆಯನ್ನ ಮತ್ತೊಮ್ಮೆ ಬಯಲು ಮಾಡಿದೆ. ನೇಪಾಳದ ಅತ್ಯಂತ ಹಾನಿಗೊಳಗಾದ ಪ್ರದೇಶಗಳಲ್ಲೊಂದಾದ ನುವಾಕೋಟ್‌ನ ಬಿಡೂರ್ ಪುರಸಭೆ ಬೆಟ್ರಾವತಿ ಗ್ರಾಮದಲ್ಲಿ ಈ ಘಟನೆ ನಡೆದಿದೆ.

## ಮತ್ತೆ ಸಿದ್ದರಾಮಯ್ಯ ಅಹಿಂದ ಸಮಾವೇಶ

**ಬೆಂಗಳೂರು:** ಬೆಂಗಳೂರಲ್ಲಿ ಸೆಪ್ಟೆಂಬರ್ 6ರಂದು ಅಹಿಂದ ಸಮಾವೇಶ ನಡೆಯಲಿದೆ.



ಮಾಜಿ ಸಿಎಂ ಸಿದ್ದರಾಮಯ್ಯ ಭಾಗಿಯಾಗಲಿದ್ದಾರೆ. ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಬಳಿಕ ನಡೆಯುತ್ತಿರುವ ಮೊದಲ ಸಮಾವೇಶ ಇದು. ಕಾಂಗ್ರೆಸ್‌ನ ಅಹಿಂದ ನಾಯಕರಿಗೂ ಆಹ್ವಾನ ನೀಡಲಾಗಿದೆ. ಈ ಮಧ್ಯೆ ಕೆಲ ನಾಯಕರಿಗೆ ಸಮಾವೇಶಕ್ಕೆ ಹೋಗ್ಬೇಕಾ..? ಬೇಡವೇ? ಎಂಬ ಗೊಂದಲ ಎದುರಾಗಿದೆ ಎನ್ನಲಾಗಿದೆ. ಪುಟ 2ಕ್ಕೆ

# ರಾಜ್ಯ ಸರ್ಕಾರದ ವಿರುದ್ಧ ಗುಡುಗಿದ ಯಡಿಯೂರಪ್ಪ

### ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಬಿಜೆಪಿ ಹೋರಾಟ ನಿಲ್ಲಲ್ಲ | ರಾಯಚೂರಿನಿಂದ ಬಳ್ಳಾರಿ ವರೆಗೆ ಬಿಜೆಪಿ ಪಾದಯಾತ್ರೆಗೆ ಚಾಲನೆ

**ರಾಯಚೂರು:** ರಾಜ್ಯ ಸರ್ಕಾರದ ವಿರುದ್ಧ ಪಾದಯಾತ್ರೆ ಆರಂಭಿಸುವ ಮೂಲಕ ಬಿಜೆಪಿ ನಾಯಕರು ಮಂಗಳವಾರ ರಣಕಹಳೆ ಮೊಳಗಿಸಿದರು. ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಪಾದಯಾತ್ರೆಗೆ ಚಾಲನೆ ನೀಡುವ ಮೂಲಕ ಸರ್ಕಾರದ ವಿರುದ್ಧ ಗುಡುಗಿದರು.

ರಾಜ್ಯ ಸರ್ಕಾರದ ವೈಫಲ್ಯಗಳನ್ನ ಖಂಡಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಹಮ್ಮಿಕೊಂಡಿರುವ ಬಳ್ಳಾರಿ ಚಲೋ ಪಾದಯಾತ್ರೆಗೆ ಅಧಿಕೃತ ಚಾಲನೆ ನೀಡಲಾಯಿತು. ಸುಮಾರು 175 ಕಿ.ಮೀ. ಪಾದಯಾತ್ರೆ ನಡೆಯಲಿದೆ.

ಬಿ.ಎಸ್.ಯಡಿಯೂರಪ್ಪ ಮಾತನಾಡಿ, ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಜನಾಕ್ರೋಶಕ್ಕೆ ಮಣಿದು ಸಚಿವ ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದ್ದು, ಭ್ರಷ್ಟಾಚಾರ ತಾಂಡವವಾಡುತ್ತಿದೆ. ಹತ್ತು ಹಲವು ಹಗರಣಗಳಲ್ಲಿ ಸರ್ಕಾರ ಮುಳುಗಿದೆ. ಇಂತಹ ಸರ್ಕಾರದ ವಿರುದ್ಧ ವಿಜಯೇಂದ್ರ ಸೇರಿದಂತೆ ಬಿಜೆಪಿ ನಾಯಕರು ಹೋರಾಟಕ್ಕೆ ಇಳಿದಿದ್ದಾರೆ. ಈ ಸರ್ಕಾರ ತೊಲಗುವವರೆಗೂ ಬಿಜೆಪಿ ಹೋರಾಟ ಮುಂದುವರಿಸಲಿದೆ ಎಂದು ಗುಡುಗಿದರು.

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಅಮೆರಿಕಾದಿಂದ ಮರಳಿದ ಬಳಿಕ ದೇಶದಲ್ಲೇ ಸಂಚಲನ ಮೂಡಿಸುವ ವಿಚಾರ ಬಹಿರಂಗಪಡಿಸುವುದಾಗಿ ಕುಮಾರಸ್ವಾಮಿ ತಿಳಿಸಿದ್ದಾರೆ. ಪುಟ 2ಕ್ಕೆ





### ಬಿಜೆಪಿ ರಾಜಕೀಯ ಪಾದಯಾತ್ರೆ: ಡಿಕೆಶಿ

ಬಿಜೆಪಿಯವರು ಮಾಡುತ್ತಿರುವುದು ರಾಜಕಾರಣ. ಅದು ಪಾದಯಾತ್ರೆಯಲ್ಲ. ನಾವು ಬಳ್ಳಾರಿ, ಮೇಕೆದಾಟು, ಭಾರತ್ ಜೋಡೊ ಸೇರಿ ಹಲವು ಪಾದಯಾತ್ರೆ ಮಾಡಿದ್ದೇವೆ. ಪುಟ 2ಕ್ಕೆ

### ರಾಜ್ಯ ರಾಜಕೀಯ ದಿಕ್ಕನ್ನೇ ಬದಲಿಸುವ ಶಕ್ತಿ: ವಿಜಯೇಂದ್ರ

**ರಾಯಚೂರು:** ಕರ್ನಾಟಕದ ರಾಜಕೀಯ ದಿಕ್ಕನ್ನೇ ಬದಲಿಸುವ ಶಕ್ತಿ ಬಿಜೆಪಿ ಪಾದಯಾತ್ರೆಗೆ ಇದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಪುಟ 2ಕ್ಕೆ

## ಪ್ರಿಯಾಂಕ್ ರಾಜೀನಾಮೆಗೆ ಜೆಡಿಎಸ್ ಆಗ್ರಹ: ಕಚೇರಿಗೆ ಮುತ್ತಿಗೆ ಯತ್ನ

**ಬೆಂಗಳೂರು:** ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಎಕ್ಸಿಕ್ಯೂಟೀವ್ ಎಂಜಿನಿಯರ್ ಗ್ರೇಡ್ 1 ಹುದ್ದೆಗಳ ನೇಮಕಾತಿಯಲ್ಲಿ ನಡೆದಿರುವ ಅಕ್ರಮದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಶಾಮೀಲಾಗಿದ್ದಾರೆಂದು ಆರೋಪಿಸಿ ಜೆಡಿಎಸ್ ಕಾರ್ಯಕರ್ತರು ಕ್ವೀನ್ಸ್ ರಸ್ತೆಯಲ್ಲಿರುವ ಪ್ರದೇಶ ಕಾಂಗ್ರೆಸ್ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರಿಯಾಂಕ್ ಖರ್ಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಕೆಪಿಸಿಸಿ ಕಚೇರಿಗೆ ಪುಟ 2ಕ್ಕೆ



# ಗುಂಡ್ಲುಪೇಟೆಯಲ್ಲಿ ವಿಜೃಂಭಣೆಯ ಭಗೀರಥ ಜಯಂತೋತ್ಸವ

ಗುಂಡ್ಲುಪೇಟೆ: ಪಟ್ಟಣದಲ್ಲಿ ಉಪ್ಪಾರ ಸಮಾಜದ ವತಿಯಿಂದ ಮಹರ್ಷಿ ಭಗೀರಥರ ಜಯಂತೋತ್ಸವವನ್ನು ಅದ್ದೂರಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಸಾವಿರಾರು ಮಂದಿ ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ವಿವಿಧ ಕಲಾ ತಂಡಗಳೊಂದಿಗೆ ಮಹರ್ಷಿ ಭಗೀರಥರ ಭಾವಚಿತ್ರದ ಭವ್ಯ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಡೆಯಿತು.

ಭಗೀರಥ ಪೀಠ, ಚಿನ್ಮುಲಾದ್ರಿ ಶಿಲಾಪುರ ಮಹಾಸಂಸ್ಥಾನದ ಚಿತ್ರದುರ್ಗದ ಪೀಠಾಧಿಪತಿಗಳಾದ ಶ್ರೀ ಡಾ. ಪುರುಷೋತ್ತಮಾನಂದಪುರಿ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ ಜಯಂತೋತ್ಸವ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಗುಂಡ್ಲುಪೇಟೆಯಲ್ಲಿ ಉಪ್ಪಾರ ಸಮಾಜದ ಬಂಧುಗಳು ಇಷ್ಟು ದೊಡ್ಡ ಸಂಖ್ಯೆಯಲ್ಲಿ ಒಗ್ಗಟ್ಟಾಗಿ ಸೇರಿ ಭಗೀರಥ ಜಯಂತೋತ್ಸವ ಆಚರಿಸುತ್ತಿರುವುದು ಸಂತಸ ತಂದಿದೆ. ಸಮಾಜದ ಅಭಿವೃದ್ಧಿಗೆ ಒಗ್ಗಟ್ಟು ಅತ್ಯಂತ ಮುಖ್ಯವಾಗಿದೆ.

ಶೋಷಿತ ಹಾಗೂ ಹಿಂದುಳಿದ ಸಮಾಜಗಳು ಜಾಗೃತರಾಗಬೇಕು. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ನೀಡಿದ 'ಶಿಕ್ಷಣ, ಸಂಘಟನೆ, ಹೋರಾಟ' ಎಂಬ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಶಿಕ್ಷಣವೇ ಸಮಾಜದ ಅಭಿವೃದ್ಧಿಗೆ ಪ್ರಮುಖ ಅಸ್ತ್ರವಾಗಿದ್ದು, ನಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯಬೇಕು.

ಶಿಕ್ಷಣದಿಂದ ಜ್ಞಾನ, ಸಂಘಟನೆಯಿಂದ ಶಕ್ತಿ ಹಾಗೂ ನ್ಯಾಯಯುತ ಹೋರಾಟದಿಂದ ಹಕ್ಕುಗಳನ್ನು ಪಡೆಯಲು ಸಾಧ್ಯ. ಆದ್ದರಿಂದ ಸಮಾಜದ ಯುವಕರು ವಿದ್ಯಾವಂತರಾಗಿ, ಸಂಘಟಿತರಾಗಿ, ಸಮಾಜದ ಹಿತಕ್ಕಾಗಿ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು. ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡುವ ಮೂಲಕ ಸಮಾಜದ ಘನತೆಯನ್ನು ಹೆಚ್ಚಿಸಬೇಕು ಎಂದು ಕರೆ ನೀಡಿದರು. ಸರ್ಕಾರಗಳು ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಹಲವು ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅವುಗಳನ್ನು ಸದುಪಯೋಗಪಡಿಸಿಕೊಂಡು ಸಮಾಜದವರು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಬೇಕು. ಸಮಾಜದ ಏಳಿಗೆಗಾಗಿ ತಮ್ಮ ಸಂಪೂರ್ಣ ಸಹಕಾರವಿರಲಿದೆ ಎಂದು ಸ್ವಾಮೀಜಿ ಭರವಸೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಪುಟ್ಟರಂಗಶೆಟ್ಟಿ ಮಾತನಾಡಿ, ಮಹರ್ಷಿ ಭಗೀರಥರು ನಮ್ಮ ಮೂಲಪುರುಷರಾಗಿದ್ದು, ತಮ್ಮ ತಪೋಶಕ್ತಿಯಿಂದ ಗಂಗೆಯನ್ನು ಧರೆಗೆ ತಂದು ಸಮಸ್ತ ಜೀವಜಗತ್ತಿಗೆ ಅನುಕೂಲ ಮಾಡಿಕೊಟ್ಟ ಮಹಾನ್ ವ್ಯಕ್ತಿ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಸಮಾಜದ ಕುಂದುಕೊರತೆಗಳನ್ನು ಸರ್ಕಾರದ ಗಮನಕ್ಕೆ ತಂದು, ಸರ್ಕಾರದ ಮಟ್ಟದಲ್ಲಿ ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಗುಂಡ್ಲುಪೇಟೆ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿ, ತಾಲ್ಲೂಕಿನಲ್ಲಿ ಉಪ್ಪಾರ ಸಮಾಜದ ಬಂಧುಗಳು ಒಗ್ಗಟ್ಟಿನಿಂದ ಹಾಗೂ ಸಂಭ್ರಮದಿಂದ ಮಹರ್ಷಿ ಭಗೀರಥರ ಜಯಂತಿಯನ್ನು ಆಚರಿಸುತ್ತಿರುವುದು ಸಂತಸದ ಸಂಗತಿ. ಪೂಜ್ಯ ಸ್ವಾಮೀಜಿಗಳು ದೂರದ ಚಿತ್ರದುರ್ಗದಿಂದ ಆಗಮಿಸಿ ಕಾರ್ಯಕ್ರಮಕ್ಕೆ ಸಾನಿಧ್ಯ ವಹಿಸಿರುವುದು ನಮ್ಮೆಲ್ಲರ ಪುಣ್ಯ ಎಂದು ಹೇಳಿದರು.

ತಾಲ್ಲೂಕಿನ ಉಪ್ಪಾರ ಸಮುದಾಯದ ಅಭಿವೃದ್ಧಿಗೆ ಶಕ್ತಿ ಮೀರಿ ಶ್ರಮಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಸಮಾಜಕ್ಕೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದು. ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಉಪ್ಪಾರ ಸಮುದಾಯ ಭವನ ನಿರ್ಮಾಣಕ್ಕೆ ?4 ಕೋಟಿ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಘೋಷಿಸಿದರು. ಮಾಜಿ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿ, ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಉಪ್ಪಾರ ಸಮಾಜದವರು ಇಷ್ಟು ದೊಡ್ಡ ಪ್ರಮಾಣದಲ್ಲಿ ಒಗ್ಗಟ್ಟಿನಿಂದ ಭಗೀರಥ ಜಯಂತಿಯನ್ನು ಆಚರಿಸುತ್ತಿರುವುದು ಹೆಮ್ಮೆಯ ವಿಚಾರ. ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಮಾಜದವರು ಗಮನಾರ್ಹ ಸಾಧನೆ ಮಾಡುತ್ತಿದ್ದಾರೆ. ಸಮಾಜದ ಉನ್ನತಿಗಾಗಿ ತಾವು ಸದಾ ಜೊತೆಯಾಗಿ ನಿಲ್ಲುವುದಾಗಿ ತಿಳಿಸಿದರು. ಇದೆ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು ಕಾರ್ಯಕ್ರಮದಲ್ಲಿ ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಭರಮಣ್ಣ ಲಕ್ಷ್ಮಣ್ ಉಪ್ಪಾರ್, ಮಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ಎನ್. ವಿಜಯ್ ಕುಮಾರ್, ರಾಜ್ಯ ಉಪ್ಪಾರ ಯುವಕರ ಸಂಘದ ಉಪಾಧ್ಯಕ್ಷ ರಾಮಚಂದ್ರ, ಮಾಜಿ ಪುರಸಭೆ ಅಧ್ಯಕ್ಷ ಪಿ. ಗಿರೀಶ್, ಭೀಮನಬೀಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಬಿ.ಜಿ. ಶಿವಕುಮಾರ್, ತಾಲ್ಲೂಕು ಉಪ್ಪಾರ ಸಂಘದ ಅಧ್ಯಕ್ಷ ಶಿವಶಂಕರ್, ಸಂಘದ ಕಾರ್ಯದರ್ಶಿ ತೂಂಡವಾಡಿ ವಕೀಲರು ರವಿ.ಗಡಿ ಮನೆ ಯಜಮಾನ ಟಿ. ಮಹೇಶ್, ಶಿವಯ್ಯ ಶೆಟ್ಟಿ, ಟಿ.ಎಂ. ಮಹೇಶ್ ಶೆಟ್ಟಿ, ಅಣ್ಣೂರುಕೇರಿ ಮಲಿಶೆಟ್ಟಿ, ಛೆ. ಮಹದೇವಶೆಟ್ಟಿ, ಬೇಗೂರು ಕೆ. ಮಹದೇವಶೆಟ್ಟಿ, ಅಣ್ಣಯ್ಯ ಬೀಮನಬೀಡು, ಸ್ವಾಮಿ, ಅರಸಶೆಟ್ಟಿ, ಕೂತನೂರು ಗೋಕುಲ ಶೆಟ್ಟಿ, ಗೋಪಾಲ ಶೆಟ್ಟಿ ಗಡಿ, ಕಟ್ಟಿ ಗುರು ಸೇರಿದಂತೆ ಮನೆ ಯಜಮಾನರು ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.



### ಕಲಾತಂಡಗಳ ವೈಭವದ ಮೆರವಣಿಗೆ

**ಜಯಂತೋತ್ಸವದ ಅಂಗವಾಗಿ ನಡೆದ ಭವ್ಯ ಮೆರವಣಿಗೆ ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. ವಿವಿಧ ಕಲಾ ತಂಡಗಳ ಪ್ರದರ್ಶನದೊಂದಿಗೆ ಮಹರ್ಷಿ ಭಗೀರಥರ ಭಾವಚಿತ್ರವನ್ನು ಅಲಂಕರಿಸಿ ಮೆರವಣಿಗೆ ನಡೆಸಲಾಯಿತು. ಸಾವಿರಾರು ಮಂದಿ ಉತ್ಸಾಹದಿಂದ ಪಾಲ್ಗೊಂಡು ಮೆರವಣಿಗೆಯ ಮೆರುಗು ಹೆಚ್ಚಿಸಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ಸಾರ್ವಜನಿಕರ ಗಮನ ಸೆಳೆಯಿತು.**

## ಮೊದಲ ಪುಟದಿಂದ

### ಕಚೇರಿಗೆ ಮುತ್ತಿಗೆ ಯತ್ನ

ನುಗ್ಗಲೆತ್ನಿಸಿದ ಕಾರ್ಯಕರ್ತರನ್ನು ಬ್ಯಾರಿಗೇಡ್‌ಗಳನ್ನು ಅಡ್ಡಲಾಗಿ ಹಾಕಿ ಪೊಲೀಸರು ತಡೆದರು. ಈ ವೇಳೆ ಪೊಲೀಸರು ಹಾಗೂ ಜೆಡಿಎಸ್ ಕಾರ್ಯಕರ್ತರ ನಡುವೆ ತೀವ್ರ ವಾಗ್ವಾದ ನಡೆಯಿತು. ಬ್ಯಾರಿಗೇಡ್‌ಗಳನ್ನು ನೂಕಿ ಕಚೇರಿಗೆ ನುಗ್ಗಲು ಯತ್ನಿಸಿದಾಗ ಪರಿಸ್ಥಿತಿ ಉದ್ವಿಗ್ನಗೊಂಡಿತು. ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಹಲವು ನಾಯಕರು ಹಾಗೂ ಕಾರ್ಯಕರ್ತರನ್ನು ವಶಕ್ಕೆ ಪಡೆದರು. ಈ ಸಂದರ್ಭದಲ್ಲಿ ಪ್ರತಿಭಟನೆಯನ್ನು ಹತ್ತಿಕ್ಕಲು ಯತ್ನಿಸಿದ ಸರಕಾ ರದ ವಿರುದ್ಧ ಜೆಡಿಎಸ್ ಕಾರ್ಯಕರ್ತರು ಆಕ್ರೋಶ ವ್ಯಕ್ತಡಿಸಿದರು. ಈ ಸಂದರ್ಭದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಎಚ್.ಎಂ.ರಮೇಶ್ ಗೌಡ, ನ ಾವು ಶಾಂತಿಯುತವಾಗಿ ಮುತ್ತಿಗೆ ಕಾರ್ಯಕ್ರಮ ಹಮ್ಮಿಕೊಂ ಡಿದ್ದೆವು. ಶಾಂತಿಭಂಗ ಉಂಟು ಮಾಡುವುದು ನಮ್ಮ ಉದ್ದೇಶ ಆಗಿರಲಿಲ್ಲ. ಆದರೂ ಪೊಲೀಸರು ನಮ್ಮನ್ನು ವಶಕ್ಕೆ ಪಡೆದಿರುವುದು ಸರಿಯಲ್ಲ ಎಂದರು.

### ರಾಜಕೀಯ ದಿಕ್ಕನ್ನೇ ಬದಲಿಸುವ ಶಕ್ತಿ

ಲಿಂಗಸೂರಿನಿಂದ ಆರಂಭಗೊಂಡ ಬಿಜೆಪಿ ಪಾದಯಾತ್ರೆ ಕೇವಲ ರಾಜಕೀಯ ಕಾರ್ಯಕ್ರಮ ಅಲ್ಲ. ದಲಿತ ವಿರೋಧಿ, ರೈತ ವಿರೋಧಿ, ಬಡವರ ವಿರೋಧಿ, ಯುವಜನ ವಿರೋಧಿ, ಮಹಿಳಾ ವಿರೋಧಿ ಹಾಗೂ ಭ್ರಷ್ಟಾಚಾರದಲ್ಲಿ ಮುಳುಗಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧದ ಜನಾಂದೋಲನ ಎಂದು ಅವರು ಹೇಳಿದರು.

ಬಿಜೆಪಿ ಯಾಕೆ ಪಾದಯಾತ್ರೆ ಮಾಡುತ್ತಿದೆ ಎಂದು ಸಿಎಂ ಡಿಕೆಶಿ ಕೇಳುತ್ತಾರೆ. ನಿಮ್ಮ ಸರ್ಕಾರದ ವೈಫಲ್ಯಗಳೇ ನಮ್ಮ ಪಾದಯಾತ್ರೆಗೆ ಕಾರಣ. ಡಿಕೆಶಿ ಅವರೇ, ಬಿಜೆಪಿ ಯಾಕೆ ಪಾದಯಾತ್ರೆ ಮಾಡುತ್ತಿದೆ ಎಂಬುದನ್ನು ಮೊದಲು ನಿಮ್ಮ ಸರ್ಕಾರದ ಕನ್ನಡಿಯಲ್ಲಿ ನೋಡಿ ಎಂದು ಲೇವಡಿ ಮಾಡಿದರು. ರಾಜ್ಯದ ಜನರ ಹಕ್ಕು, ನ್ಯಾಯ ಮತ್ತು ಭವಿಷ್ಯಕ್ಕಾಗಿ ನಾವು ಬೀದಿಗಿಳಿದಿದ್ದೇವೆ. ಭ್ರಷ್ಟಾಚಾರವನ್ನು ರಕ್ಷಿಸುವ ಸರ್ಕಾರವನ್ನು ಕಿತ್ತೊಗೆಯುವವರೆಗೂ ಬಿಜೆಪಿ ಹೋರಾಟ ನಿಲ್ಲಿಸುವುದಿಲ್ಲ ಎಂದು ಅವರು ವಾಗ್ದಾಳಿ ನಡೆಸಿದರು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣದ ದುರುಪಯೋಗದ ಗಂಭೀರ ಆರೋಪಗಳ ಹಿನ್ನೆಲೆಯಲ್ಲಿ ಸಚಿವರಾಗಿದ್ದ ನಾಗೇಂದ್ರ ಅವರ ರಾಜೀನಾಮೆ ಪಡೆಯಬೇಕಾಯಿತು. ಬಿಜೆಪಿ ಹೋರಾಟ ತೀವ್ರಗೊಳಿಸಿದ ಬಳಿಕ ಸರ್ಕಾರ ಆತುರಾತುರವಾಗಿ ರಾಜೀನಾಮೆ ಪಡೆಯುವ ಪರಿಸ್ಥಿತಿ ನಿರ್ಮಾಣವಾಯಿತು. ಇದು ಬಿಜೆಪಿ ಹೋರಾಟಕ್ಕೆ ಸಿಕ್ಕಿದ ಮೊದಲ ಹಂತದ ಜಯ ಎಂದು ಹೇಳಿದರು. ಈ ಪಾದಯಾತ್ರೆ ಕರ್ನಾಟಕದ ರಾಜಕೀಯ ಬದಲಾವಣೆಗೆ ಮುನ್ನುಡಿ ಬರೆಯಲಿದೆ. ಕಾಂಗ್ರೆಸ್ ಸರ್ಕಾರದ ಜನವಿರೋಧಿ ಆಡಳಿತವನ್ನು ಬುಡಸಮೇತ ಕಿತ್ತೊಗೆಯುವವರೆಗೂ ಬಿಜೆಪಿ ಹೋರಾಟ ಮುಂದುವರಿಸಲಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

### 10 ಅಭ್ಯರ್ಥಿಗಳು ಮಾಫಿಸಾಕ್ಷಿ

ನೀಡಲು ಪೈಪೋಟಿ ಶುರುವಾಗಿದೆ. ಪ್ರಕರಣದಲ್ಲಿ ಭಾಗಿಯಾದ ಎಲ್ಲ ಅಭ್ಯರ್ಥಿಗಳನ್ನು ಅಪ್ರೂವರ್ ಮಾಡಿಕೊಳ್ಳಬೇಕೇ ಅಥವಾ ಬೇಡವೇ ಎಂಬ ಗೊಂದಲದಲ್ಲಿ ಸಿಐಡಿ ಇದೆ. ಈ ಕುರಿತು ಕಾನೂನು ತಜ್ಞರ ಸಮಾಲೋಚನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಿದೆ.

### ಡೀಲ್ ಕುದುರಿಸಿದ್ದು ಕನ್ನಾಳಿ

ಪ್ರಿಂಟ್ ಆಗುವ ಮೊದಲೇ ಸುಮಾರು ಶೇ.60ರಷ್ಟು ಪ್ರಶ್ನೆಗಳನ್ನು ಬರೆದುಕೊಳ್ಳಲಾಗಿತ್ತು. ನಾವು ಬರೆದುಕೊಂಡಿದ್ದ ಪ್ರಶ್ನೆಗಳ ಸರಣಿಗೇ ನಾನು ಪ್ರಿಂಟ್ ಹಾಕಲು ಅಂತಿಮ ಒಪ್ಪಿಗೆ ನೀಡಿದ್ದೆ ಎಂದು ಹೇಳಿದ್ದಾರೆ. ಮತ್ತೊಂದೆಡೆ ಪ್ರಕರಣದಲ್ಲಿ ಭಾಗಿಯಾಗಿದ್ದ ಅಭ್ಯರ್ಥಿಗಳೇ ಸಾಕ್ಷಿಗಳಾಗಲು ಮುಂದಾಗಿದ್ದು ಕಿಂಗ್‌ಪಿನ್‌ಗಳಿಗೆ ಸಂಕಷ್ಟ ಎದುರಾಗಿದೆ.

### ಮಾಫಿ ಸಾಕ್ಷಿ ಪ್ರಶ್ನಿಸಿ ಹೈ ಮೊರೆ

ಅವರಿಗೆ ಸೆಷನ್ಸ್ ಕೋರ್ಟ್ ಈಗಾಗಲೇ ಸಮನ್ಸ್ ಜಾರಿ ಮಾಡಿದೆ. ಮಾಫಿ ಸಾಕ್ಷಿ ಸಂಬಂಧ ಸೆಷನ್ಸ್ ಕೋರ್ಟ್ ನೀಡಿರುವ ಆದೇಶಕ್ಕೆ ತಡೆ ನೀಡಬೇಕು, ಆ ಆದೇಶವನ್ನ ರದ್ದುಗೊಳಿಸಬೇಕು ಎಂದು ಕೋರಿದ್ದಾರೆ.

### ಸಿದ್ದರಾಮಯ್ಯ ಅಹಿಂದ ಸಮಾವೇಶ

ಸಮಾವೇಶದಲ್ಲಿ ಸಿದ್ದರಾಮಯ್ಯ ಸಂದೇಶವೇನು? ಏಕಕಾಲಕ್ಕೆ ಪಕ್ಷ ಮತ್ತು ಸರ್ಕಾರ ಅಚ್ಚರಿ ನೀಡಲಿದ್ದಾರೆಯೇ ಎಂಬ ಕುತೂಹಲ ಮೂಡಿದೆ.

### ರಾಜಕೀಯ ಪಾದಯಾತ್ರೆ: ಡಿಕೆಶಿ

ನಮ್ಮ ಪಾದಯಾತ್ರೆ ದೇಶ, ರಾಜ್ಯದ ಹಿತಕ್ಕಾಗಿ. ಅವರ ಯಾತ್ರೆ ರಾಜಕಾರಣಕ್ಕಾಗಿ ಎಂದರು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು. ಲಿಂಗಸುಗೂರಿನಿಂದ ಬಳ್ಳಾರಿವರೆಗೆ ಬಿಜೆಪಿ ರಾಜ್ಯ ಘಟಕದಿಂದ ಪಾದಯಾತ್ರೆ ಹಮ್ಮಿಕೊಂಡಿರುವ ಕುರಿತು ಪ್ರತಿಕ್ರಿಯಿಸಿದ ಸಿಎಂ ಅವರು, ತಮ್ಮ ತಪ್ಪಿಲ್ಲದಿದ್ದರೂ ಪಕ್ಷಕ್ಕೆ ಮುಜುಗರವಾಗಬಾರದು ಎಂಬ ಉದ್ದೇಶದಿಂದ ಬಿ.ನಾಗೇಂದ್ರ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ಪಕ್ಷಕ್ಕಾಗಿ ಸಚಿವ ಸ್ಥಾನ ತ್ಯಾಗ ಮಾಡಿದ್ದಾರೆ. ಅದಕ್ಕೆ ಎಲ್ಲಿ ಉತ್ತರ ಕೊಡಬೇಕೊ ಅಲ್ಲಿ ಕೊಡುತ್ತೇನೆ ಎಂದರು.

### ಗುಡುಗಿದ ಯಡಿಯೂರಪ್ಪ

ಕುಮಾರಸ್ವಾಮಿ ಸುಮ್ಮನೆ ಹೇಳುವುದಿಲ್ಲ. ಇದು ಸರ್ಕಾರದಲ್ಲೇ ಸಂಚಲನ ಮೂಡಿಸುವ ವಿಷಯ ಇರಬಹುದು. ಅವರ ಹೋರಾಟಕ್ಕೆ ನಾವು ಬೆಂಬಲ ನೀಡುತ್ತೇವೆ ಎಂದು ತಿಳಿಸಿದರು. ಕಹಳೆ ಊದುವ ಮೂಲಕ ಬಿ.ಎಸ್.ಯಡಿಯೂರಪ್ಪ, ವಿಜಯೇಂದ್ರ ಆರ್.ಅಶೋಕ್, ಶ್ರೀರಾಮುಲು ಹಾಗೂ ಛಲವಾದಿ ನಾರಾಯಣಸ್ವಾಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ತನ್ನ ಆಕ್ರೋಶವನ್ನ ಹೊರಹಾಕಲು ಮುಂದಾಗಿದೆ. ಸಂಸದರಾದ ಬಸವರಾಜ ಬೊಮ್ಮಾಯಿ, ಗೋವಿಂದ ಕಾರಜೋಳ, ಶ್ರೀರಾಮುಲು, ಜನಾರ್ದನ ರೆಡ್ಡಿ, ಜಗದೀಶ್ ಶೆಟ್ಟರ್, ಸಿ.ಟಿ ರವಿ ಇತರರು ಇದ್ದರು.

# ಪರ್ವಿಜ್ ಪಾಷ ಬಣಕ್ಕೆ ಜಯ

## ರೇಷ್ಮೆ ಸಹಕಾರ ಸಂಘದ ಚುನಾವಣೆ: ಪಾಷ ತಂಡದ 8 ನಿರ್ದೇಶಕರ ಆಯ್ಕೆ

ರಾಮನಗರ: ರೇಷ್ಮೆನೂಲು ಬಿಚ್ಚುವವರ ಮತ್ತು ನೇಕಾರರ ಕೈಗಾರಿಕಾ ಸಹಕಾರ ಸಂಘದ ನಿರ್ದೇಶಕ ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಪರ್ವಿಜ್ ಪಾಷ ಬಣದ 8 ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ. ಯುವ ರೀಲರ್‌ಗಳ ಸಂಘದ ಸೈಯದ್ ಅಕ್ಲಿಂ ತಂಡದ ಇಬ್ಬರು ನಿರ್ದೇಶಕರು ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ನಗರದ ನೀರಿನ ವೃತ್ತದಲ್ಲಿರುವ ಸರ್ಕಾರಿ ಉರ್ದು ಶಾಲೆಯಲ್ಲಿ ನಡೆದ ಚುನಾವಣೆಯಲ್ಲಿ ಸೊಸೈಟಿಯ 788 ಮತದಾರರ ಪೈಕಿ 571 ಮಂದಿ ಮತದಾನ ಚಲಾಯಿಸಿದರು. ಸಾಮಾನ್ಯ ವರ್ಗದ 46 ಮತಗಳು, ಬಿಸಿಎಂ ಎ ವರ್ಗದಲ್ಲಿ 78 ಮತಗಳು ತಿರಸ್ಕತವಾಗಿದ್ದವು. 6 ಸ್ಥಾನಗಳಲ್ಲಿ ತಮ್ಮ ಬೆಂಬಲಿತ ನಿರ್ದೇಶಕರನ್ನು ಗೆಲ್ಲಿಸಿ ಕೊಳ್ಳಲು ನಗರಸಭಾ ಸದಸ್ಯ ಅಕ್ಲೀಂ ಅಬ್ರಾರ್ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದ ನಿರ್ದೇಶಕ ಪರ್ವಿಜ್ ಪಾಷಾ ಬಣಗಳ ನಡುವೆ ತೀವ್ರ ಪೈಪೋಟಿ ನಡೆದಿತ್ತು.

### 6 ಸ್ಥಾನಗಳಿಗೆ ಆಯ್ಕೆಯಾದವರು

ಸಾಮಾನ್ಯ ವರ್ಗದಿಂದ ಯಾಸೀನ್ ಪಾಷ (313 ಮತಗಳು), ಮೊಹಮದ್ ಸಲಾವುದ್ದೀನ್ (292), ನಯಾಜ್ ಉಲ್ಲಾಖಾನ್ (273), ಫೈರೋಜ್ ಖಾನ್ (269), ಮಹಮದ್ ಷಫಿ ಅಹಮದ್ (264), ಬಿಸಿಎಂ "ಎ" ಮೀಸಲಿನಿಂದ ನಾಸಿರುದ್ದೀನ್ (254) ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಅಧಿಕಾರಿ ಮಂಜುನಾಥ್ ತಿಳಿಸಿದರು.

### 4 ಅವಿರೋಧ ಆಯ್ಕೆಯಾದವರು :



ಪರಿಶಿಷ್ಟ ಜಾತಿ ಮೀಸಲಿನಿಂದ ಶ್ರೀನಿವಾಸ್, ಅಸ್ಮದ್ (ಅಜ್ಜು), ಮಹಿಳಾ ವರ್ಗದಿಂದ ನೂರ್ ಸಾದಿಕ್ ಮತ್ತು ಆಯಿಷಾಖಾನಂ ಅವರುಗಳು ಅವಿರೋಧ ಆಯ್ಕೆಯಾಗಿದ್ದರು. ಪರಿಶಿಷ್ಟ ಪಂಗಡ ಒಂದು ಸ್ಥಾನ ಖಾಲಿ ಉಳಿದಿದೆ ಎಂದು ಚುನವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ಮಂಜುನಾಥ್ ಮಾಹಿತಿ ಕೊಟ್ಟಿದ್ದಾರೆ.

### ಎಲ್ಲರ ಸಹಕಾರದಲ್ಲಿ ಪ್ರಗತಿ

ಚುನಾವಣೆಯ ನಂತರ ಮಾಧ್ಯಮ ಪ್ರತಿನಿಧಿಗಳೊಡನೆ ಮಾತನಾಡಿದ ರಾಮನಗರ ಸಿಲ್ಕ್ ರೀಲರ್ಸ್ ಅಸೋಸಿಯೇಷನ್ ಅಧ್ಯಕ್ಷ ಪರ್ವಿಜ್ ಪಾಷ, ರೇಷ್ಮೆನೂಲು ಬಿಚ್ಚುವವರ ಮತ್ತು ನೇಕಾರರ ಕೈಗಾರಿಕಾ ಸಹಕಾರ ಸಂಘದ ಪ್ರಗತಿಗೆ ಆಯ್ಕೆಯಾದ ಎಲ್ಲರೂ ಬದ್ಧರಾಗಿದ್ದಾರೆ. ನಮ್ಮ ಹಕ್ಕು, ನಮ್ಮ ಸೊಸೈಟಿ ಘೋಷಣೆಯ ಅಡಿಯಲ್ಲಿ ನಮ್ಮ ತಂಡ ಚುನಾವಣೆ ಎದುರಿಸುತ್ತು. ನಮ್ಮ ತಂಡದ ಅಭ್ಯರ್ಥಿಗಳನ್ನು ಗೆಲ್ಲಿಸಿದ ಮತದಾರರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಸಂಘಕ್ಕೆ ಕಚೇರಿ, ರೀಲರ್ಸ್‌ಗಳಿಗೆ ಶೇ.5ರಷ್ಟು ರಲ್ಲಿ ಬಡ್ಡಿಸಾಲ, ರೀಲರ್ಸ್ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ನೆರವು, ಕೆಎಸ್‌ಐಸಿ ಮತ್ತು ಕೆಎಸ್‌ಎಂಬಿ ಮೂಲಕ ಸೊಸೈಟಿ ವಹಿವಾಟು ನಡೆಸಲು ಎಲ್ಲ ನಿರ್ದೇಶಕರ ಪರವಾಗಿ ತಾವು ಸಹ ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ಗೆಲವು ಸಾಧಿಸಿದ ಅಭ್ಯರ್ಥಿಗಳು ಮತ್ತು ಸಿಲ್ಕ್ ರೀಲರ್‌ಗಳ ಸಂಘದ ಪ್ರತಿನಿಧಿಗಳು ಹಾಜರಿದ್ದರು.

### ಅಭಿನಂದನೆ

ರಾಮನಗರ: ರೇಷ್ಮೆನೂಲು ಬಿಚ್ಚುವವರ ಮತ್ತು ನೇಕಾರರ ಕೈಗಾರಿಕಾ ಸಹಕಾರ ಸಂಘದ ಚುನಾ ವಣೆಯಲ್ಲಿ ಪ್ರಮುಖ ರೇಷ್ಮೆ ರೀಲರ್ ಆಗಿರುವ ಸೈಯದ್ ಸಲಾವುದ್ದೀನ್ ನಿರ್ದೇಶಕರಾಗಿ ಆಯ್ಕೆಯಾಗಿರುವುದಕ್ಕೆ ನಗರಸಭೆಯ ಮಾಜಿ ಅಧ್ಯಕ್ಷ ಆರಿಫ್ ಖುರೇಷಿ ಹಾಗು ಪತ್ರಕರ್ತ ಅಜಗರ್ ಆಲಿ ಬೇಗ್ ಸಂತಸ ವ್ಯಕ್ತಪಡಿಸಿದ್ದಾರೆ.

ನಗರದ ನೀರಿನ ಟ್ಯಾಂಕ್ ವೃತ್ತದ ಉರ್ದು ಸರ್ಕಾರಿ ಶಾಲೆಯಲ್ಲಿ ನಡೆದ ಚುನಾವಣಾ ಫಲಿ ತಾಂಶ ಘೋಷಣೆಯ ನಂತರ ಗೆಲುವು ಸಾಧಿ ಸಿದ ಸಲಾವುದ್ದಿನ್‌ರನ್ನು ಅಭಿನಂಧಿಸಿದ ನಂತರ ಮಾಧ್ಯಮ ಪ್ರತಿನಿಧಿಗಳ ಬಳಿ ಮಾತನಾಡಿದ ಆರಿಫ್ ಖುರೇಷಿ, ಸಲಾವುದ್ದೀನ್ ಸಂಘಟನೆಕಾರ, ಸಾಮಾಜಿಕವಾಗಿ ಗುರುತಿಸಿಕೊಂಡಿರುವ ವ್ಯಕ್ತಿ. ಪ್ರಗತಿಯತ್ತ ಬದಲಾವಣೆ ಬಯಸುವ ಸಲಾವುದ್ದೀನ್ ಸಹಕಾರ ಸಂಘಕ್ಕೆ ಆಯ್ಕೆಯಾಗಿದ್ದು, ಭವಿಷ್ಯದಲ್ಲಿ ಸಹಕಾರ ಸಂಘದ ಆಡಳಿತದಲ್ಲಿ ಬಿಗಿ, ಹೊಸತನವನ್ನು ರೂಡಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಅಜಗರ್ ಆಲಿ ಬೇಗ್ ದನಿಗೂಡಿಸಿದರು.



## ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್ ಅಭಿಮತ

# ದೇಶಕಟ್ಟಲು ಕಾಂಗ್ರೆಸ್ ಪಕ್ಷದ ಅವಶ್ಯಕತೆಯಿದೆ

ಮೈಸೂರು: ಈ ದೇಶದಲ್ಲಿ ಬಿಜೆಪಿ, ಸಂಘ ಪರಿವಾರದಿಂದ ತಾಕತ್ ಯಾರಿಗೂ ಇಲ್ಲ. ಅದೇನಾದರೂ ಇದ್ದರೆ ಅದು ಕಾಂಗ್ರೆಸ್ ಗೆ ಮಾತ್ರ. ಹೀಗಾಗಿ ಈ ದೇಶಕ್ಕೆ ಕಾಂಗ್ರೆಸ್ ಪಕ್ಷ ಬೇಕಾಗಿದೆ. ಸುಳ್ಳಿನ ಆಧಾರ್ ಮೇಲೆ ದೇಶವನ್ನು ಕಟ್ಟಿ ಸಮಾಜವನ್ನು ಒಡೆದು ಛಿದ್ರ ಮಾಡಿ ಎಲ್ಲಾ ಸಹಭಾಳ್ವೆ ಮುಗಿಸಿ ದ್ವೇಷದ ಬೀಜ ಬಿತ್ತುವ ಒಡೆದಾಡುವ ವಾತಾವರಣ ನಿರ್ಮಾಣದ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡಲು ನಾವೆಲ್ಲಾ ಒಗ್ಗಟಾಗಿ ಮಾಡಬೇಕಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ರಿಜ್ವಾನ್ ಅರ್ಷದ್ ಹೇಳಿದರು.

ನಗರ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಸತ್ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆಯಂತಹ ಸುದೀರ್ಘ ನಾಯಕನಿಗೆ ಉತ್ತರಖಂಡದಲ್ಲಿನಡೆಸಿದ ಅವಮಾನ ಗಮನಿಸಿದರೆ ಸಂವಿಧಾನ, ಮನುಷ್ಯತ್ವಕ್ಕೆ ಕಿಮ್ಮತ್ತು ಎಲ್ಲಿದೆ. ಸಾಮಾನ್ಯ, ದಲಿತರು ಬಿಜೆಪಿ, ಆರ್ ಎಸ್ ಎಸ್ ಇರುವವರೆಗೂ ಗೌರವದಿಂದ ಬದುಕಲು ಸಾದ್ಯವಿಲ್ಲ. ರೈತರು, ಯುವಕರು, ಮಹಿಳೆಯರ ಮೇಲೆ ಬಿಜೆಪಿಯವರಿಗೆ ಗೌರವ ಇಲ್ಲ. ರಾಹುಲ್ ಗಾಂಧಿಯವರು ಸಂವಿಧಾನದ ಪ್ರಕಾರ ಘಟನೆಗೆ ಕಾರಣರಾದವರ ವಿರುದ್ಧ ಎಫ್ ಐಆರ್ ದಾಖಲಿಗೆ ಆಗ್ರಹಿಸಿದರೆ ಅವರ ಮೇಲೆ ಪ್ರಕರಣ ದಾಖಲಿಸಿದ್ದಾರೆ. ಹೀಗೆ ಮಾಡಿದರೆ ದೇಶದ ಎಲ್ಲಾ ಜೈಲುಗಳಿಗೂ ಕಾಂಗ್ರೆಸ್ ಕಾರ್ಯಕರ್ತರು ಹೋಗಲು ಸಿದ್ದರಾಗಿ ಸಂವಿಧಾನ ಉಳಿಸಲು ಹೋರಾಟ ಮಾಡೇ ಮಾಡುತ್ತೇವೆಂದರು.

ಮೈಸೂರಿನಲ್ಲಿ ಉಸಿರಾಟ, ಒಡನಾಟವಿದೆ. ವಿಶೇಷವಾಗಿ ಹೃದಯದ ಅಂತರಾಳದಿಂದ ನಗರದ ಸೇವೆ ಮಾಡುತ್ತೇನೆ. ಶಿವಾಜಿ ನಗರದ ಕ್ಷೇತ್ರದ ಜನ ನನಗೆ ಪ್ರೀತಿ, ಗೌರವಕೊಟ್ಟು ಶಾಸಕನಾಗಿ ಮಾಡಿದ್ದಾರೆ. ಆ ಜನರ ಉಪಕಾರ ಮರೆಯುವಂತಿಲ್ಲ. ಆದರೂ ನಿಮ್ಮ ಮನೆ ಮಗನೆಂದೂ ಸ್ವಾಗತಿಸಿದ್ದಿರಿ. ಕಾಂಗ್ರೆಸ್ ಕಟ್ಟಬೇಕಾದರೆ ನಾವೆಲ್ಲ ಒಂದಾಗಬೇಕಾಗುತ್ತದೆ. ನಾನು ಈ ಹುದ್ದೆಗೇರಲು ರಾಹುಲ್ ಗಾಂಧಿ ಆಶೀರ್ವಾದ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸಹ ಬೆಂಬಲ ನೀಡಿದ್ದಾರೆ. ಇಲ್ಲಿಯವರೇ ಆಗಿ ಎರಡು ಬಾರಿ ಮುಖ್ಯಮಂತ್ರಿ ಆದ ಸಿದ್ದರಾಮಯ್ಯರನ್ನು ಅನ್ನರಾಮಯ್ಯ ಎಂದು ಕರೆದಿದ್ದರು. ಅದೇ ಖಾತೆ ನನಗೆ ಸಿಕ್ಕಿರುವುದು ನನ್ನ ಸೌಭಾಗ್ಯ ಎಂದರು. ಕಾರ್ಯಕ್ರಮಲ್ಲಿ ಶಾಸಕ ಕೆ.ಹರೀಶ್ ಗೌಡ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ನರೇಂದ್ರ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಮಾಜಿ ಶಾಸಕ ಭಾರತಿ ಶಂಕರ್, ಮಾಜಿ ಮೇಯರ್‌ಗಳಾದ ಹಾರೀಫ್ ಹುಸೇನ್, ಅಯೂಬ್‌ಖಾನ್, ಪುಷ್ಪಲತಾ ಜಗನ್ನಾಥ್, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ ಸೇರಿ ಇತರರ ಹಾಜರಿದ್ದರು.



### ತಿಂಗಳಿಗೊಮ್ಮೆ ಬರುತ್ತೇನೆ: ರಿಜ್ವಾನ್

**ಮೈಸೂರು:** ಚಿಕ್ಕ ಹುಡುಗನಿಂದ ನೋಡಿದ್ದೀರಾ? ಸಚಿವನಾದ ನಂತರ ಮೊದಲ ಬಾರಿಗೆ ಮೈಸೂರಿಗೆ ಬಂದಿದ್ದೇನೆ. ಅಪೇಕ್ಷಿಗಿಂತ ಹೆಚ್ಚಾಗಿ ಪ್ರೀತಿ, ವಿಶ್ವಾಸ ಬಾಂದವ್ಯವನ್ನು ಮೆರವಣಿಗೆಯಲ್ಲಿ ನೋಡಿಕೊಂಡು ಬಂದಿದ್ದೇನೆ. ಮೈಸೂರಿಗೆ ಬಂದ ಬಳಿಕ ಏನೋ ಆಗಿದ್ದೇನೆ ಎಂದೆನಿಸಿತು. ತಿಂಗಳಿಗೊಮ್ಮೆ ಮೈಸೂರಿಗೆ ಆಗಮಿಸಿ ನಗರದ ಅಭಿವದ್ಧಿಗೆ ಶ್ರಮಿಸುತ್ತೇನೆಂದು ರಿಜ್ವಾನ್ ಹರ್ಷದ್ ಹೇಳಿದರು.

ಮೈಸೂರು ಬೆಂಗಳೂರು ಮುಖ್ಯರಸ್ತೆಯ ಮಣಿಪಾಲ್ ಆಸ್ಪತ್ರೆ, ಟಿಪ್ಪು ವೃತ್ತ, ಸಂಡೇ ರಸ್ತೆ, ಮಿಷನ್ ಆಸ್ಪತ್ರೆ ವೃತ್ತ, ಬಂಬೂ ಬಜಾರ್ ವೃತ್ತ, ರೈಲ್ವೆ ನಿಲ್ದಾಣ ರಸ್ತೆ ಮೂಲಕ ಕಾಂಗ್ರೆಸ್ ಕಚೇರಿಗೆ ಅದ್ದೂರಿ ಮೆರವಣಿಗೆಯಲ್ಲಿ ಕರೆತಂದರು. ಮೆರವಣಿಗೆ ಯುದ್ಧಕ್ಕೂ ಆರಕ್ಕೂ ಹೆಚ್ಚು ಬೃಹತ್ ಹಾರಗಳನ್ನು ಅಭಿಮಾನಿಗಳು ಹಾಕಿ ಅನೇಕ ಕಡೆಗಳಲ್ಲಿ ಹೂ ಮಳೆ ಸುರಿಸಿದರು. ಪ್ರಾರಂಭದಲ್ಲೇ 10ರೂ. ನೋಟುಗಳನ್ನು ಸಹ ಎಸೆದು ಗಮನ ಸೆಳೆದರು. ಈ ಕುರಿತು ಮಾತನಾಡಿದ ಅವರ, ಎನ್ ಎಸ್ ಯುಐ ಕಾರ್ಯಕರ್ತನಾಗಿದ್ದ ನಾನು ರಾಜ್ಯ ಸರ್ಕಾರದ ಸಚಿವನಾದ ಬಳಿಕ ನಿಮ್ಮ ಪ್ರೀತಿ, ವಿಶ್ವಾಸ ಇಷ್ಟೊಂದು ದೊಡ್ಡ ಮಟ್ಟದಲ್ಲಿ ತೋರಿಸಿದ್ದಿರಿ. ಈ ಉಪಕಾರ ಎಂದಿಗೂ ಮರೆಯಲೂ ಸಾಧ್ಯವಿಲ್ಲ. ಕಾಂಗ್ರೆಸ್ ನಲ್ಲಿ ನಿಷ್ಠೆಯಿಂದ ಕಷ್ಟಪಟ್ಟು ಪಕ್ಷ ಕಟ್ಟಿದರೆ ನಿಮ್ಮ ಹಿನ್ನೆಲೆ, ಜಾತಿ, ಧರ್ಮ ಯಾವುದೇ ಇದ್ದರೂ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂಬುದಕ್ಕೆ ನಾನು ಉದಾಹರಣೆಯಾಗಿದ್ದೇನೆ. ಹಿಂದೆ ಮೈಸೂರು ಸ್ಟೂಡೆಂಟ್ ಆಕ್ಷಿಡೆಂಟ್ ಕಮಿಟಿ ಮಾಡಿಕೊಂಡಿದ್ದೇವೆ. ಎಬಿವಿಪಿ ವಿರುದ್ಧ ಚುನಾವಣೆ ಮಾಡಿದ್ದೇವೆ. ಕೇರಳದಿಂದ ಕಾಶ್ಮೀರದವರೆಗೂ ಕಾಂಗ್ರೆಸ್ ಹೈಕಮಾಂಡ್ ಕೆಲಸ ಹಾಕಿದರೆ ಆ ಕೆಲಸ ಮಾಡಿದ್ದೇನೆ. ಈ ಅವಕಾಶ ಸಿಗದಿದ್ದರೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ. ಪಕ್ಷ ನಿಷ್ಠೆಯಿಂದ 28 ವರ್ಷದ ಬಳಿಕ ಇಲ್ಲಿಗೆ ಬಂದು ನಿಂತಿದ್ದೇನೆಂದು ಸ್ಮರಿಸಿದರು. ಇದಕ್ಕೂ ಮುನ್ನ ಶಾಸಕ ತನ್ವೀರ್ ಸೇಠ್ ನಿವಾಸಕ್ಕೆ ತೆರಳಿ ಸೌಹಾರ್ದಯುತ ಭೇಟಿ ಮಾಡಿ ಮಾತುಕತೆ ನಡೆಸಿದರು.

### ಪರಿಶೀಲಿಸಿ ನಕಲಿ ಬಿಪಿಎಲ್ ಕಾರ್ಡ್ ರದ್ದು: ರಿಜ್ವಾನ್ ಹರ್ಷದ್

ಮೈಸೂರು: ಮುಂದಿನ ಆರು ತಿಂಗಳು ಪಡಿತರ ಪರಿಶೀಲಿಸಿ ನಕಲಿ ಬಿಪಿಎಲ್ ಕಾರ್ಡ್ ರದ್ದು ಮಾಡುತ್ತೇವೆ. ಈ ಬಗ್ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರೊಂದಿಗೆ ಚರ್ಚಿಸಿ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಈಗ ಅಧಿಕಾರ ವಹಿಸಿಕೊಂಡಿದ್ದೇನೆ. ಇಲಾಖೆಯಲ್ಲಿ ಹಲವು ಸಮಸ್ಯೆ ಇದೆ. ರಾಜ್ಯದ 4 ಕೋಟಿ ಜನ ನಮ್ಮ ಇಲಾಖೆಯ ಅಧೀನದಲ್ಲಿ ಬರುತ್ತಾರೆ. ಬಡವರಿಗೆ ತೊಂದರೆಯಾಗದಂತೆ ಕ್ರಮ ವಹಿಸುತ್ತೇವೆ. ಹೀಗಾಗಿ ಹೊಸ ಪಡಿತರ ಸಹ ಅರ್ಹರಿಗೆ ನೀಡಬೇಕು. ಅನರ್ಹರಿಂದ ಪಡಿತರ ಕಡಿತಗೊಳಿಸಬೇಕು. ಈಗಿನ ಬೆಲೆ ಏರಿಕೆ ಹಿನ್ನೆಲೆಯಲ್ಲಿ ವಾರ್ಷಿಕ ಆದಾಯದ ಮಿತಿ ಏರಿಕೆ ಮಾಡಬೇಕಿದೆ. ಹೀಗೆ ಅನೇಕ ಅಂಶಗಳನ್ನು ಆಧರಿಸಿ ಮುಂದಿನ ಆರು ತಿಂಗಳಲ್ಲಿ ಪರಾಮರ್ಶೆ ಮಾಡಿ ಪಡಿತರಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗುವುದು. ಸದ್ಯಕ್ಕೆ ಯಾವುದೇ ಕಾರ್ಡ್ ರದ್ದುಗೊಳಿಸದಂತೆ ಇಲಾಖೆಯ ಎಲ್ಲರಿಗೂ ಸೂಚಿಸಲಾಗಿದೆ ಎಂದರು.

ಮುಸ್ಲಿಂ ಧರ್ಮ ಶ್ರೇಷ್ಠ ಧರ್ಮ ಎಂಬ ಸಚಿವ ಬಸವರಾಜ್ ರಾಯರೆಡ್ಡಿ ಹೇಳಿಕೆ ಪ್ರತಿಕ್ರಿಯಿಸಿ, ನಾನು ಒಬ್ಬ ಮುಸ್ಲಿಂ ಸಮುದಾಯದವನು ಹಿಂದೂ ಸಮುದಾಯದ ವ್ಯಕ್ತಿ ಕಾರ್ಯಕ್ರಮಕ್ಕೆ ಬರುತ್ತಾರೆ. ಸಮುದಾಯದ ವಿಶ್ವಾಸಕ್ಕೆ ಒಂದು ಮಾತನಾಡುತ್ತಾರೆ. ಅದನ್ನು ರಾಜಕೀಯ ಮಾಡಬೇಕಾ? ಯಾರೂ ಬೇರೆ ಧರ್ಮವನ್ನು ಹೊಗಳಬಾರದೇ? ನಾನು ಚಾಮುಂಡಿ ಬೆಟ್ಟಕ್ಕೆ ಹೋಗುತ್ತಿದ್ದೇನೆ. ಬಿಜೆಪಿಯವರಿಗೆ ಹಿಂದೂ, ಮುಸ್ಲಿಂ ಎಂಬ ಧರ್ಮದ ಅಜೆಂಡ ಬಿಟ್ಟರೆ, ಬರ, ರೈತರ ಸಮಸ್ಯೆ ಹಾಗೂ ಬೆಲೆ ಏರಿಕೆ ಅಂತಹ ಯಾವುದೇ ವಿಚಾರ ಇಟ್ಟುಕೊಂಡು ಅವರು ಮಾತನಾಡಲು ಹೋಗುವುದಿಲ್ಲ. ಬಿಜೆಪಿಯವರು ಆಧಾರ ರಹಿತ ಪಾದಯಾತ್ರೆ ಮಾಡುತ್ತಿದ್ದಾರೆ. ತಪ್ಪು ಮಾಡಿರುವವರು ಜೈಲಿನಲ್ಲಿದ್ದಾರೆ. ಎಲ್ಲಾ ಹಣ ವಾಪಸ್ಸು ಬಂದಿದೆ. ಕೋಟ್ಯಾಂತರ ಹಣ ವರ್ಗಾವಣೆ ಅದರೆ ಅದಕ್ಕೆ ಕೇಂದ್ರದ ಸರ್ಕಾರವು ಹೊಣೆ. ಹಾಗಾದರೆ ಬಿಜೆಪಿ ಕೇಂದ್ರ ಸರ್ಕಾರದ ವಿರುದ್ಧವೂ ಪ್ರತಿಭಟನೆ ಮಾಡುತ್ತಾರಾ? ನಾಗೇಂದ್ರ ರಾಜೀನಾಮೆ ಸ್ವಯಂಪ್ರೇರಿತ ರಾಜೀನಾಮೆ ನೀಡಿದ್ದಾರೆ ಎಂದರು. ಕೆಪಿಎಸ್ಸಿ ಹಗರಣ ರಾಜ್ಯಪಾಲರ ಬಳಿ ಪ್ರಾಸಿಕ್ಯೂಶನ್ ವಿಚಾರಣೆ ಬಾಕಿ ಇದೆ. ಅದರ ಬಗ್ಗೆಯೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸೇರಿ ಯಾರಾದರೂ ಮಾತನಾಡಿದ್ದಾರಾ ಎಂದರು.

# ದ್ವೇಷ ರಾಜಕಾರಣಕ್ಕೆ ಖಂಡನೆ

## ರಾಹುಲ್ ಗಾಂಧಿ ವಿರುದ್ಧ ಎಫ್ಐಆರ್: ಕೇಂದ್ರದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ




ಚಾಮರಾಜನಗರ: ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರ ಮೇಲೆ ಕೇಂದ್ರ ಬಿಜೆಪಿ ಸರ್ಕಾರವು ದುರುದ್ದೇಶಪೂರಿತ ಎಫ್ಐಆರ್ ದಾಖಲಿಸಿರುವುದನ್ನು ಖಂಡಿಸಿ ಕಾಂಗ್ರೆಸ್ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ನಗರದ ಚಾಮರಾಜೇಶ್ವರ ದೇವಸ್ಥಾನದ ಮುಂಭಾಗದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಮಹಮ್ಮದ್ ಅಸ್ಗರ್, ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ, ಜಿಲ್ಲಾ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಕೆಂಗಾಕಿ ನಾಗರತ್ನ ಅವರ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಎಪಿಎಂಸಿ ಮಾಜಿ ಅಧ್ಯಕ್ಷ ನಾಗೇಂದ್ರ ಭೋಗಾಪುರ, ಮುಖಂಡ ಮಹೇಶ್ ಕುದರ್, ಚೇತನ್, ಕೆಡಿಪಿ ಸದಸ್ಯರಾದ ಮುಸಾಹಿಬ್, ಶ್ರೀನಿವಾಸ, ನಗರಸಭಾ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷ ನಾಗೇಂದ್ರ, ಮಾಧ್ಯಮ ಕಾರ್ಯದರ್ಶಿ ರಾಜೇಶ್ ಗೌಡಹಳ್ಳಿ, ಶ್ರೀನಿವಾಸ್, ಅಕ್ಷಯ್, ನವೀನ್, ಶಕುಂತಲಾ, ಉಲ್ಲಾಸ್, ರೂಪೇಶ್, ಪುಟ್ಟಸ್ವಾಮಿ, ಪ್ರಸನ್ನ, ಮನೋಜ್, ಮಧು, ಪ್ರಧೀಪ್, ಆನಂತ್, ಕುಮಾರ್, ಮಹಾದೇವಸ್ವಾಮಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ, ಬ್ಲಾಕ್ ಕಾಂಗ್ರೆಸ್, ಯುವ ಕಾಂಗ್ರೆಸ್ ಪದಾಧಿಕಾರಿಗಳು ಭಾಗವಹಿಸಿದ್ದರು.

### ಬಿಜೆಪಿ ವಿರುದ್ಧ ಪಿ.ಮರಿಸ್ವಾಮಿ ವಾಗ್ದಾಳಿ.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಕಾಡಾಧ್ಯಕ್ಷರಾದ ಪಿ. ಮರಿಸ್ವಾಮಿ ಮಾತನಾಡಿ, ಉತ್ತರಾಖಂಡದ ಹಲ್ದ್ವಾನಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಾರ್ವಜನಿಕ ಸಭೆಯ ನಂತರ ನಡೆದ ವೇದಿಕೆ 'ಶುದ್ಧೀಕರಣ' ವಿವಾದ ಹಾಗೂ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ದಾಖಲಿಸಲಾದ ಎಫ್ಐಆರ್ ಖಂಡಿಸಿ ಕಾಂಗ್ರೆಸ್ ಪಕ್ಷವು ದೇಶಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಿದ್ದು, ಅದರಂತೆ ಜಿಲ್ಲೆಯಲ್ಲಿಯೂ ಪ್ರತಿಭಟನೆ ಮಾಡಲಾಗಿದೆ ಎಂದರು. ವೇದಿಕೆಯನ್ನು ಬಿಜೆಪಿ ಕಾರ್ಯಕರ್ತರು ಶುದ್ಧೀಕರಣ ಮಾಡಿದ ಕೃತ್ಯವನ್ನು ಖಂಡಿಸಿದ್ದ ರಾಹುಲ್ ಗಾಂಧಿ, ಇದು ದಲಿತರಿಗೆ ಮಾಡಿದ ಅವಮಾನ ಹಾಗೂ ಅಸ್ಪೃಶ್ಯತೆಯ ಮನಸ್ಥಿತಿ ಎಂದು ಆರೋಪಿಸಿದ್ದರು. ಕೃತ್ಯ ಎಸಗಿದವರ ಮೇಲೆ ಎಫ್ಐಆರ್ ದಾಖಲಿಸುವಂತೆ ಆಗ್ರಹಿಸಿದ ಅವರ ವಿರುದ್ಧವೇ ಇದೀಗ ಎಫ್ಐಆರ್ ಹಾಕಿರುವುದು ನಾಚಿಗೇಡಿನ ಸಂಗತಿಯಾಗಿದೆ. ಅನ್ಯಾಯ ಮಾಡಿದವರ ಮೇಲೆ ಕೇಸ್ ಹಾಕುವ ಬದಲು ನ್ಯಾಯ ಕೇಳಲು ಹೋದವರ ಮೇಲೆ ಎಫ್ಐಆರ್ ಹಾಕಿರುವ ಕೇಂದ್ರ ಸರ್ಕಾರ ಸೇಡಿನ ರಾಜಕಾರಣ ಮಾಡುತ್ತಿದೆ. ಇಂತಹ ಗೂಂಡಾ ನೀತಿ ಅನುಸರಿಸುತ್ತಿರುವ ಕೇಂದ್ರ ಸರ್ಕಾರ ತೊಲಗಬೇಕು ಎಂದು ಅವರು ಕಿಡಿಕಾರಿದರು.

### ಸಂವಿಧಾನದ ಮೇಲಿನ ದಾಳಿ: ಯೋಗೇಂದ್ರ

ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಯೋಗೇಂದ್ರ ಮಾತನಾಡಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭೇಟಿ ನೀಡಿದ ಸ್ಥಳ ಶುದ್ಧೀಕರಿಸಿದ್ದವರಿಗೆ ಶಿಕ್ಷಿಸಬೇಕು ಎಂದು ಹೇಳಿದ್ದ ರಾಹುಲ್ ಗಾಂಧಿ ವಿರುದ್ಧ ಉತ್ತರಾಖಂಡ ಪೊಲೀಸರು ಎಫ್ಐಆರ್ ದಾಖಲಿಸಿರುವುದು ಪ್ರಜಾಪ್ರಭುತ್ವ, ಸಂವಿಧಾನ ಮತ್ತು ಸಾಮಾಜಿಕ ನ್ಯಾಯದ ಮೇಲೆ ನಡೆದಿರುವ ಗಂಭೀರ ದಾಳಿಯಾಗಿದೆ. ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಧ್ವನಿ ಎತ್ತಿದ ನಾಯಕರನ್ನೇ ಪ್ರಕರಣದಲ್ಲಿ ಸಿಲುಕಿಸುವ ಮೂಲಕ ಬಿಜೆಪಿ ಸರ್ಕಾರ ತನ್ನ ನಿಜವಾದ ಮನಸ್ಥಿತಿಯನ್ನು ಬಹಿರಂಗಪಡಿಸಿದೆ. ಉತ್ತರಾಖಂಡ ಸರ್ಕಾರವು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ಕೆಲಸ ಮಾಡುತ್ತಿದೆ ಎಂದು ಗಂಭೀರವಾಗಿ ಆರೋಪಿಸಿದರು.

## ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಕ್ರೀಡೆಗೂ ಒತ್ತು ಕೊಡಿ

ಪಿ.ವೃಷಬೇಂದ್ರಪ್ಪ ಹೇಳಿಕೆ

ಹರದನಹಳ್ಳಿ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ/ಪ್ರೌಢಶಾಲಾ ಕ್ರೀಡಾಕೂಟ ಚಾಲನೆ



ಚಾಮರಾಜನಗರ: ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡೆಗೂ ಒತ್ತು ನೀಡಬೇಕು ಎಂದು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿ.ಪಂ, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಶಾಲಾ ಶಿಕ್ಷಣ ಇಲಾಖೆ ವತಿಯಿಂದ 14 ವರ್ಷ ವಯೋಮಿತಿಯ ಬಾಲಕ, ಬಾಲಕಿಯರ ಹರದನಹಳ್ಳಿ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ/ಪ್ರೌಢಶಾಲಾ ಕ್ರೀಡಾಕೂಟಕ್ಕೆ ಗುಂಡು ಎಸೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು. ಶಿಕ್ಷಣದ ಜೊತೆಗೆ ಕ್ರೀಡೆಗೂ ಸಮಾನ ಮಹತ್ವ ನೀಡುವುದು ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಗೆ ಅತ್ಯಂತ ಅಗತ್ಯವಾಗಿದೆ. ಅಕ್ಷರ ಕಲಿಕೆ ನಮ್ಮ ಬುದ್ಧಿಶಕ್ತಿಯನ್ನು ಚುರುಕುಗೊಳಿಸಿದರೆ, ಕ್ರೀಡೆಗಳು ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಗಟ್ಟಿಗೊಳಿಸುತ್ತವೆ ಎಂದರು. ಹರದನಹಳ್ಳಿ ಹೋಬಳಿ ಶಾಲಾ ಮಕ್ಕಳು ತಾಲೂಕು, ಜಿಲ್ಲೆ, ರಾಜ್ಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿ ಹರದನಹಳ್ಳಿ ಹೋಬಳಿ, ಜಿಲ್ಲೆಗೆ ಕೀರ್ತಿ ತಂದು ಕೊಡಬೇಕು ಎಂದು ಹೇಳಿದರು

ಅಧ್ಯಕ್ಷತೆ ವಹಿಸಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಮಾತನಾಡಿ. ಕ್ರೀಡೆಯು ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಅತ್ಯಗತ್ಯವಾಗಿದೆ. ಇದು ಕೇವಲ ಪಠ್ಯಪುಸ್ತಕಗಳ ಜ್ಞಾನದಿಂದ ವ್ಯಕ್ತಿತ್ವದ ಸಂಪೂರ್ಣ ವಿಕಸನ ಸಾಧ್ಯವಿಲ್ಲ; ಅದಕ್ಕೆ ಕ್ರೀಡೆಯೂ ಪೂರಕವಾಗಿರಬೇಕು ಎಂದರು.

ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಾದೇವಸ್ವಾಮಿ ಕ್ರೀಡಾಜ್ಯೋತಿ ಸ್ವೀಕರಿಸಿ ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಬಸವರಾಜು, ಪ್ರಾಥಮಿಕ ಶಿಕ್ಷಕರ ಸಂಘದ ಸಂಘಟನಾ ಕಾರ್ಯದರ್ಶಿ ಶ್ವೇತ, ಸದಸ್ಯ ಸಿ.ಮಲ್ಲಿಕಾರ್ಜುನ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸದಸ್ಯ ಮಹಾದೇವಸ್ವಾಮಿ,ಗ್ರೇಡ್ 2 ದೈಹಿಕ ಶಿಕ್ಷಕ ಶಿಕ್ಷಕರ ಸಂಘದ ಅಧ್ಯಕ್ಷ ಚಿಕ್ಕಬಸವಯ್ಯ, ಕಾರ್ಯದರ್ಶಿ ಕುಮಾರಸ್ವಾಮಿ, ಸಿಆರ್ ಪಿ ಗುರುಸ್ವಾಮಿ, ಶಿವನಂಜಯ್ಯ, ಮಹಾದೇವಸ್ವಾಮಿ, ಹಿರಿಯ ಮುಖ್ಯ ಶಿಕ್ಷಕ ಹರದನಹಳ್ಳಿ ನಟರಾಜು, ಹಿರಿಯ ದೈಹಿಕ ಶಿಕ್ಷಣ ಶಿಕ್ಷಕ ಡಿ.ಶೇಖರ್, ದೊಡ್ಡರಾಜು ಹಾಗೂ ಶಾಲಾ ಮಕ್ಕಳು ಭಾಗವಹಿಸಿದ್ದರು.

## ಯಕ್ಷಗಾನ ಉಳಿಸಿ ಬೆಳೆಸುವ ಜವಾಬ್ದಾರಿ ಯುವಜನಾಂಗದ ಮೇಲಿದೆ

ಡಾ. ರಾಜಶೇಖರ ಐತಾಳ್




ಗುಂಡ್ಲುಪೇಟೆ :- ನಾಡಿನ ಸಂಸ್ಕೃತಿ, ಧಾರ್ಮಿಕ ಆಚರಣೆ ಹಾಗೂ ಭಕ್ತಿ ಪರಾಕಾಷ್ಠೆಯನ್ನು ಪ್ರತಿಬಿಂಬಿಸುವ ತುಳುನಾಡಿನ ಯಕ್ಷಗಾನ ಕಲೆಯನ್ನು ಇಂದಿನ ಯುವಜನಾಂಗ ಪ್ರೋತ್ಸಾಹಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೂ ಉಳಿಸಿ ಬೆಳೆಸುವ ಕಾರ್ಯ ಮಾಡಬೇಕಾಗಿದೆ ಎಂದು ಪಟ್ಟಣದ ಹಿರಿಯ ಖಾಸಗಿ ವೈದ್ಯ ಡಾ. ರಾಜಶೇಖರ ಐತಾಳ್ ಅಭಿಪ್ರಾಯಪಟ್ಟರು.

ಪಟ್ಟಣದ ಹಳೇ ಬಸ್ ನಿಲ್ದಾಣದ ರಂಗಮಂದಿರದಲ್ಲಿ ಮಂಗಳೂರು ಜನಾಂಗದ ಒಕ್ಕೂಟದ ವತಿಯಿಂದ ಧರ್ಮಸ್ಥಳದ ಶ್ರೀ ಮಹಾಗಣಪತಿ ಯಕ್ಷಗಾನ ಮಂಡಳಿ, ನಿಡ್ಲೆ ಇವರ ಕಲಾವಿದರ ಕೂಡುವಿಕೆಯಲ್ಲಿ ಆಯೋಜಿಸಿದ್ದ 'ಮಹಿಷಾಸುರ ಮರ್ದಿನಿ' (ದೇವಿ ಮಹಾತ್ಮೆ ಭಾಗ?1) ಯಕ್ಷಗಾನ ಬಯಲಾಟವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಯಾಂತ್ರಿಕ ಜೀವನಶೈಲಿಯಲ್ಲಿ ಯುವ ಸಮುದಾಯವು ಯಕ್ಷಗಾನ ಹಾಗೂ ಬಯಲಾಟಗಳ ಮೂಲಕ ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಾರುವ ಕಲಾ ಪ್ರದರ್ಶನಗಳನ್ನು ವೀಕ್ಷಿಸುವುದರ ಜೊತೆಗೆ ಅವುಗಳ ಉಳಿವಿಗೆ ಕೈಜೋಡಿಸಬೇಕು. ಇದರಿಂದ ಮುಂದಿನ ಪೀಳಿಗೆಗೆ ಯಕ್ಷಗಾನದ ಮಹತ್ವ ಹಾಗೂ ಅದರಲ್ಲಿರುವ ಧಾರ್ಮಿಕ, ಸಾಂಸ್ಕೃತಿಕ ಸಂದೇಶಗಳನ್ನು ತಿಳಿದುಕೊಳ್ಳಲು ಹಾಗೂ ಕಲಿಯಲು ಸಾಧ್ಯವಾಗಲಿದೆ ಎಂದರು.

ಗುಂಡ್ಲುಪೇಟೆ ಪಟ್ಟಣದಲ್ಲಿ ಕಳೆದ ಹಲವು ವರ್ಷಗಳಿಂದ ತುಳುನಾಡಿನ ಜನಾಂಗದ ಸಹಕಾರದೊಂದಿಗೆ ಯಕ್ಷಗಾನ ಕಾರ್ಯಕ್ರಮಗಳನ್ನು ಆಯೋಜಿಸಿಕೊಂಡು ಬರುವ ಮೂಲಕ ಪಟ್ಟಣದ ಜನತೆಗೆ ಉತ್ತಮ ಮನರಂಜನೆ ಹಾಗೂ ಸಾಂಸ್ಕೃತಿಕ ಅನುಭವ ನೀಡಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀನಿವಾಸ್ ರಾವ್, ಪ್ರವೀಣ್ ಶೆಟ್ಟಿ, ಸುಜೀಂದ್ರ ವೈದ್ಯ, ಬಿ. ನರಸಿಂಹ, ಸುರೇಶ್ ಕುಮಾರ್, ರಮೇಶ್ ಮೇಷ್ಟ್ರು, ಎಸ್. ಗೋವಿಂದರಾಜನ್, ಶಾಂತರಾಮ್, ಬಿ. ಕುಮಾರಸ್ವಾಮಿ ಸೇರಿದಂತೆ ತುಳುನಾಡಿನ ಕುಟುಂಬಗಳ ಸದಸ್ಯರು ಹಾಗೂ ಪಟ್ಟಣ ಮತ್ತು ತಾಲೂಕಿನ ಯಕ್ಷಗಾನ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

## ರಾಗಾ ಮೇಲಿನ ಎಫ್ಐಆರ್ ಖಂಡನೆ




**ಮೈಸೂರು:** ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮೇಲೆ ಎಫ್.ಐ.ಆರ್ ಹಾಕಿರುವುದನ್ನ ಖಂಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಆರ್.ಎಸ್.ಎಸ್ ಕಚೇರಿ ಮುತ್ತಿಗೆ ಹಾಕಲು ಯತ್ನಿಸಿದ ವೇಳೆ ಪೊಲೀಸರು ತಡೆದು ವಶಕ್ಕೆ ಪಡೆದರು.

ನಗರದ ಜೆ.ಎಲ್.ಬಿ.ರಸ್ತೆಯಲ್ಲಿರುವ ಮಾದವ ಕೃಪಾ ಗೆ ಮಂಗಳವಾರ ಮುತ್ತಿಗೆ ಹಾಕಲು ಯುವ ಕಾಂಗ್ರೆಸ್ ಮುಖಂಡ ಹೊಯ್ಸಳ ನೇತೃತ್ವದಲ್ಲಿ ಕಾರ್ಯಕರ್ತರು ಆಗಮಿಸಿದರು. ಈ ವೇಳೆ ಪೊಲೀಸರು ಬ್ಯಾರಿಕೇಡ್ ಹಾಕಿ ಅರ್ಧದಲ್ಲೇ ತಡೆದರು. ಇದರಿಂದ ಕೆರಳಿದ ಯುವ ಕಾಂಗ್ರೆಸ್ ಕಾರ್ಯಕರ್ತರು ಪೊಲೀಸರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಆರ್.ಎಸ್.ಎಸ್ ಷಡ್ಯಂತರದಿಂದ ಯುವ ನಾಯಕ ರಾಹುಲ್ ಗಾಂಧಿ ಅವರ ಮೇಲೆ ಎಫ್.ಐ.ಆರ್ ಹಾಕಲಾಗಿದೆ. ಇದು ಅತ್ಯಂತ ಖಂಡನೀಯ, ಹಲ್ದ್ವಾನಿ ರಾಮಲೀಲಾ ಮೈದಾನದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಸ್ಥಳ ಶುದ್ದೀಕರಣ ಮಾಡಿರುವುದನ್ನು ಖಂಡಿಸಿರುವುದು ಅಪರಾಧ ಎಂದಾದರೆ, ಬಿಜೆಪಿ ನಾಯಕರುಗಳು ದಿನ ನಿತ್ಯ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಅವರ ಮೇಲೆ ಏಕೆ ಎಫ್.ಐ.ಆರ್ ಹಾಕುವುದಿಲ್ಲ ಎಂದು ಪ್ರಶ್ನಿಸಿದರು. ರಾಹುಲ್ ಗಾಂಧಿ ಅವರ ಜನಪ್ರಿಯತೆ ಸಹಿಸದ ಆರ್.ಎಸ್.ಎಸ್ ಮತ್ತು ಬಿಜೆಪಿ ಅವರ ಮೇಲೆ ನಿರಂತರ ಷಡ್ಯಂತರ ಮಾಡುತ್ತಿದೆ.ಇದಕ್ಕೆ ಕಾಂಗ್ರೆಸ್ಸಿಗರು ಬಗ್ಗುವುದಿಲ್ಲ ಎಂದು ಹೇಳಿದರು. ಈ ಕೂಡಲೇ ರಾಹುಲ್ ಗಾಂಧಿ ಅವರ ಮೇಲೆ ಹಾಕಿರುವ ಎಫ್.ಐ.ಆರ್ ಅನ್ನು ಹಿಂಪಡೆಯಬೇಕು, ಇಲ್ಲದಿದ್ದರೆ ಯುವ ಕಾಂಗ್ರೆಸ್ ನಿರಂತರವಾಗಿ ದೇಶಾದ್ಯಂತ ಉಗ್ರ ಹೋರಾಟ ಮಾಡಲಿದೆ ಎಂದು ಎಚ್ಚರಿಸಿದರು. ಇದಕ್ಕೂ ಮೊದಲು ಯುವ ಕಾಂಗ್ರೆಸ್ ಮುಖಂಡ ವಿನೊದ್ ನೇತೃತ್ವದಲ್ಲಿ ಮತ್ತೊಂದು ಯುವ ಕಾಂಗ್ರೆಸ್ ಕಾರ್ಯಕರ್ತರ ಗುಂಪು ಬಿಜೆಪಿ ಕಚೇರಿ ಮುತ್ತಿಗೆ ಹಾಕಲು ಯತ್ನಿಸಿತು. ಈ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದರು.

## ಪ್ಯಾರಾ ಥ್ರೋಬಾಲ್ ಫೆಡರೇಷನ್ ಸಂಸ್ಥೆ ಅಸ್ತಿತ್ವಕ್ಕೆ

ಮೈಸೂರು: ಪ್ಯಾರಾ ಥ್ರೋಬಾಲ್‌ಗೆ ಸಂಬಂಧಿಸಿದಂತೆ ದಿ ಪ್ಯಾರಾ ಥ್ರೋಬಾಲ್ ಫೆಡರೇಷನ್ ಆಫ್ ಇಂಡಿಯಾ ಎಂಬ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದಿದ್ದು, ಈ ಕ್ರೀಡೆಯಲ್ಲಿ ಆಸಕ್ತಿ ಹೊಂದಿರುವ ಅಂಗವಿಕಲ ಆಟಗಾರರಿಗೆ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ ಎಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಕೆ. ಶ್ರೀನಿವಾಸ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಹಿಂದೆ ಇದ್ದ ಸಂಸ್ಥೆ ಬಗ್ಗೆ ಕೆಲವೊಂದು ವಿವಾದವುಂಟಾದ ಹಿನ್ನೆಲೆಯಲ್ಲಿ ಈಗ ಸ್ವಲ್ಪ ಹೆಸರು ಬದಲಾಯಿಸಿ ನೂತನ ಸಂಸ್ಥೆ ಅಸ್ತಿತ್ವಕ್ಕೆ ತರಲಾಗಿದೆ ಎಂದರು. ಪ್ಯಾರಾ ಥ್ರೋಬಾಲ್ ಕ್ರೀಡೆಯ ಭಾರತ ತಂಡದ ನಾಯಕಿ ಹಾಗೂ ಸಂಸ್ಥೆಯ ಸಂಘಟನಾ ಕಾರ್ಯದರ್ಶಿಯಾದ ಮಾಲತಿ ಇನಾಮತಿ ಮಾತನಾಡಿ, ತಮ್ಮ ನಾಯಕತ್ವದಲ್ಲಿ ತಂಡ ಈಗಾಗಲೇ ವಿವಿಧ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪದಕ ಗಳಿಸಿದೆ. ಮುಂಬರುವ ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರ ಮಟ್ಟದ ಪಂದ್ಯಾವಳಿಯಲ್ಲಿ ಈ ಕ್ರೀಡೆಯಲ್ಲಿ ಪಾಲ್ಗೊಳ್ಳಲಿಚ್ಛಿಸುವವರಿಗೆ ತರಬೇತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ದೂ. 81472 49578 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಆರ್.ಎಂ.ಸ್ವಾಮಿ ಇದ್ದರು.




## 5ರಿಂದ ಶಸ್ತ್ರಚಿಕಿತ್ಸಕರ ರಾಜ ಸಮ್ಮೇಳನ

ಮೈಸೂರು: ಅಪೊಲೋ ಬಿಜಿಎಸ್ ಆಸ್ಪತ್ರೆ ವತಿಯಿಂದ ಸೆ. 5 ರಂದು ಬೆಳಗ್ಗೆ 11ಕ್ಕೆ ನಗರದ ಮಹೀಂದ್ರ ಗೋಲ್ಡನ್ ಲ್ಯಾಂಡ್ ಮಾರ್ಕ್ ಕ್ಲಬ್‌ನಲ್ಲಿ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸಕರ ರಾಜ್ಯಮಟ್ಟದ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಅಧ್ಯಕ್ಷ ಡಾ. ಎಚ್.ವಿ.ಸತೀಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಬೆಂಗಳೂರು, ಮಂಗಳೂರು, ಬೆಳಗಾವಿ, ಶಿವಮೊಗ್ಗ, ಬಳ್ಳಾರಿ, ಹುಬ್ಬಳ್ಳಿ, ಹಾಸನ ಮೊದಲಾದ ಕಡೆಗಳಿಂದ ಸುಮಾರು 140 ಮಮದಿ ಪ್ಲಾಸ್ಟಿಕ್ ಶಸ್ತ್ರ ಚಿಕಿತ್ಸಕರು ಪಾಲ್ಗೊಳ್ಳಲಿದ್ದಾರೆ. ಇದಲ್ಲದೆ ಮುಂಬಯಿ, ಪುಣೆ, ಜೈಪುರ ಮತ್ತು ಲಕ್ನೋದಿಂದಲೂ ತಜ್ಞರನ್ನು ಆಹ್ವಾನಿಸಲಾಗಿದೆ. ಇವರಿಗೆ ಮೈಸೂರನ್ನು ಪರಿಚಯಿಸುವ ಉದ್ದೇಶದಿಂದ ಸ.6 ರಂದು ಬೆಳಗ್ಗೆ 6.30ಕ್ಕೆ ಬೆಟ್ಟ ಹತ್ತುವ ಕಾರ್ಯಕ್ರಮ ಆಯೋಜಿಸಲಾಗಿದೆ. ಸಮ್ಮೇಳನವನ್ನು ಪತ್ರಿಕೋದ್ಯಮಿ ವಿಕ್ರಂ ಮುತ್ತಣ್ಣ ಉದ್ಘಾಟಿಸುವರು ಎಂದು ಮಾಹಿತಿ ನೀಡಿದರು.




## ಆಹಾರ ಮಳಿಗೆ ಲಾಟರಿ ಆಯ್ಕೆ ಕೈಬಿಡಿ

ಮೈಸೂರು: ಈ ಬಾರಿಯ ದಸರಾ ಮಹೋತ್ಸವ ವೇಳೆ ಆಹಾರ ಮೇಳಗಳಲ್ಲಿ ಮಳಿಗೆಗಳನ್ನು ಲಾಟರಿ ಮೂಲಕ ಆಯ್ಕೆ ಮಾಡಲಾಗುವುದೆಂಬ ನಿರ್ಧಾರ ಸರಿಯಲ್ಲ. ಇದರಿಂದ ಹೊರ ರಾಜ್ಯದವರು, ಫೈವ್ ಸ್ಟಾರ್ ಹೋಟೆಲ್‌ಗಳವರು ಹತ್ತತ್ತು ಅರ್ಜಿ ಹಾಕಿ ಮಳಿಗೆ ಗಿಟ್ಟಿಸಿಕೊಳ್ಳುತ್ತಾರೆ. ಆದ್ದರಿಂದ ಆಹಾರ ಮೇಳ ಸಮಿತಿ ಕಾರ್ಯಾಧ್ಯಕ್ಷರೇ ಮಳಿಗೆಗಳನ್ನು ಆಯ್ಕೆ ಮಾಡಲಿ ಎಂದು ಮೈಸೂರು ದಸರಾ ಆಹಾರ ಮೇಳ ತಿಂಡಿ ತಿನಿಸುಗಳ ಮಾರಾಟಗಾರರ ಸಂಘದ ಅಧ್ಯಕ್ಷ ಎಸ್. ನಾಗರಾಜು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತಾವೆಲ್ಲ ಚಿಕ್ಕಂದಿನಿಂದಲೂ ದಸರಾ ಆಹಾರ ಮೇಳವನ್ನೇ ಅವಲಂಬಿಸಿಕೊಂಡು ಬಂದಿದ್ದೇವೆ. ಕಾರ್ಯಾಧ್ಯಕ್ಷರೇ ಈ ಹಿಂದೆ ಸ್ವಚ್ಛತೆ, ಶುಚಿ ರುಚಿಯಾದ ತಿಂಡಿ ತಿನಿಸು ನೀಡಿದವರನ್ನು ಗುರುತಿಸಿ ಮಳಿಗೆ ಮಂಜೂರು ಮಾಡುತ್ತಿರುವುದು ವಾಡಿಕೆ. ಆದರೆ ಈ ಬಾರಿ ಲಾಟರಿ ಮೂಲಕ ಆಯ್ಕೆ ಮಾಡಲಾಗುವುದು ಎಂಬ ನಿರ್ಧಾರ ಕೈಗೊಂಡಿರುವುದು ಸರಿಯಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹೊರ ರಾಜ್ಯದವರು, ಫೈವ್ ಸ್ಟಾರ್ ಹೋಟೆಲ್‌ನವರು ಮಳಿಗೆ ತೆರೆದಲ್ಲಿ ದುಬಾರಿ ದರ ವಿಧಿಸುತ್ತಾರೆ.




ಇದರಿಂದಾಗಿ ದಸರಾದ ಪ್ರಮುಖ ಆಕರ್ಷಿತರಾದ ಮಧ್ಯಮ ವರ್ಗದವರಿಗೆ ಆಹಾರಗಳು ದುಬಾರಿಯಾಗುತ್ತವೆ. ಜೊತೆಗೆ ದಸರಾ ಆಹಾರ ಮೇಳವನ್ನೇ ನಂಬಿಕೊಂಡಿರುವ ಸಣ್ಣಪುಟ್ಟ ವ್ಯಾಪಾರಿಗಳಿಗೆ ಹೊಡೆತ ಬೀಳುತ್ತದೆ. ಆದ್ದರಿಂದ ಆಯ್ಕೆ ವಿಚಾರ ಕಾರ್ಯಾಧ್ಯಕ್ಷರಿಗೇ ಬಿಡಬೇಕು. ಮಳಿಗೆ ಶುಲ್ಕವನ್ನು ಹಿಂದಿನ ವರ್ಷದಷ್ಟಕ್ಕೇ ನಿಗದಿಗೊಳಿಸಬೇಕು. ಪಡೆದ ಮಳಿಗೆಯನ್ನು ದುಬಾರಿ ದರಕ್ಕೆ ಬೇರೆಯವರಿಗೆ ಮಾರಾಟ ಮಾಡಿಕೊಳ್ಳುವುದಕ್ಕೆ ಕಡಿವಾಣ ಹಾಕಬೇಕು. ದಿನಸಿ, ಇನ್ನಿತರ ಪದಾರ್ಥ ತರುವ ವಾಹನಗಳಿಗೆ ಪಾಸ್ ನೀಡಬೇಕು ಎಂದು ಜಿಲ್ಲಾಡಳಿತಕ್ಕೆ ಮನವಿ ಮಾಡಿದರು. ಇನ್ನಿತರ ಪದಾಧಿಕಾರಿಗಳಾದ ಶಾಂತಮ್ಮ, ಕಂಸಾಳೆ ರವಿ, ಶಿವಸ್ವಾಮಿ, ದೀಪಕ್, ಶಿವಸಿದ್ದು, ಇದ್ದರು.

ಬಾಲಗೇರಿಯ ಸಮುದಾಯ ಭವನ ಗಳನ್ನು ಜನರ ಉಪಯೋಗಕ್ಕಾಗಿ ಅರ್ಪಣೆ

## ಜನರ ಅಗತ್ಯಗಳಿಗೆ ಸ್ಪಂದನೆ: ನಗರಸಭಾಧ್ಯಕ್ಷ ಕೆ.ಶೇಷಾದ್ರಿ

ರಾಮನಗರ: ನಗರದ 16ನೇ ವಾರ್ಡಿನಲ್ಲಿರುವ ಭಜನೆ ಮಂದಿರ ಮತ್ತು 17ನೇ ವಾರ್ಡಿನಲ್ಲಿರುವ ಸಮುದಾಯ ಭವನದ ದುರಸ್ಥಿಗೆ ಈ ಭಾಗದ ನಾಗರೀಕರು ಆಗ್ರಹಿಸುತ್ತಿದ್ದರು. ಜನರ ಭಾವನೆಗಳಿಗೆ ಸ್ಪಂದಿಸಿ ನಗರಸಭೆಯವತಿಯಿಂದ ದುರಸ್ಥಿಗೊಳಿಸಲಾಗಿದೆ. ಜನರ ಅಗತ್ಯಗಳಿಗೆ ನಗರಸಭೆ ಸ್ಪಂದಿಸುತ್ತಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ದುರಸ್ಥಿಯಾದ ನಗರದ ನೇರಳೆ ಕೇರಿ ಮತ್ತು ಬಾಲಗೇರಿಯ ಸಮುದಾಯ ಭವನ ಗಳನ್ನು ಜನರ ಉಪಯೋಗಕ್ಕಾಗಿ ಅರ್ಪಣೆ ಮಾಡಿದ ವೇಳೆ ಅವರು ಮಾತನಾಡಿದರು. ನಗರಸಭೆ ಜನರಿಗೆ ಸೇರಿದೆ. ನಗರದ ಅಭಿವೃದ್ಧಿ, ಸ್ವಚ್ಛತೆ ವಿಚಾರದಲ್ಲಿ ನಗರಸಭೆಯೊಂದಿಗೆ ನಾಗರೀಕರ ಸಹಕಾರವೂ ಅಗತ್ಯವಿದೆ. ನಗರದ ಒಟ್ಟಾರೆ ಅಭಿವೃದ್ದಿಗೆ ನಗರಸಭೆಯ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಬದ್ದವಾಗಿರುವುದಾಗಿ ಅವರು ತಿಳಿಸಿದರು.



### ಜನರ ಶ್ಲಾಘನೆ

16ನೇ ವಾರ್ಡು ನೇರಳೇ ಕೇರಿಯಲ್ಲಿರುವ ಶ್ರೀ ರಾಮ ಭಜನಾ ಮಂದಿರದ ಕಟ್ಟಡ ತೀರಾ ಹಳೆಯದಾಗಿದ್ದು ದುರಸ್ಥಿಯಾಗಬೇಕಾಗಿತ್ತು. ಈ ವಿಚಾರದಲ್ಲಿ ಈ ವಾರ್ಡಿನ ನಾಗರೀಕರು ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಅವರಿಗೆ ಮನವಿ ಸಲ್ಲಿಸಿದ್ದೆವು. ಜನರ ಭಾವನೆಗಳಿಗೆ ಸ್ಪಂದಿಸಿ ಅಧ್ಯಕ್ಷರು ಭಜನಾ ಮಂದಿರವನ್ನು ನವೀಕರಿಸಿದ್ದಾರೆ. ಜನರ ಭಾವನೆಗಳನ್ನು ಪುರಸ್ಕರಿಸಿದ್ದಾರೆ ಎಂದು ನೇರಳೇ ಕೇರಿಯ ಜನತೆ ಧನ್ಯವಾದ ತಿಳಿಸಿದರು.

ಅದೇ ರೀತಿ 17ನೇ ವಾರ್ಡ್ ಬಾಲಗೇರಿಯ ಸಮುದಾಯ ಭವನಕ್ಕೆ ನಗರಸಭೆ ವತಿಯಿಂದ ಸುಣ್ಣ?ಬಣ್ಣ ಹಾಗೂ ಅಗತ್ಯ ಸಣ್ಣಪುಟ್ಟ ದುರಸ್ತಿ ಕಾರ್ಯಗಳನ್ನು ನೆರವೇರಿಸಿಕೊಟ್ಟಿದ್ದಾರೆ. ಭವನಕ್ಕೆ ಹೊಸ ಮೆರುಗು ಬಂದಿದೆ ಎಂದು ಆ ಭಾಗದ ಜನತೆ ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ವಾರ್ಡಿನಲ್ಲಿರುವ ಬಿಸಿಲು ಮಾರಮ್ಮನ ಸೇವಾ ಸಮುದಾಯ ಭವನಕ್ಕೂ ಹೊಸದಾಗಿ ಸುಣ್ಣ ಬಣ್ಣವನ್ನು ಮಾಡಿಸಿಕೊಟ್ಟಿದ್ದಾರೆ ಎಂದು ಆ ಭಾಗದ ನಾಗರೀಕರು ಅಧ್ಯಕ್ಷರಿಗೆ ಕೃತಜ್ಞತೆ ತಿಳಿಸಿದರು. ತದನಂತರ ಅವರು ಬಂಡಾರಮ್ಮ ದೇವಿಯ ದರ್ಶನ ಪಡೆದರು. ಸ್ಥಳೀಯರು ಸಲ್ಲಿಸಿದ ಮನಿಯನ್ನು ಆಲಿಸಿದರು. ಈ 16ನೇ ವಾರ್ಡಿನ ನಗರಸಭೆ ಸದಸ್ಯ ಮೊಯಿನ್ ಖುರೇಶಿ, ಯುವ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ್.ಎಸ್, ನಗರಸಭೆಯ ಮಾಜಿ ಉಪಾಧ್ಯಕ್ಷ ವರದರಾಜು, ಮುಖಂಡರಾದ ಚಿಕ್ಕ ವರದರಾಜು, ಶ್ರೀನಿವಾಸ್, ರಮೇಶ್ ಹಾಜರಿದ್ದರು.

## ಇಂದಿರಾಗಾಂಧಿ ಕ್ಯಾಂಟೀನ್ ಗೆ ಸಚಿವರ ಭೇಟಿ



ಮೈಸೂರು: ನಗರದ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಹಿನಕಲ್‌ನಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಪೌರಾಡಳಿತ ಸಚಿವ ಹೆಚ್.ಸಿ ಬಾಲಕೃಷ್ಣ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಇಂದಿರಾ ಕ್ಯಾಂಟೀನ್‌ನಲ್ಲಿ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಆಹಾರದ ಗುಣಮಟ್ಟ, ಸ್ವಚ್ಛತೆ, ಅಡುಗೆಮನೆಯ ನಿರ್ವಹಣೆ, ಮೂಲಸೌಕರ್ಯ ಹಾಗೂ ಸಾರ್ವಜನಿಕರಿಗೆ ಒದಗಿಸಲಾಗುತ್ತಿರುವ ಸೇವೆಗಳ ಕುರಿತು ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ಗುಣಮಟ್ಟದ, ಶುಚಿಯಾದ ಹಾಗೂ ಸಮಯಕ್ಕೆ ಸರಿಯಾಗಿ ಆಹಾರ ದೊರೆಯುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಇಂದಿರಾ ಕ್ಯಾಂಟೀನ್‌ಗಳು ಕಾರ್ಮಿಕರು, ವಿದ್ಯಾರ್ಥಿಗಳು ಸೇರಿದಂತೆ ದುಡಿಯುವ ವರ್ಗದ ಜನರಿಗೆ ಕೈಗೆಟುಕುವ ದರದಲ್ಲಿ ಆಹಾರ ಒದಗಿಸುವ ಕಾಂಗ್ರೆಸ್ ಸರ್ಕಾರದ ಮಹತ್ವದ ಜನಪರ ಯೋಜನೆಯಾಗಿದ್ದು, ಇದರ ಉದ್ದೇಶ ಸಾರ್ಥಕವಾಗುವಂತೆ ಯಾವುದೇ ರೀತಿಯ ಲೋಪಗಳಿಗೆ ಅವಕಾಶ ನೀಡದೆ ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಸೂಚಿಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ ಜೊತೆಗಿದ್ದರು.

# ರಾಗಾ ವಿರುದ್ಧ ಎಫ್‌ಐಆರ್ ಖಂಡಿಸಿ ಪ್ರತಿಭಟನೆ

ಮೈಸೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಖಂಡಿಸಿ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ನಗರದ ದಾಸಪ್ಪ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನೂರಾರು ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಬಿಜೆಪಿ ಸರ್ಕಾರ ಹಾಗೂ ಆರ್‌ಎಸ್‌ಎಸ್ ವಿರುದ್ಧ "ಬಗ್ಗುವುದಿಲ್ಲ ಜಗ್ಗುವುದಿಲ್ಲ, ಎಫ್‌ಐಆರ್‌ಗೆ ನಾವು ಜಗ್ಗುವುದಿಲ್ಲ", "ಸಂವಿಧಾನ ವಿರೋಧಿ ಸರ್ಕಾರಕ್ಕೆ ಧಿಕ್ಕಾರ, ಕೋಮುವಾದಿ ಬಿಜೆಪಿಗೆ ಧಿಕ್ಕಾರ" ಎಂಬಿತ್ಯಾದಿ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಉತ್ತರಾಖಂಡದ ಹಲ್ದ್ವಾನಿಯಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾಗವಹಿಸಿದ್ದರು. ಈ ಸಭೆ ಮುಗಿದ ಬಳಿಕ ಆ ಸ್ಥಳವನ್ನು ಆರ್‌ಎಸ್‌ಎಸ್ ಬೆಂಬಲಿತರು ಶುದ್ಧೀಕರಣ ಮಾಡಿದ್ದರೆನ್ನಲಾದ ಕೃತ್ಯ ಖಂಡಿಸಿದ್ದ ರಾಹುಲ್ ಗಾಂಧಿ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿದ್ದರು. ಆದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಕೆಯಾಗುತ್ತಿದ್ದಂತೆ ರಾಹುಲ್ ಗಾಂಧಿ ಅವರ ವಿರುದ್ಧವೇ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಕಾಂಗ್ರೆಸ್ ನಾಯಕರು ಕಿಡಿಕಾರಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ದೇಶದಲ್ಲಿ ವಿರೋಧ ಪಕ್ಷವೇ ಇರಬಾರದು ಎಂಬ ದ್ವೇಷದ ರಾಜಕಾರಣವನ್ನು ಬಿಜೆಪಿ ಮಾಡುತ್ತಿದೆ. ಸತ್ಯ ಪ್ರಶ್ನಿಸುವ ನಾಯಕರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಧ್ವನಿ




ಅಡಗಿಸುವ ಯತ್ನ ನಡೆಯುತ್ತಿದೆ. ಈ ಪರಿಸ್ಥಿತಿ ಎದುರಿಸಲು ದೇಶದಲ್ಲಿ ಬಿಜೆಪಿ ಹಠಾವೋ, ದೇಶ್ ಬಚಾವೋ ಎಂಬ ಎರಡನೇ ಸ್ವಾತಂತ್ರ್ಯ ಸಂಗ್ರಾಮ ಆರಂಭಿಸುವ ಅನಿವಾರ್ಯತೆ ಎದುರಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಅರುಣಕುಮಾರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಕಾಂಗ್ರೆಸ್ ಮುಖಂಡರಾದ ಡೈರಿ ವೆಂಕಟೇಶ್, ಎಂ.ಶಿವಣ್ಣ, ಶಾಂತಕುಮಾರಿ, ಪುಷ್ಪಲತಾ ಚಿಕ್ಕಣ್ಣ, ರಾಜೇಶ್, ಭಾಸ್ಕರ್ ಎಲ್.ಗೌಡ, ಮೈಸೂರು ಬಸವಣ್ಣ, ಮೋಹನ್ ಸೇರಿ ಹಲವರು ಭಾಗವಹಿಸಿದ್ದರು.

# ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ



ಮೈಸೂರು: ನಿತ್ಯದ ಅಗತ್ಯ ಧವಸ ಧಾನ್ಯ ಹಾಗೂ ದಿನಸಿ ಪದಾರ್ಥಗಳ ಬೆಲೆ ತಾರಕಕ್ಕೇರಿದ್ದು, ಬೆಲೆ ಏರಿಕೆ ನಿಯಂತ್ರಿಸುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ ಎಂದು ಆರೋಪಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಜನಸಾಮಾನ್ಯರು, ಮಧ್ಯಮ ವರ್ಗದವರು ಕಂಗೆಟ್ಟಿದ್ದಾರೆ. ತೈಲ, ಅಡುಗೆ ಗ್ಯಾಸ್, ವಿದ್ಯುತ್ ಹಾಗೂ ಕುಡಿಯುವ ನೀರಿನ ದರ ಏರಿಕೆಯ ಬಿಸಿಯ ನಡುವೆಯೇ ಇದೀಗ ನಿತ್ಯಬಳಕೆಯ ಆಹಾರ ಧಾನ್ಯಗಳ ಬೆಲೆಯೂ ಏರಿಕೆಯಾಗಿರುವುದು ಬಡವರ ಹೊಟ್ಟೆಯ ಮೇಲೆ ಹೊಡೆದಂತಾಗಿದೆ. ಬೆಲೆ ಏರಿಕೆ ತಡೆಯುವಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ. ಸರ್ಕಾರಗಳು ಪರಸ್ಪರ ಒಬ್ಬರ ಮೇಲೊಬ್ಬರು ಗೂಬೆ ಕೂರಿಸುತ್ತಾ ಕಾಲಹರಣ ಮಾಡುತ್ತಿವೆ. ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎನ್ನುವಂತೆ ಆಡಳಿತಗಾರರ ಜಟಾಪಟಿಗೆ ಸಾಮಾನ್ಯ ಜನ ಆರ್ಥಿಕವಾಗಿ ನಲುಗಿ ಹೋಗುತ್ತಿದ್ದಾರೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಬಾಲಕೃಷ್ಣ, ಮುಖಂಡರಾದ ನಾಲಾ ಬೀದಿ ರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಗೋಪಿ, ಎಲ್‌ಐಸಿ ಸಿದ್ದಪ್ಪ, ಗೋವಿಂದರಾಜು, ಹೊನ್ನಕೆರೆ ಸ್ವಾಮಿ, ಬೀಡಾ ಬಾಬು, ಕಾವೇರಮ್ಮ, ಮಾದಪ್ಪ, ಹರೀಶ್, ಶಿವಕುಮಾರ ಸ್ವಾಮಿ, ಸುನೀಲ್, ಗೈಡ್ ಸ್ವಾಮಿ, ರಮೇಶ್, ಚಿನ್ನಪ್ಪ, ಶಿವು ಗೌಡ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಜೀವದ ಜೊತೆ ಚೆಲ್ಲಾಟ: ಜನರ ಆಕ್ರೋಶ

## ಡಕೋಟ ಬಸ್ಸುಗಳನ್ನು ರಸ್ತೆಗೆ ಇಳಿಸುತ್ತಿರುವ ಅಧಿಕಾರಿಗಳು | ಸಾರ್ವಜನಿಕರ ಆಕ್ರೋಶ

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ಹರಿದ ಸೀಟುಗಳು, ಕಿತ್ತಿರುವ ಮೇಲ್ಹಾವಣಿಯಿಂದ ಸೋರುವ ಮಳೆ ನೀರು,

ಕಿಟಕಿಯಿಲ್ಲದೆ ಕೆನ್ನೆಗೆ ರಾಚುವ ಬಿಸಿಲು, ಒಂದೇ ಕಡೆ ವಾಲಿಕೊಂಡೇ ಸಂಚರಿಸುವ ಬಸ್ಸುಗಳು. ತಾಲೂಕಿನಲ್ಲಿರುವ ಈ ರೀತಿ ದೋಷಪೂರಿತ ಕೆ.ಎಸ್.ಆರ್.ಟಿ.ಸಿ ಹೆಚ್.ಕೋಟೆ ಘಟಕದ ಕೆಲ ಬಸ್ಸುಗಳು ಸಾರ್ವಜನಿಕರ ಜೀವಕ್ಕೆ ಕುತ್ತುತರುತ್ತಿವೆ. ದುರಸ್ತಿ ಬಸ್ಸುಗಳು ಮಾರ್ಗಮಧ್ಯೆ ಕೆಟ್ಟು ನಿಲ್ಲುತ್ತಿರುವುದರಿಂದ ಪ್ರಯಾಣಿಕರು ನಿಗದಿತ ಸಮಯಕ್ಕೆ ತಲುಪಲು ಸಾಧ್ಯವಾಗದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ನಿರ್ಜನ ಪ್ರದೇಶದಲ್ಲಿ ಕೆಟ್ಟುನಿಲ್ಲುವ ಬಸ್ಸುಗಳಿಂದ ಮಹಿಳಾ ಪ್ರಯಾಣಿಕರ ಸುರಕ್ಷತೆಗೂ ಧಕ್ಕೆ ಉಂಟಾಗುತ್ತಿದೆ.

ಭಾರ್ಸಿ ಕಟ್ಟಾಗಿರುವ, ಶೇ.90 ಸವೆದಿರುವ ಟಯರ್‌ಗಳ ಕೆಲ ಬಸ್ಸುಗಳು ರಸ್ತೆಯಲ್ಲಿ ಓಡುತ್ತಿದ್ದು, ಗದ್ದಿಗೆ ರಸ್ತೆಯಲ್ಲಿ ವಾರಕ್ಕೆ ಎರಡು, ಮೂರು ಸಲ ಬಸ್ ಕೆಟ್ಟಿನಿಂತರೆ, ನಿಲ್ದಾಣದಲ್ಲಿಯೇ ಎರಡು ಬಾರಿ ಬಸ್ ಕೆಟ್ಟಿದೆ. ಬೀರಂಬಳ್ಳಿ ಬಳಿ ವಾರದಲ್ಲಿ ಐದಾರು ಬಾರಿ, ಮೈಸೂರು ಮಾರ್ಗದಲ್ಲೂ ಕೆಟ್ಟು ನಿಲ್ಲುತ್ತಿವೆ. ಪ್ರತಿದಿನ ಬಸ್ ರಸ್ತೆಗೆ ಇಳಿಯುವ ಮುನ್ನ ಇಂಜಿನ್ ಮತ್ತು ಬಿಡಿಭಾಗಗಳನ್ನು ಕಡ್ಡಾಯವಾಗಿ ಪರಿಶೀಲಿಸಬೇಕಿದೆ. ಮೇಲಧಿಕಾರಿ ದೃಢಪಡಿಸಿದ ನಂತರವಷ್ಟೇ ಬಸ್ ಡಿಪೋದಿಂದ ಹೊರಬರಬೇಕಿದೆ. ಜವಾಬ್ದಾರಿ ಹೊತ್ತಿರುವ ಡಿಪೋ ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡದೇ ಜನರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ.






ಗದ್ದಿಗೆಯಲ್ಲಿ ಕೆಟ್ಟುನಿಂತಿರುವ ಸಾರಿಗೆ ಬಸ್ಸು (ಮತ್ತೊಂದು ಚಿತ್ರದಲ್ಲಿ) ಮಾರ್ಗ ಮಧ್ಯೆ ಕೆಟ್ಟಿರುವ ಎಚ್.ಡಿ.ಕೋಟೆ ಘಟಕದ ಬಸ್ಸು.

### ಹಳೆಯ, ಹೊಸ ಸಾರಥಿ ಬಂದರೂ ಪ್ರಯೋಜನವಿಲ್ಲ

ಮೈಸೂರು ಗ್ರಾಮಾಂತರ ವಿಭಾಗದ ಎಚ್.ಡಿ.ಕೋಟೆ ಘಟಕದಲ್ಲಿ ಹಿಂದೆ ಇದ್ದ ವ್ಯವಸ್ಥಾಪಕ ಮಹದೇವಪ್ರಸಾದ್ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿದ್ದಾರೆ ಎಂದು ಕೆಲ ತಿಂಗಳ ಹಿಂದೆ ವರ್ಗಾವಣೆ ಮಾಡಲಾಗಿದೆ. ಅದೇ ಸ್ಥಾನಕ್ಕೆ ಈ ಮೊದಲೇ ಇದೇ ಹುದ್ದೆಯಲ್ಲಿ ತಾಲೂಕಿನಲ್ಲಿ ಅನುಭವ ಪಡೆದಿದ್ದ ತ್ಯಾಗರಾಜ್ ಅವರನ್ನು ನೇಮಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಅಲ್ಲಲ್ಲಿ ಬಸ್ಸುಗಳಿಲ್ಲದಿರುವುದು, ಕೆಲ ಊರುಗಳಲ್ಲಿ ಬಸ್ಸುಗಳು ನಿಲ್ಲಸದಿರುವುದು ಹೀಗೆ ಹಲವು ಸಮಸ್ಯೆಗಳನ್ನು ಸಾರ್ವಜನಿಕರು ನೂತನ ಅಧಿಕಾರಿ ಗಮನಕ್ಕೆ ತಂದಿದ್ದಾರೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ.



ಸವೆದಿರುವ ಟಯರ್‌ನಲ್ಲೇ ವಾಹನ ಚಲಾಯಿಸುವುದರಿಂದ ನಿಯಂತ್ರಣ ಕಳೆದುಕೊಳ್ಳಬಹುದು. ಟಯರ್ ಸ್ಫೋಟಗೊಂಡು ಭಾರೀ ಅನಾಹುತ ಸಂಭವಿಸಬಹುದು. ಬಸ್ ಗಳು ಪದೇ, ಪದೇ ಕೆಡುವುದರಿಂದ ಕೆಲಸದ ಸಂಬಂಧ ಹೊರಗೆ ಹೋಗುವ ರೈತರು ಆದಷ್ಟು ಬೇಗ ಹಿಂದಿರುಗಿ ದನ, ಕರುಗಳನ್ನು ಮೇಯಿಸಲು ವಿಳಂಬವಾಗುತ್ತಿದೆ. ಕೆಟ್ಟಿರುವ ಬಸ್ಸುಗಳನ್ನು ಗ್ರಾಮೀಣ ಭಾಗಕ್ಕೆ ಬಿಡುತ್ತಿರುವುದೇಕೆ ? ಹಳ್ಳಿ ಜನರ ಮೇಲೆ ತಾತ್ಸಾರವೇಕೆ ? ಎಲ್ಲ ಮಾರ್ಗ ಸುಧಾರಿತ ಬಸ್ಸುಗಳನ್ನು ಬಿಡಲಿ.

–**ಭೀಮನಾಯಕ** ಪ್ರಯಾಣಿಕ

### ನಿಷ್ಕ್ರಿಯವಾದ ನಿರ್ವಹಣಾ ವಿಭಾಗ

ಕೆಟ್ಟಿರುವ ಬಸ್ಸಿನ ಬಿಡಿಭಾಗಗಳನ್ನು ಸರಿಪಡಿಸುವಂತೆ ಹಾಗೂ ಕರ್ತವ್ಯ ನಿರ್ವಹಿಸಿದ ಬಸ್ಸಿನ ಸ್ಥಿತಿಯ ಬಗ್ಗೆ ಚಾಲಕ, ತನ್ನ ಲಾಗ್ ಪುಸ್ತಕದಲ್ಲಿ ಬರೆದು ಮೆಕ್ಯಾನಿಕ್ ವಿಭಾಗಕ್ಕೆ ಮಾಹಿತಿ ನೀಡಿರುತ್ತಾರೆ. ಮೌಖಿಕವಾಗಿಯೂ ತಿಳಿಸಿರುತ್ತಾರೆ. ಸರಿಪಡಿಸಿ ಜವಾಬ್ದಾರಿ ಮೆರೆಯಬೇಕಿದ್ದ ಮೆಕ್ಯಾನಿಕ್ ಗಳು ಹಾಗೂ ಘಟಕ ವ್ಯವಸ್ಥಾಪಕ ನಿರ್ಲಕ್ಷ್ಯ ತೋರಿರುವುದು ಚಾಲಕರಿಗೆ ಸಂಕಷ್ಟವಾಗಿದೆ. ಪ್ರತಿವರ್ಷ ಆರ್.ಟಿ.ಓ ನಡೆಸುವ ತಪಾಸಣೆ ಹೊರತಾಗಿಯೂ, ಬಸ್ಸನ್ನು ಕೆಎಸ್‌ಆರ್ಟಿಸಿಯ ಮೆಕ್ಯಾನಿಕ್ ವಿಭಾಗ ದಿನಂಪ್ರತಿ ಪರೀಕ್ಷಿಸಿ, ಬಸ್ಸು ರಸ್ತೆ ಸಂಚಾರಕ್ಕೆ ಯೋಗ್ಯವಾಗಿದೆ ಎಂದು ಫಿಟ್ ಫಾರ್ ರೋಡ್ ಎಂದು ಪ್ರಮಾಣೀಕರಿಸಿದ ನಂತರವಷ್ಟೇ ಬಸ್ಸುಗಳನ್ನು ಡಿಪೋದಿಂದ ಹೊರಬಿಡಬೇಕು. ಇದ್ಯಾವುದೂ ಮಾಡದ ಮೆಕ್ಯಾನಿಕ್ ವಿಭಾಗ ಇದ್ದರೂ ಇಲ್ಲದಂತಾಗಿದೆ.





### ಆರ್.ಟಿ.ಓ ತಪಾಸಣೆಯೇ ಅನುಮಾನ!

ಸ್ಟೇರಿಂಗ್ ನಿಯಂತ್ರಣ, ಹಾರ್ನ್, ಹೊಗೆಪರೀಕ್ಷೆ, ಹೆಡ್ಲೈಟ್, ಅಪಘಾತದ ಸಮಯದಲ್ಲಿ ಪ್ರಯಾಣಿಕರ ಸುರಕ್ಷತೆಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆ, ಬಸ್ಸಿನ ವಿಮೆ ಸರ್ಟಿಫಿಕೇಟ್ ಸೇರಿದಂತೆ ಇತರೆ ಅಂಶಗಳನ್ನು ಪರಿಶೀಲಿಸಿ ಆರ್.ಟಿ.ಓ ಯಿಂದ, ಕೆ.ಎಸ್.ಆರ್.ಟಿ.ಸಿ ಪ್ರತಿವರ್ಷ ಬಸ್ಸಿನ ಫಿಟ್ ನೆಸ್ ಸರ್ಟಿಫಿಕೇಟ್ ಪಡೆಯುವುದು ಕಡ್ಡಾಯವಾಗಿದೆ. ಆದರೆ, ಇಷ್ಟು ಕೆಲಸಗಳನ್ನು ಈ ಎರಡು ಇಲಾಖೆಗಳು ಮಾಡಿವೆಯೇ ಎಂಬ ಅನುಮಾನವಿದೆ.

# 6,43,500ರೂ ಮೌಲ್ಯದ 35 ಮೊಬೈಲ್ ಫೋನ್‌ಗಳ ವಶ



ಚಾಮರಾಜನಗರ: ಜಿಲ್ಲೆಯಾದ್ಯಾಂತ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳೆದು ಹೋಗಿದ್ದ ಮೊಬೈಲ್ ಫೋನ್‌ಗಳ ದೂರುಗಳನ್ನು ಸ್ವೀಕರಿಸಿ ಅವುಗಳ ವಿವರಗಳನ್ನು ಸಿ.ಇ.ಐ.ಆರ್ (ಅಇಐಖ) ಪೋರ್ಟಲ್‌ನಲ್ಲಿ ದಾಖಲಿಸಿದ್ದು, ವಿವರಗಳನ್ನು ಆಧರಿಸಿ ಸುಮಾರು 35 ಸಂಖ್ಯೆಯ ವಿವಿಧ ಕಂಪನಿಯ ಮೊಬೈಲ್ ಫೋನ್‌ಗಳು. ಅಂದಾಜು ಬೆಲೆ 6.43 .500/–ರೂ ಆಗಿರುತ್ತದೆ. ಚಾಮರಾಜನಗರ ಸೈಬರ್ ಕ್ರೈಂ ಪೊಲೀಸ್ ಠಾಣೆ ಅಧಿಕಾರಿ ಮತ್ತು ಸಿಬ್ಬಂದಿಗಳು ವಿವಿಧ ಕಂಪನಿಯ ಮೊಬೈಲ್ ಫೋನ್‌ಗಳನ್ನು ಕರ್ನಾಟಕ ಸೇರಿದಂತೆ ಅಂತರ ರಾಜ್ಯಗಳಲ್ಲಿ ಪತ್ತೆ ಹಚ್ಚಿ ವಶಕ್ಕೆ ಪಡೆದುಕೊಂಡು ಸಂಬಂಧಪಟ್ಟ ವಾರಸುದಾರರಿಗೆ ನೀಡಲಾಗಿದೆ.

ಚಾಮರಾಜನಗರ ಜಿಲ್ಲೆಯ ಪೊಲೀಸ್ ಅಧೀಕ್ಷಕರಾದ ಶ್ರೀ ಮುತ್ತುರಾಜ್.ಎಂ. ಐ.ಪಿ.ಎಸ್. ರವರ ನಿರ್ದೇಶನದ ಮೇರೆಗೆ ಅಪರ ಪೊಲೀಸ್ ಅಧೀಕ್ಷಕರಾದ ಶ್ರೀ ಎಂ.ಎನ್. ಶಶಿಧರ್‌ರವರ ಮಾರ್ಗದರ್ಶನದಲ್ಲಿ ಚಾಮರಾಜನಗರ ಸೈಬರ್ ಕ್ರೈಂ ಪೊಲೀಸ್ ಠಾಣೆಯ ಪೊಲೀಸ್ ಉಪಾಧೀಕ್ಷಕರಾದ ಶ್ರೀ ಪವನ್ ಕುಮಾರ್ ರವರ ನೇತೃತ್ವದಲ್ಲಿ ಮೊಬೈಲ್ ಫೋನ್‌ಗಳನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದುಕೊಂಡಿದ್ದಾರೆ

# ಬಂಡೀಪುರ, ನಾಗರಹೊಳೆ ಸಫಾರಿ ದರ ಏರಿಕೆ

ಗುಂಡ್ಲುಪೇಟೆ: ತೈಲ ಬೆಲೆ ಏರಿಕೆ ಹಾಗೂ ನಿರ್ವಹಣಾ ವೆಚ್ಚ ಹೆಚ್ಚಳದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳ ಸಫಾರಿ ದರವನ್ನು ಮೂರು ವರ್ಷಗಳ ಬಳಿಕ ಪರಿಷ್ಕರಿಸಿದ್ದು, ಹೊಸ ದರಗಳು ಸೆ.1ರಿಂದಲೇ ಜಾರಿಗೆ ಬಂದಿವೆ.

ಬಂಡೀಪುರದಲ್ಲಿ ಬಸ್ ಸಫಾರಿಗೆ ವಯಸ್ಕರಿಗೆ 1,000 ಹಾಗೂ ಮಕ್ಕಳಿಗೆ 500 ಶುಲ್ಕ ನಿಗದಿಪಡಿಸಲಾಗಿದೆ. ಜೀಪ್ ಸಫಾರಿಗೆ ವಯಸ್ಕರಿಗೆ 1,500 ಹಾಗೂ ಮಕ್ಕಳಿಗೆ 750 ದರ ವಿಧಿಸಲಾಗುತ್ತಿದೆ.

ತೈಲ ಬೆಲೆ ಸೇರಿದಂತೆ ಸಫಾರಿ ವಾಹನಗಳ ನಿರ್ವಹಣೆ ಹಾಗೂ ಇತರ ವೆಚ್ಚಗಳು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ದರ ಪರಿಷ್ಕರಿಸಲಾಗಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ. ಬಂಡೀಪುರ ಹಾಗೂ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳ ಸಫಾರಿ ದೇಶ–ವಿದೇಶದ ಪ್ರವಾಸಿಗರನ್ನು ಆಕರ್ಷಿಸುವ ಪ್ರಮುಖ ಪ್ರವಾಸೋದ್ಯಮ ಚಟುವಟಿಕೆಯಾಗಿದ್ದು, ಸಫಾರಿ ದರ ಏರಿಕೆಯಿಂದ ಪ್ರವಾಸಿಗರ ಪ್ರವಾಸ ವೆಚ್ಚ ಮತ್ತಷ್ಟು ಹೆಚ್ಚಾಗಲಿದೆ. ದರ ಹೆಚ್ಚಳವು ಪ್ರವಾಸಿಗರ ಸಂಖ್ಯೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

# ದರ ಏರಿಸಿದ ಮೊದಲ ದಿನವೇ 2 ಲಕ್ಷ ಆದಾಯ

ಗುಂಡ್ಲುಪೇಟೆ, ಸೆ.1: ಬಂಡೀಪುರ ಸಫಾರಿ ದರ ಪರಿಷ್ಕರಣೆಯಾದ ಬಳಿಕದ ಮೊದಲ ದಿನವಾದ ಸೆಪ್ಟೆಂಬರ್ 1ರಂದು ಒಟ್ಟು 191 ಪ್ರವಾಸಿಗರು ಸಫಾರಿಗೆ ಆಗಮಿಸಿದ್ದು, ವಿವಿಧ ಶುಲ್ಕಗಳ ಮೂಲಕ 2,72,824 ರೂ. ಆದಾಯ ಸಂಗ್ರಹವಾಗಿದೆ.

ಸಫಾರಿಗೆ ಆಗಮಿಸಿದವರ ಪೈಕಿ 170 ಭಾರತೀಯ ವಯಸ್ಕರು, 18 ಭಾರತೀಯ ಮಕ್ಕಳು ಹಾಗೂ ಮೂವರು ವಿದೇಶಿ ವಯಸ್ಕರು ಇದ್ದರು. ವಿದೇಶಿ ಮಕ್ಕಳ ಸಂಖ್ಯೆ ಶೂನ್ಯವಾಗಿತ್ತು.

ಆಫ್‌ಲೈನ್ ಸಫಾರಿ ಶುಲ್ಕ ಹಾಗೂ ಪಾರ್ಕಿಂಗ್‌ನಿಂದ 70,102 ರೂ., ಆಫ್‌ಲೈನ್ ಪಾರ್ಕ್ ಪ್ರವೇಶ ಶುಲ್ಕದಿಂದ 54,000 ರೂ., ಆನ್‌ಲೈನ್ ಸಫಾರಿ ಶುಲ್ಕದಿಂದ 42,250 ರೂ. ಹಾಗೂ ಆನ್‌ಲೈನ್ ಪಾರ್ಕ್ ಪ್ರವೇಶ ಶುಲ್ಕದಿಂದ 35,100 ರೂ ಸಂಗ್ರಹವಾಗಿದೆ. ಕ್ಯಾಮರಾ ಶುಲ್ಕದಿಂದ 7,080 ರೂ., ಜಿಎಸ್ ಬೆಟ್ಟ ಪಾರ್ಕಿಂಗ್‌ನಿಂದ 4,132 ರೂ ಹಾಗೂ




ಜೆಎಲ್‌ಆರ್‌ನಿಂದ 60,160 ರೂ. ಆದಾಯ ಬಂದಿದೆ. ಜೆಎಲ್‌ಆರ್ ಆದಾಯವೂ ಸೇರಿದಂತೆ ಒಟ್ಟು 2,72,824 ರೂ. ಸಂಗ್ರಹವಾಗಿದ್ದು, ಸಫಾರಿ ದರ ಪರಿಷ್ಕರಣೆಯ ಮೊದಲ ದಿನವೇ ಉತ್ತಮ ಆದಾಯ ಬಂದಿದೆ.

**ಪ್ರವಾಸಿಗರಿಗೆ ವನ್ಯಜೀವಿಗಳ ದರ್ಶನ:**

ಸಫಾರಿಗೆ ತೆರಳಿದ ಪ್ರವಾಸಿಗರಿಗೆ ಮೊದಲ ದಿನವೇ ಹುಲಿ, ಚಿರತೆ, ಆನೆ, ಸಾಂಬಾರ್ ಹಾಗೂ ಗೌರ್ ಸೇರಿದಂತೆ ಹಲವು ವನ್ಯಜೀವಿಗಳ ದರ್ಶನವಾಗಿದೆ. ಜೆಎಲ್‌ಆರ್ ಸಫಾರಿಯಲ್ಲಿಯೂ ಹುಲಿ, ಚಿರತೆ, ಆನೆ, ಸಾಂಬಾರ್ ಮತ್ತು ಗೌರ್ ಕಾಣಿಸಿಕೊಂಡಿದ್ದು, ಪ್ರವಾಸಿಗರಲ್ಲಿ ಸಂತಸ ಮೂಡಿಸಿತು.

ಕರ್ನಾಟಕ ಸರ್ಕಾರ ಆಯುಷ್ ಇಲಾಖೆ
ಜಿಲ್ಲಾ ಪಂಚಾಯತ್, ಹಾಸನ
ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಆಯುಷ್ ಇಲಾಖೆ, ಹೊಸಲೈನ್ ರಸ್ತೆ, ಹಾಸನ–573201
E-mail: dao.hassan09@gmail.com ದೂರವಾಣಿ ಸಂ:08172–272272
ಸಂ: ಜಿಆಕಹಾ/69/ಬ.ಮೆ/ಸಿ(1)2024–25 ದಿನಾಂಕ: 27.08.2026

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

ಜಿಲ್ಲಾ ಆಯುಷ್ ಕಛೇರಿಯ ವ್ಯಾಪ್ತಿಯಲ್ಲಿರುವ ಆಸ್ಪತ್ರೆ/ಚಿಕಿತ್ಸಾಲಯಗಳ ವೈದ್ಯಕೀಯ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ನೋಂದಾಯಿತ ಏಜೆನ್ಸಿಯವರಿಂದ 01 ವರ್ಷದ ಅವಧಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ದಿನಾಂಕ: 27.08.2026 ರಿಂದ 11.09.2026 ರವರೆಗೆ ಆನ್ ಲೈನ್‌ನಲ್ಲಿ ಅರ್ಜಿಯನ್ನು ಪಡೆದು ಸಲ್ಲಿಸುವುದು. ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.kppp.karnataka.gov.in ವೆಬ್‌ಸೈಟ್ ಅಧಿಸೂಚನೆ ಸಂಖ್ಯೆ: AYD/2026-27/SE0226/CALL-2 ನಲ್ಲಿ ನೋಡಬಹುದಾಗಿದೆ.

ಸಹಿ/–ಜಿಲ್ಲಾ ಆಯುಷ್ ಅಧಿಕಾರಿಗಳು,
ಜಿಲ್ಲಾ ಆಯುಷ್ ಕಛೇರಿ, ಹಾಸನ ಜಿಲ್ಲೆ.
ವಾಸಾಸಂಇ/ಹಿಸನಿ/ಹಾಸನ/450/ಕೆಎಸ್‌ಎಂಸಿಎ/2026–27

355ನೇ ಆರಾಧನಾ ಮಹೋತ್ಸವ ಅತ್ಯಂತ ಭಕ್ತಿ–ಭಾವ ಮತ್ತು ಸಂಭ್ರದಿಂದ ಆಚರಣೆ

# ಶ್ರೀ ಗುರು ರಾಘವೇಂದ್ರರಾಯರ ಉತ್ತರಾರಾಧನೆ ಸಂಪನ್ನ

ರಾಮನಗರ: ಶ್ರೀ ಗುರು ರಾಘವೇಂದ್ರರಾಯರ 355ನೇ ಆರಾಧನಾ ಮಹೋತ್ಸವ ಅತ್ಯಂತ ಭಕ್ತಿ–ಭಾವ ಮತ್ತು ಸಂಭ್ರದಿಂದ ಆಚರಣೆಯಾಗಿದ್ದು ಸೋಮಾರ ಸಂಪನ್ನಗೊಂಡಿತು.

ಇಲ್ಲಿನ ಅಗ್ರಹಾರದಲ್ಲಿರುವ ಶ್ರೀ ಗುರು ರಾಘವೇಂದ್ರ ಸ್ವಾಮಿ ಮಠದಲ್ಲಿ 355ನೇ ಆರಾಧನಾ ಮಹೋತ್ಸವದ ಅಂಗವಾಗಿ ಶನಿವಾರದಿಂದ ಸೋಮವಾರದವರೆವಿಗೂ ಮೂರು ದಿನಗಳ ಕಾಲ ವಿಶೇಷ ಪೂಜೆ, ವಿವಿಧ ದಾರ್ಮಿಕ ಕಾರ್ಯಕ್ರಮಗಳು ನೆರವೇರಿದವು. ಮೊದಲ ದಿನ ಪೂರ್ವಾರಾಧನೆ, 2ನೇ ದಿನ ಮಧ್ಯರಾಧನೆ ವಿಜೃಂಭಣೆಯಿಂದ ಜರುಗಿದರೆ, ಕಡೆಯ ದಿನ ಸೋಮವಾರ ಉತ್ತರಾರಾಧನೆ ನಡೆಯಿತು. ಉತ್ತರಾರಾಧನೆ ದಿನದ ಅಂಗವಾಗಿ ರಾಜಬೀದಿಗಳಲ್ಲಿ ಭಕ್ತರ ನೇತೃತ್ವದಲ್ಲಿ ಮಹಾರಥೋತ್ಸವ ಅದ್ದೂರಿಯಾಗಿ ನಡೆದು ಸಹಸ್ರಾರು ಭಕ್ತರು ಕಣ್ತುಂಬಿಕೊಂಡರು.

ಬೆಳಗ್ಗೆಯಿಂದಲೇ ನಿರ್ಮಾಲ್ಯ ವಿಸರ್ಜನೆ, ಉಷಃಕಾಲ ಪೂಜೆ ಕ್ಷೀರಾಭಿಷೇಕ, ಫಲ ಪಂಚಾಮೃತಾಭಿಷೇಕ, ತುಳಸಿಪೂಜೆ, ಶ್ರೀ ರಾಯರಪೂಜೆ ವೃಂದಾವನಕ್ಕೆ ವಿಶೇಷ ಹೂವಿನ ಅಲಂಕಾರ ನಡೆದವು. ಈ ಎಲ್ಲ ಪೂಜೆ ಪ್ರಕಾರಗಳನ್ನು ಕಣ್ತುಂಬಿ ನೋಡಿದ ಭಕ್ತರು ಧನ್ಯತಾಭಾವ ಮೆರೆದರು. ವಿವಿಧ ಹೂವುಗಳಿಂದ ಅಲಂಕೃತ ಭವ್ಯ ರಥದಲ್ಲಿ ರಜತ ಮಂಟಪದಲ್ಲಿ ಪ್ರತಷ್ಠಾಪಿತ ಗುರು ರಾಘವೇಂದ್ರ ಸ್ವಾಮಿಯವರ ದರ್ಶನ ಮಾಡಿದ ನಾಗರಿಕರು ಪ್ರಾರ್ಥನೆ ಸಲ್ಲಿಸಿದರು. ಡೊಳ್ಳು ಕುಣಿತ, ಭಜನೆ, ಮಂಗಳವಾದ್ಯದೊಂದಿಗೆ ಪ್ರಾರಂಭಗೊಂಡ ಮಹಾರಥೋತ್ಸವ ಮೆರವಣಿಗೆ ಅಗ್ರಹಾರ ಬೀದಿ, ಎಂ.ಜಿ.ರಸ್ತೆ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಶ್ರೀ ಮಠಕ್ಕೆ ಹಿಂತಿರುಗಿತು. ಭಕ್ತರು ಶ್ರೀರಾಯರ ರಥೋತ್ಸವಕ್ಕೆ ಹಣ್ಣು, ಹೂವು, ತೆಂಗಿನಕಾಯಿ ಅರ್ಪಿಸಿ ರಾಯರ ಕೃಪೆಗೆ ಪಾತ್ರರಾದರು.



ಬಳಿಕ ಶ್ರೀ ರಾಯರ ಮಠದಲ್ಲಿ ಪುಷ್ಪಾರ್ಚನೆ, ಕನಕಾಭಿಷೇಕ, ಅಲಂಕಾರ ಸೇವೆ, ನೈವೇದ್ಯ, ತೊಟ್ಟಿಲು ಉತ್ಸವ, ಅಷ್ಟೋದ್ದಕ ಮಹಾಮಂಗಳಾರತಿ ನೆರವೇರಿತು. ಮಹಾರಥೋತ್ಸವ ಹಾಗೂ ಮಠದಲ್ಲಿ ನಡೆದ ಧಾರ್ಮಿಕ ಕಾರ್ಯಕ್ರಮ ವೇಳೆ ವಿಪ್ರ ಮಹಿಳಾ ಮಂಡಳಿಯ ಸದಸ್ಯರು ಭಜನೆ ಹಾಡುಗಳನ್ನು ಹಾಡಿದರು. ತೀರ್ಥಪ್ರಸಾದ ವಿನಿಯೋಗದೊಂದಿಗೆ ರಾಯರ ಆರಾಧನಾ ಮಹೋತ್ಸವ ಸಂಪನ್ನವಾಯಿತು. ಆರಾಧನಾ ಮಹೋತ್ಸವದಲ್ಲಿ ಪ್ರಧಾನ ಅರ್ಚಕ ಹಾಗೂ ವ್ಯವಸ್ಥಾಪಕ ಮಾಧ್ವಚಾರ್ಯ, ಅರ್ಚಕರಾದ ನರಹರಿ, ಪ್ರವೀಣ, ಬ್ರಾಹ್ಮಣ ಮಹಾಸಭಾದ ತಾಲ್ಲೂಕು ಅಧ್ಯಕ್ಷ ಆರ್.ವಿ.ಚಂದ್ರಶೇಖರ್, ಪ್ರಮುಖರಾದ ಸೋಮಶೇಖರ್, ಸೀತಾರಾಮ, ಪ್ರಭಂಜನ್ ಆಚಾರ್, ಕೃಷ್ಣ ಫಗ್ನವೀಸ್, ದೀಪು ಡಾ.ರಾಘವೇಂದ್ರ, ಪ್ರಮೋದ್ (ಮೋದಿ), ಚಂದ್ರು, ಅನಂತಮೂರ್ತಿ, ಶ್ರೀಧರ್, ಹರ್ಷ, ವಿಪ್ರ ಮಹಿಳಾ ಮಂಡಳಿಯ ಸದಸ್ಯರು ಸೇರಿದಂತೆ ಹಲವರು ಭಾಗಿಯಾಗಿದ್ದರು.

# ಆದಾಯ ತರುವ ತೋಟಗಾರಿಕೆ ಬೆಳೆಗಳಿಗೆ ಆದ್ಯತೆ ನೀಡಿ: ಸಿಇಓ ನಂದಿನಿ

**ಮಂಡ್ಯ:** ರೈತರು ತಮ್ಮ ಜಮೀನಿನ ಮಣ್ಣಿನ ಗುಣಲಕ್ಷಣ, ನೀರಾವರಿ ಲಭ್ಯತೆ ಹಾಗೂ ಮಾರುಕಟ್ಟೆ ಬೇಡಿಕೆಯನ್ನು ಪರಿಗಣಿಸಿ, ಕಡಿಮೆ ನೀರು ಬಳಸಿ ಹೆಚ್ಚಿನ ಆದಾಯ ಗಳಿಸಬಹುದಾದ ತೋಟಗಾರಿಕೆ ಬೆಳೆಗಳಿಗೆ ಆದ್ಯತೆ ನೀಡಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಂದಿನಿ ಕೆ.ಆರ್. ಅವರು ಸಲಹೆ ನೀಡಿದರು.

ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ವಿ.ಸಿ.ಫಾರಂ, ಮಂಡ್ಯದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ರೈತರಿಗಾಗಿ ರಾಷ್ಟ್ರೀಯ ತೋಟಗಾರಿಕೆ ಮಂಡಳಿ ವತಿಯಿಂದ ಒದಗಿಸಲಾಗುವ ವಿವಿಧ ಯೋಜನೆಗಳ ಕುರಿತು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ಕೆ.ಸಿ. ನಾರಾಯಣಸ್ವಾಮಿ ಅವರು ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿದ್ದು, ಕಡಿಮೆ ಹಿಡುವಳಿಯಲ್ಲಿ ಮಣ್ಣಿನ ಗುಣಲಕ್ಷಣ, ನೀರಾವರಿ ಹಾಗೂ ಮಾರುಕಟ್ಟೆ ಸೌಲಭ್ಯಗಳನ್ನು ಆಧರಿಸಿ ಸೂಕ್ತ ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದರಿಂದ ರೈತರು ಆರ್ಥಿಕವಾಗಿ ಲಾಭ ಪಡೆಯಬಹುದು ಎಂದು ತಿಳಿಸಿದರು.

ರಾಷ್ಟ್ರೀಯ ತೋಟಗಾರಿಕೆ ಮಂಡಳಿಯ ಉಪ ನಿರ್ದೇಶಕರಾದ ಬಿ. ರಾಜಾ ಅವರು ಮಂಡಳಿಯಿಂದ ರೈತರಿಗೆ ದೊರೆಯುವ ವಿವಿಧ ಸೌಲಭ್ಯಗಳು ಹಾಗೂ ಯೋಜನೆಗಳ ಕುರಿತು ಮಾಹಿತಿ ನೀಡಿದರು.

ಹವಾಮಾನ ವೈಪರೀತ್ಯಕ್ಕೆ ಅನುಗುಣವಾಗಿ ಬೆಳೆ ಪದ್ಧತಿ ಅಳವಡಿಸಿಕೊಳ್ಳಿ ವರ್ಷ ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ ಪ್ರಗತಿಪರ ರೈತರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ವರ್ಷ ಎಲ್-ನಿನೋ ಪರಿಣಾಮದಿಂದ ಮುಂಗಾರು ಮಳೆ ಕ್ಷೀಣಿಸಿರುವ ಹಿನ್ನೆಲೆಯಲ್ಲಿ ಅಚ್ಚುಕಟ್ಟು ಪ್ರದೇಶಗಳಲ್ಲಿ ಭತ್ತ ಹಾಗೂ ಕಬ್ಬಿನಂತಹ ಹೆಚ್ಚಿನ ನೀರಿನ ಅವಶ್ಯಕತೆಯಿರುವ ಬೆಳೆಗಳ ಬದಲಿಗೆ ಕಡಿಮೆ ನೀರು ಬಳಸಿ ಬೆಳೆಯಬಹುದಾದ ಅರೆಖುಷ್ಕಿ ಬೆಳೆಗಳನ್ನು ಬೆಳೆಯುವ ಕುರಿತು ರೈತರಿಗೆ ಮಾಹಿತಿ ನೀಡಲಾಗಿದೆ ಎಂದು ಸಿಇಓ ತಿಳಿಸಿದರು.

ಪ್ರತಿ ವರ್ಷ ಹವಾಮಾನ ವೈಪರೀತ್ಯದಿಂದ ರೈತರು ಕೃಷಿಯಲ್ಲಿ ನಷ್ಟ ಅನುಭವಿಸುತ್ತಿರುವ ಹಿನ್ನೆಲೆಯಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಶಿಫಾರಸು ಮಾಡುವ ವೈಜ್ಞಾನಿಕ ಹಾಗೂ ಹವಾಮಾನಾಧಾರಿತ ಬೆಳೆ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಅವರು ಸಲಹೆ ನೀಡಿದರು.

**ನೈಸರ್ಗಿಕ ಕೃಷಿಗೆ ಉತ್ತೇಜನ;** ರಾಷ್ಟ್ರೀಯ ನೈಸರ್ಗಿಕ ಕೃಷಿ ಅಭಿಯಾನದಡಿ ಜಿಲ್ಲೆಯಲ್ಲಿ ಕಳೆದ ವರ್ಷ 34 ಗುಚ್ಛಗ್ರಾಮಗಳ 4,250 ರೈತರಿಗೆ ಹಾಗೂ ಪ್ರಸಕ್ತ ವರ್ಷ 104 ಗುಚ್ಛಗ್ರಾಮಗಳ 1,300 ರೈತರಿಗೆ ನೈಸರ್ಗಿಕ ಕೃಷಿ ಅಳವಡಿಕೆಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಸಿಇಓ ತಿಳಿಸಿದರು.

ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಪಾಂಡವಪುರ ತಾಲ್ಲೂಕನ್ನು ಸಾವಯವ ತಾಲ್ಲೂಕು ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ ಈ ವರ್ಷ ಮೇಲುಕೋಟೆ ಹೋಬಳಿಯಲ್ಲಿ ಸಾವಯವ ಕೃಷಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅಂತಿಮ ವರ್ಷದ ಕೃಷಿ ಪದವಿ ವಿದ್ಯಾರ್ಥಿಗಳು ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರ (ಖಘಇಕ)ದ ಸಂದರ್ಭದಲ್ಲಿ ರೈತರಿಗೆ ಸಾವಯವ ಹಾಗೂ ನೈಸರ್ಗಿಕ ಕೃಷಿಯ ಕುರಿತು ಹೆಚ್ಚಿನ ಮಾಹಿತಿ ನೀಡುವಂತೆ ಅವರು ಸೂಚಿಸಿದರು.

**ಅಂತರ ಬೆಳೆಯಿಂದ ಮಧ್ಯಂತರ ಆದಾಯ:** ನಾಲಾ ನೀರಿನ ಮೇಲೆ ಅವಲಂಬಿತರಾಗದೆ ಬೋರ್‌ವೆಲ್ ನೀರಿನ ಸೌಲಭ್ಯ ಹೊಂದಿರುವ ಹಾಗೂ ಹನಿ ನೀರಾವರಿ ಅಳವಡಿಸಿಕೊಂಡಿರುವ ಅಗಲ ಅಂತರ ಪಟ ಪದ್ಧತಿಯಲ್ಲಿ ಕಬ್ಬು ಬೆಳೆಯುವ ರೈತರು ಅಂತರ ಬೆಳೆಗಳನ್ನು ಬೆಳೆಯುವ ಮೂಲಕ ಮಧ್ಯಂತರ ಆದಾಯ ಗಳಿಸಬಹುದು ಎಂದು ಸಿಇಓ ತಿಳಿಸಿದರು.

4x5 ಅಡಿ ಅಂತರದ ಪಟದಲ್ಲಿ ಆರಂಭಿಕ ಮೂರು ತಿಂಗಳಲ್ಲಿ ಅಂತರ ಬೆಳೆಗಳನ್ನು ಬೆಳೆಯಬಹುದಾಗಿದೆ. ಜಿಲ್ಲೆಯ ಹಲವಾರು ನೈಸರ್ಗಿಕ ಕೃಷಿಕರು 12 ಅಡಿ ಅಂತರದ ಪಟದಲ್ಲಿ ಕಬ್ಬು ಬೆಳೆದು, ವರ್ಷಪೂರ್ತಿ ಅಂತರ ಬೆಳೆಯಾಗಿ ಸೊಪ್ಪು ಹಾಗೂ ತರಕಾರಿಗಳನ್ನು ಬೆಳೆಸುತ್ತಿದ್ದಾರೆ. ಇಂತಹ ರೈತರು ತಮ್ಮ ಉತ್ಪನ್ನಗಳನ್ನು ಬುಧವಾರ ಮತ್ತು ಭಾನುವಾರ ಮಂಡ್ಯದ ತೋಟಗಾರಿಕೆ ಕಚೇರಿ ಎದುರು ನಡೆಯುವ ಸಾವಯವ ಸಂತೆಯಲ್ಲಿ ಮಾರಾಟ ಮಾಡಿ ಉತ್ತಮ ಆದಾಯ ಗಳಿಸುತ್ತಿರುವುದಾಗಿ ಅವರು ತಿಳಿಸಿದರು.

**ಸಮಗ್ರ ಬೆಳೆ ನಿರ್ವಹಣಾ ಪದ್ಧತಿ ಅಳವಡಿಸಿಕೊಳ್ಳಿ:** ಸಾವಯವ ಹಾಗೂ ನೈಸರ್ಗಿಕ ಕೃಷಿಯನ್ನು ರೈತರು ಹಂತಹಂತವಾಗಿ ಅಳವಡಿಸಿಕೊಳ್ಳಬೇಕಿದೆ. ಪ್ರಸ್ತುತ ಸಾವಯವ ಅಥವಾ ನೈಸರ್ಗಿಕ ಕೃಷಿಗೆ ಸಂಪೂರ್ಣವಾಗಿ ಪರಿವರ್ತನೆಗೊಳ್ಳಲು ಸಾಧ್ಯವಾಗದ ರೈತರು ಕೃಷಿ ವಿಶ್ವವಿದ್ಯಾಲಯ ಶಿಫಾರಸು ಮಾಡುವ ಸಮಗ್ರ ಬೆಳೆ ನಿರ್ವಹಣಾ ಪದ್ಧತಿಗಳನ್ನು ಅಳವಡಿಸಿಕೊಳ್ಳಬೇಕು ಇದರಿಂದ ಕಡಿಮೆ ವೆಚ್ಚದಲ್ಲಿ ಸುಸ್ಥಿರ ಇಳುವರಿ ಪಡೆಯುವುದರ ಜೊತೆಗೆ ಪರಿಸರ, ಮಣ್ಣು ಹಾಗೂ ನೀರಿನ ಸಂರಕ್ಷಣೆಯನ್ನೂ ಮಾಡಬಹುದಾಗಿದೆ ಎಂದು ಅವರು ಹೇಳಿದರು.

**ರಾಸಾಯನಿಕ ಬಳಕೆಯಿಂದ ನೀರಿನ ಗುಣಮಟ್ಟದ ಮೇಲೂ ಪರಿಣಾಮ:** ಕೃಷಿಯಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಜಿಲ್ಲೆಯ 200ಕ್ಕೂ ಹೆಚ್ಚು ಬೋರ್‌ವೆಲ್‌ಗಳಲ್ಲಿ ನಿಗದಿತ ಪರಿಮಿತಿಗಿಂತ ಹೆಚ್ಚಿನ ಪ್ರಮಾಣದ ನೈಟ್ರೇಟ್ ಹಾಗೂ ಫ್ಲೋರೈಡ್ ಅಂಶ ಕಂಡುಬಂದಿದೆ. ಇಂತಹ ಬೋರ್‌ವೆಲ್‌ಗಳ ನೀರು ಕುಡಿಯಲು ಯೋಗ್ಯವಲ್ಲ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡಲಾಗಿದೆ ಎಂದು ಸಿಇಓ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರಾದ ಡಾ. ಪಿ.ಎಸ್. ಫಾತಿಮಾ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಡೀನ್ (ಸ್ನಾತಕೋತ್ತರ) ಡಾ. ಚಂದ್ರಪ್ಪ, ಬೇಸಾಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ ಡಾ. ಯೋಗಾನಂದ ಮತ್ತು ವಲಯ ಕೃಷಿ ಸಂಶೋಧನಾ ಕೇಂದ್ರದ ಸಹ ಸಂಶೋಧನಾ ನಿರ್ದೇಶಕರಾದ ಡಾ. ಮಹದೇವ ಸೇರಿದಂತೆ ಇತರ ಅಧಿಕಾರಿಗಳು, ಕೃಷಿ ವಿಜ್ಞಾನಿಗಳು, ಕೃಷಿ ವಿದ್ಯಾರ್ಥಿಗಳು ಹಾಗೂ ರೈತರು ಭಾಗವಹಿಸಿದ್ದರು.




### ಸುರಕ್ಷಿತ ಕೀಟನಾಶಕ ಬಳಕೆ ಅತಿ ಮುಖ್ಯ

ಇತ್ತೀಚಿನ ವರದಿಗಳಲ್ಲಿ ರೈತರ ರಕ್ತದ ಮಾದರಿಗಳಲ್ಲಿ ರಾಸಾಯನಿಕ ಅಂಶಗಳು ಪತ್ತೆಯಾಗಿರುವುದು ಕಳವಳಕಾರಿ ಸಂಗತಿಯಾಗಿದೆ. ಆದ್ದರಿಂದ ಕೀಟನಾಶಕ ಸಿಂಪಡಣೆ ಸಂದರ್ಭದಲ್ಲಿ ರೈತರು ಅಗತ್ಯ ಮುನ್ನೆಚ್ಚರಿಕೆ ವಹಿಸುವುದು ಅತ್ಯಂತ ಮುಖ್ಯ. ಕೀಟನಾಶಕ ಸಿಂಪಡಿಸುವಾಗ ರೈತರು ಕಡ್ಡಾಯವಾಗಿ ಕೈಗವಸು ಹಾಗೂ ಮಾಸ್ಕ್ ಧರಿಸಬೇಕು. ಗಾಳಿ ಬೀಸುವ ದಿಕ್ಕಿಗೆ ಅನುಗುಣವಾಗಿ ಸಿಂಪಡಣೆ ಮಾಡಬೇಕು. ಯಾವುದೇ ಕಾರಣಕ್ಕೂ ಔಷಧ ಸಿಂಪಡಿಸುವ ಸಂದರ್ಭದಲ್ಲಿ ನೀರು ಕುಡಿಯುವುದು ಅಥವಾ ಆಹಾರ ಸೇವಿಸುವುದನ್ನು ಮಾಡಬಾರದು. ಸಿಂಪಡಣೆ ಪೂರ್ಣಗೊಂಡ ತಕ್ಷಣ ಕೈ ಮತ್ತು ಮುಖವನ್ನು ಸೋಪಿನಿಂದ ಸ್ವಚ್ಛವಾಗಿ ತೊಳೆಯಬೇಕು, ಸ್ನಾನ ಮಾಡಬೇಕು ಹಾಗೂ ಬಳಸಿದ ಬಟ್ಟೆಗಳನ್ನು ಪ್ರತ್ಯೇಕವಾಗಿ ತೊಳೆಯಬೇಕು ಎಂದು ಅವರು ತಿಳಿಸಿದರು.

# ಗ್ರಾಮೀಣ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಲು ಸಚಿವ ಖಂಡ್ರೆ ಸೂಚನೆ

**ಮಂಡ್ಯ:** ಈ ಬಾರಿ ಎಲ್ ನಿನೋ ಪ್ರಭಾವದಿಂದ ಮಳೆಯ ಕೊರತೆ ಆಗಿದ್ದು, ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಕೊರತೆ ಆಗದಂತೆ ಆದ್ಯತೆಯ ಮೇಲೆ ಕ್ರಮ ವಹಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಬಿ ಖಂಡ್ರೆ ಸೂಚಿಸಿದರು.



ಹುಣಸೂರಿನಿಂದ ಬೆಂಗಳೂರಿಗೆ ಹೋಗುವ ಮಾರ್ಗದಲ್ಲಿ ಮಂಡ್ಯ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಅವರಿಂದ ಇಲಾಖೆಯ ವಿವಿಧ ಯೋಜನೆಗಳ ಮಾಹಿತಿ ಪಡೆದ ಅವರು, ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಕೊರತೆ ಆಗದಂತೆ ಸಂಬಂಧಿತ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಲು ತಿಳಿಸಿದರು.

ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿಬಿಜಿ ರಾಮ್ ಜಿಯಡಿ ಜಿಲ್ಲೆಯಲ್ಲಿ ಹೆಚ್ಚಿನ ಉದ್ಯೋಗ ನೀಡುವುದರ ಜೊತೆಗೆ ಗ್ರಾಮಾಭಿವೃದ್ಧಿಗೆ ಪೂರಕವಾದ ಕಾಮಗಾರಿ ಕೈಗೊಂಡು ಗ್ರಾಮಗಳಲ್ಲಿ ಶಾಶ್ವತವಾದ ಆಸ್ತಿಗಳ ನಿರ್ಮಾಣ ಮಾಡಲು ತಿಳಿಸಿದರು.

ವಿಬಿಜಿ ರಾಮ್ ಜಿಯಡಿ ಕೆಲಸ ಮಾಡಿದ ಕಾರ್ಮಿಕರಿಗೆ 15 ದಿನಗಳ ಒಳಗಾಗಿ ಕೂಲಿ ಹಣ ಅವರ ಬ್ಯಾಂಕ್ ಖಾತೆಗೆ ಸಂದಾಯವಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಿ, ಹಣ ಬಾರದಿದ್ದರೆ ಜನ ಕೆಲಸಕ್ಕೆ ಬರುವುದಿಲ್ಲ ಎಂದು ತಿಳಿಸಿದರು.

ಇ-ಸ್ವತ್ತಿಗಾಗಿ ಸಲ್ಲಿಸಿರುವ ಅರ್ಜಿಗಳ ತ್ವರಿತ ವಿಲೇವಾರಿ ಮಾಡುವಂತೆಯೂ ಆದೇಶಿಸಿದ ಈಶ್ವರ ಖಂಡ್ರೆ, ಅರಿವು ಕೇಂದ್ರಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಬರುವಂತೆ ಮತ್ತು ಅವರಲ್ಲಿ ಓದುವ ಹವ್ಯಾಸ ಬೆಳೆಸಲು ಜಾಗೃತಿ ಮೂಡಿಸುವಂತೆಯೂ ತಿಳಿಸಿದರು.

## ಸಾಂಬ ಸದಾಶಿವ ಸ್ವಾಮೀಜಿ ಅವರಿಗೆ ಗೌರವ ಸಮರ್ಪಣೆ

**ಕೆ.ಆರ್.ನಗರ:** ಕರುನಾಡ ದೀಪ ಸೇವಾ ಟ್ರಸ್ಟ್ ವತಿಯಿಂದ ಮಾದಹಳ್ಳಿಯ ಉಕ್ಕಿನ ಕಂತೆ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಚಿತ್ರನಟ ಶಂಕರ್ ಅಶ್ವತ್, ಕರುನಾಡ ದೀಪ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಟಿ. ಮೋಹನ್ ಕುಮಾರ್, ಚಿತ್ರನಟಿ ಕಾವ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೋಮಶೇಖರ್, ನಂಜನಗೂಡು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಕರಳಾಪುರ ನಾಗರಾಜು, ಗ್ರಾಮೀಣ ನಿಧಿ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಕೆ.ಆರ್. ಶ್ಯಾಮಸುಂದರ್, ನಿರ್ದೇಶಕ ಎಂ.ಎಸ್. ನರಸಿಂಹ ಸೇರಿದಂತೆ ಹಲವರು ಉಪಸ್ಥಿತರಿದ್ದರು.




ಕಾರ್ಯಕ್ರಮದಲ್ಲಿ ಸ್ವಾಮೀಜಿಯವರ ಧಾರ್ಮಿಕ ಹಾಗೂ ಸಾಮಾಜಿಕ ಸೇವೆಯನ್ನು ಸ್ಮರಿಸಿ ಗೌರವ ಸಲ್ಲಿಸಲಾಯಿತು. ಗಣ್ಯರು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಾಮೀಜಿಯವರಿಗೆ ಶುಭ ಹಾರೈಸಿದರು.

# 15 ದಿನದಲ್ಲಿ ಕೆ.ಆರ್.ಎಸ್. ಹಿನ್ನೀರಿನ ಒತ್ತುವರಿ ಜಮೀನುಗಳ ಜಂಟಿ ಸರ್ವೆ ಪೂರ್ಣಗೊಳಿಸಿ: ಡಿಸಿ

**ಮಂಡ್ಯ:** ಕೆ.ಆರ್.ಎಸ್. ಸಾಗರದ ಹಿನ್ನೀರಿನ ಪ್ರದೇಶದಲ್ಲಿ ಒತ್ತುವರಿಯಾಗಿರುವ ಜಮೀನುಗಳ ಜಂಟಿ ಸರ್ವೆ ಕಾರ್ಯವನ್ನು 15 ದಿನಗಳೊಳಗಾಗಿ ಪೂರ್ಣಗೊಳಿಸಿ, ನಕ್ಷೆ ಸಹಿತ ಸಮಗ್ರ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಡಾ. ಕುಮಾರ ಡಿಡಿಎಲ್‌ಆರ್ ಅವರಿಗೆ ಸೂಚನೆ ನೀಡಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಕೆ.ಆರ್ ಸಾಗರ ಅಣೆಕಟ್ಟು ಹಿನ್ನೀರಿನ ಪ್ರದೇಶಗಳಲ್ಲಿ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿದ್ದು ಅವುಗಳನ್ನು ತೆರವುಗೊಳಿಸಿರುವ ಸಂಬಂಧ ಸಭೆ ನಡೆಸಿ ಮಾತನಾಡಿದರು.

ಕೆ.ಆರ್.ಎಸ್. ಹಿನ್ನೀರಿನ ಪ್ರದೇಶದಲ್ಲಿ ಒತ್ತುವರಿ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಕಂದಾಯ ಇಲಾಖೆ ಹಾಗೂ ಕಾವೇರಿ ನಿಗಮದ ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಿ ಒತ್ತುವರಿ ಜಮೀನುಗಳನ್ನು ನಿಖರವಾಗಿ ಗುರುತಿಸಬೇಕು ಎಂದು ನಿರ್ದೇಶನ ನೀಡಿದರು.




ಜಂಟಿ ಸರ್ವೆ ಸಂದರ್ಭದಲ್ಲಿ ಜಮೀನಿನ ಸರ್ವೆ ಸಂಖ್ಯೆ, ವಿಸ್ತೀರ್ಣ, ಗಡಿ ಹಾಗೂ ಒತ್ತುವರಿಯ ಸ್ವರೂಪವನ್ನು ನಿಖರವಾಗಿ ದಾಖಲಿಸಿ, ನಕ್ಷೆ ಸಹಿತ ವರದಿ ಸಿದ್ಧಪಡಿಸಬೇಕು. ಯಾವುದೇ ಗೊಂದಲಕ್ಕೆ ಅವಕಾಶವಾಗದಂತೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ, ಸ್ಥಳ ಪರಿಶೀಲನೆಯೊಂದಿಗೆ ಸರ್ವೆ ಕಾರ್ಯವನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಸರ್ವೆ ಕಾರ್ಯಕ್ಕೆ ಅಗತ್ಯವಿರುವ ದಾಖಲೆಗಳು, ತಾಂತ್ರಿಕ ಮಾಹಿತಿ ಹಾಗೂ ಸ್ಥಳೀಯ ಸಹಕಾರವನ್ನು ಒದಗಿಸುವಂತೆ ಕಾವೇರಿ ನಿಗಮದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಅವರು ಸೂಚಿಸಿದರು.

ಕೆ.ಆರ್.ಎಸ್. ಹಿನ್ನೀರಿನ ಪ್ರದೇಶದಲ್ಲಿರುವ ಸರ್ಕಾರಿ ಜಮೀನುಗಳನ್ನು ಸಂರಕ್ಷಿಸುವುದು ಹಾಗೂ ಒತ್ತುವರಿಯನ್ನು ನಿಯಂತ್ರಿಸುವುದು ಅತ್ಯಂತ ಮುಖ್ಯವಾಗಿದ್ದು, ಈ ವಿಚಾರದಲ್ಲಿ ಯಾವುದೇ ನಿರ್ಲಕ್ಷ್ಯಕ್ಕೆ ಅವಕಾಶ ನೀಡಬಾರದು. ಸರ್ವೆ ಕಾರ್ಯವನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಮಂಡ್ಯ ಉಪವಿಭಾಗಾಧಿಕಾರಿ ಶಿವ ಮೂರ್ತಿ, ಡಿಎಲ್ ಆರ್ ವಿರೂಪಾಕ್ಷ, ಪಾಂಡವಪುರ ತಹಶೀಲ್ದಾರ್ ಆದರ್ಶ್, ಕೆ. ಆರ್. ಪೇಟೆ ತಹಶೀಲ್ದಾರ್ ಶ್ರೇಯಸ್, ವೀರಪ್ಪನ್ನ ತಹಸಿಲ್ದಾರ್ ಚೇತನಾ ಯಾದವ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುಡಿವ ನೀರು ಯೋಜನೆ ಕಾಮಗಾರಿ ಪರಿಶೀಲಿಸಿದ ಜಿ.ಪಂ. ಸಿಇಓ

**ಮಂಡ್ಯ:** ಪಾಂಡವಪುರ, ಕೆ.ಆರ್.ಪೇಟೆ ಹಾಗೂ ನಾಗಮಂಗಲ ತಾಲ್ಲೂಕುಗಳ 790 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಉದ್ದೇಶದಿಂದ ಕೈಗೆತ್ತಿಕೊಳ್ಳಲಾಗಿರುವ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್ 2026ರ ಅಂತ್ಯದೊಳಗೆ ಪೂರ್ಣಗೊಳಿಸಿ, ನೀರು ಸರಬರಾಜು ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನಂದಿನಿ ಕೆ.ಆರ್. ಅವರು ಅಧಿಕಾರಿಗಳು ಹಾಗೂ ಗುತ್ತಿಗೆ ಸಂಸ್ಥೆಗೆ ಸೂಚಿಸಿದರು.

ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯಡಿ ಕೈಗೊಳ್ಳಲಾಗುತ್ತಿರುವ ಜಾಕ್‌ವೆಲ್ ಹಾಗೂ ನೀರು ಶುದ್ಧೀಕರಣ ಘಟಕದ ಕಾಮಗಾರಿಗಳನ್ನು ಸಿಇಓ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.



ಯೋಜನೆಯಡಿ ಈಗಾಗಲೇ ಪೂರ್ಣಗೊಂಡಿರುವ ಓವರ್‌ಹೆಡ್ ಟ್ಯಾಂಕ್‌ಗಳಿಗೆ ಜೆಜೆಎಂ ಯೋಜನೆಯಡಿ ಕೊರೆಸಲಾಗಿರುವ ಕೊಳವೆ ಬಾವಿಯಿಂದ ಅಥವಾ ಗ್ರಾಮದಲ್ಲಿನ ಇತರೆ ಕೊಳವೆ ಬಾವಿಯಿಂದ ನೀರು ಸರಬರಾಜು ಮಾಡಿ ಓಹೆಚ್‌ಟಿ ಮೂಲಕ ಗ್ರಾಮದ ಕುಟುಂಬಗಳಿಗೆ ನೀರು ಸರಬರಾಜು ಮಾಡಲು ಅಗತ್ಯವಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಗುತ್ತಿಗೆ ಸಂಸ್ಥೆಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಯೋಜನೆಯ ಪ್ರತಿಯೊಂದು ಘಟಕದ ಕಾಮಗಾರಿಯ ಪ್ರಗತಿ ಕುರಿತು ಅಧಿಕಾರಿಗಳು ಹಾಗೂ ಗುತ್ತಿಗೆ ಸಂಸ್ಥೆಯಿಂದ ವಿವರವಾದ ಮಾಹಿತಿ ಪಡೆದ ಸಿಇಓ ಅವರು, ಬಾಕಿ ಇರುವ ಕಾಮಗಾರಿಗಳಿಗೆ ಘಟಕಾಂಶವಾರು ಕಾಲಮಿತಿಯನ್ನು ನಿಗದಿಪಡಿಸಿ, ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ನಿರ್ದೇಶನ ನೀಡಿದರು.

ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಅರಣ್ಯ ಇಲಾಖೆಯ ಅನುಮೋದನೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮತಿ ಹಾಗೂ ರೈಲ್ವೇ ಇಲಾಖೆಯ ಅನುಮೋದನೆಗಳನ್ನು ಪಡೆದುಕೊಳ್ಳಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ನಿರಂತರವಾಗಿ ಸಮನ್ವಯ ಸಾಧಿಸಿ ಅಗತ್ಯ ಅನುಸರಣೆ ನಡೆಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ನಿಗದಿತ ಅವಧಿಯೊಳಗೆ ಪೂರೈಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿದ್ದು, ಯಾವುದೇ ಕಾರಣಕ್ಕೂ ಕಾಮಗಾರಿಗಳ ಪ್ರಗತಿಯಲ್ಲಿ ವಿಳಂಬವಾಗದಂತೆ ಅಧಿಕಾರಿಗಳು ಹಾಗೂ ಗುತ್ತಿಗೆ ಸಂಸ್ಥೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಇಓ ನಂದಿನಿ ಕೆ.ಆರ್. ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪಾಂಡವಪುರ ಉಪವಿಭಾಗದ ಎಇಇ ಮಮತಾ, ಎಲ್ ಅಂಡ್ ಟಿ ಸಂಸ್ಥೆಯ ಸಿಬ್ಬಂದಿಗಳು ಹಾಜರಿದ್ದರು.

# ಬೆಳೆ ಹಾನಿ ಪ್ರದೇಶಕ್ಕೆ ಉಪಮುಖ್ಯಮಂತ್ರಿ ಭೇಟಿ: ತ್ವರಿತ ಪರಿಹಾರಕ್ಕೆ ಸೂಚನೆ

**ಕೆ.ಆರ್. ನಗರ:** ತಾಲ್ಲೂಕಿನ ವ್ಯಾಪ್ತಿಯ ಕಂಚಗಾರಕೊಪ್ಪಲು ಗ್ರಾಮದಲ್ಲಿ ಉಂಟಾಗಿರುವ ಬರ ಪರಿಸ್ಥಿತಿ ಹಾಗೂ ಬೆಳೆ ಹಾನಿಯನ್ನು ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ. ಪರಮೇಶ್ವರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ರೈತರೊಂದಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಚರ್ಚಿಸಿದ ಅವರು, ಬೆಳೆ ಹಾನಿ ಮತ್ತು ರೈತರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾಹಿತಿ ಪಡೆದುಕೊಂಡರು. ಹಾನಿಯ ಪ್ರಮಾಣವನ್ನು ಪರಿಶೀಲಿಸಿ, ಅಗತ್ಯ ಪರಿಹಾರ ಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.



ಶಾಸಕ ಡಿ. ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ತಾಲ್ಲೂಕು ದಂಡಾಧಿಕಾರಿ ಸುರೇಂದ್ರ ಮೂರ್ತಿ, ರುಕಿಯಾ ಬೇಗಂ, ಬ್ಲಾಕ್ ಅಧ್ಯಕ್ಷರು ಸೇರಿದಂತೆ ಹಲವು ಮುಖಂಡರು, ಗ್ರಾಮಸ್ಥರು ಹಾಗೂ ರೈತರು ಈ ಸಂದರ್ಭದಲ್ಲಿ ಹಾಜರಿದ್ದರು.

# ಸೆ.19ರಂದು ರಾಷ್ಟ್ರೀಯ ಲೋಕ ಅದಾಲತ್

**ಮಂಡ್ಯ:** ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ರಾಜ್ಯಾದ್ಯಂತ ಸೆಪ್ಟೆಂಬರ್ 19, 2026ರಂದು ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿದ್ದು, ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿಯೂ ವಿವಿಧ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು ಸಿದ್ಧತೆ ಕೈಗೊಳ್ಳಲಾಗಿದೆ.

ಲೋಕ ಅದಾಲತ್‌ನಲ್ಲಿ ಆಸ್ತಿ ವಿವಾದಗಳು ಸೇರಿದಂತೆ ಸಿವಿಲ್ ವ್ಯಾಜ್ಯಗಳು, ವಿಭಾಗದ ದಾವೆಗಳು, ಹಣ ವಸೂಲಾತಿ ದಾವೆಗಳು, ನಿರ್ದಿಷ್ಟ ಪರಿಹಾರ ಕಾಯ್ದೆಯಡಿ ದಾಖಲಾಗಿರುವ ಪ್ರಕರಣಗಳು, ಮೋಟಾರು ವಾಹನ ಅಪಘಾತ (MVC) ಪ್ರಕರಣಗಳು, MMRD ಪ್ರಕರಣಗಳು, ಜೀವನಾಂಶ, ದಾಂಪತ್ಯ ಪುನರ್‌ಸ್ಥಾಪನೆ, ರಾಜಿಯಾಗಬಹುದಾದ ಕ್ರಿಮಿನಲ್ ಪ್ರಕರಣಗಳು, ಚೆಕ್ ಬೌನ್ಸ್, ಐಂಅ ಹಾಗೂ ಎಕ್ಸಿಕ್ಯೂಷನ್ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಲು ಅವಕಾಶವಿದೆ.

ಲೋಕ ಅದಾಲತ್ ಪೀಠದಲ್ಲಿ ನ್ಯಾಯಾಧೀಶರು ಹಾಗೂ ನುರಿತ ವಕೀಲರು ಭಾಗವಹಿಸಿ, ವಾದಿ-ಪ್ರತಿವಾದಿಗಳೊಂದಿಗೆ ಸಮಾಲೋಚನೆ ನಡೆಸಿ, ಅವರ ಸಮ್ಮತಿಯೊಂದಿಗೆ ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಳ್ಳಲಿದ್ದಾರೆ. ಲೋಕ ಅದಾಲತ್ ಮೂಲಕ ಪ್ರಕರಣ ಇತ್ಯರ್ಥವಾದಲ್ಲಿ ನ್ಯಾಯಾಲಯದ ಶುಲ್ಕ ವಿಧಿಸಲಾಗುವುದಿಲ್ಲ. ಈಗಾಗಲೇ ಪಾವತಿಸಿರುವ ನ್ಯಾಯಾಲಯದ ಶುಲ್ಕವನ್ನೂ ನಿಯಮಾನುಸಾರ ಮರುಪಾವತಿ ಸಲಾಗುತ್ತದೆ. ಲೋಕ ಅದಾಲತ್‌ನಲ್ಲಿ ಪ್ರಕರಣ ಇತ್ಯರ್ಥಗೊಂಡ ಬಳಿಕ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ. ಲೋಕ ಅದಾಲತ್ ನೀಡುವ ತೀರ್ಮಾನವು ನ್ಯಾಯಾಲಯದ ತೀರ್ಪಿನಷ್ಟೇ ಕಾನೂನುಬದ್ಧ ಮೌಲ್ಯ ಹೊಂದಿರುತ್ತದೆ.



**ವ್ಯಾಜ್ಯಪೂರ್ವ ಪ್ರಕರಣಗಳಿಗೂ ಅವಕಾಶ:** ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಜತೆಗೆ, ನ್ಯಾಯಾಲಯಕ್ಕೆ ದಾಖಲಾಗುವ ಮುನ್ನದ ವ್ಯಾಜ್ಯಪೂರ್ವ ಪ್ರಕರಣಗಳನ್ನೂ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸಿಕೊಳ್ಳಬಹುದು. ಬ್ಯಾಂಕ್ ಸಾಲ ವಸೂಲಾತಿ, ವಿದ್ಯುತ್ ಮತ್ತು ನೀರಿನ ಶುಲ್ಕ, ಕಾರ್ಮಿಕ ವಿವಾದ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ವೈವಾಹಿಕ ಹಾಗೂ ಕುಟುಂಬ ನ್ಯಾಯಾಲಯಕ್ಕೆ ಸಂಬಂಧಿಸಿದ ಪ್ರಕರಣಗಳು ಸೇರಿದಂತೆ ವಿವಿಧ ಸಿವಿಲ್ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿದೆ.

ಇಂತಹ ಪ್ರಕರಣಗಳಿಗೆ ನ್ಯಾಯಾಲಯದ ಶುಲ್ಕ ಪಾವತಿಸುವ ಅಗತ್ಯವಿಲ್ಲ. ಕಕ್ಷಿದಾರರು ವಕೀಲರ ಮೂಲಕ ಅಥವಾ ಖುದ್ದಾಗಿ ಕಾನೂನು ಸೇವೆಗಳ ಪ್ರಾಧಿಕಾರವನ್ನು ಸಂಪರ್ಕಿಸಿ ಪ್ರಕರಣವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಇದರಿಂದ ಪ್ರಕರಣಗಳು ಶೀಘ್ರವಾಗಿ ಇತ್ಯರ್ಥಗೊಳ್ಳುವುದರ ಜೊತೆಗೆ ಹಣ ಹಾಗೂ ಅಮೂಲ್ಯ ಸಮಯ ಉಳಿತಾಯವಾಗಲಿದೆ. ಕಕ್ಷಿದಾರರಿಗೆ ಅನುಕೂಲವಾಗುವ ರೀತಿಯಲ್ಲಿ ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ಇತ್ಯರ್ಥಪಡಿಸುವ ಉದ್ದೇಶದಿಂದ ಈ ಬಾರಿ ವಿವಿಧ ಬಗೆಯ ಪ್ರಕರಣಗಳನ್ನು ಲೋಕ ಅದಾಲತ್‌ಗೆ ತೆಗೆದುಕೊಳ್ಳಲಾಗಿದೆ. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಸದುಪಯೋಗ ಪಡೆದುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳುವಂತೆ ಕೋರಲಾಗಿದೆ.

**ಅಕ್ಟೋಬರ್‌ನಿಂದ ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ 3.0ಅಭಿಯಾನ**

ಅಕ್ಟೋಬರ್ 1ರಿಂದ ಡಿಸೆಂಬರ್ 2026ರವರೆಗೆ ರಾಜ್ಯಾದ್ಯಂತ ಮಧ್ಯಸ್ಥಿಕೆ ರಾಷ್ಟ್ರಕ್ಕಾಗಿ 3.0-90 ದಿನಗಳ ವಿಶೇಷ ಅಭಿಯಾನ? ಹಮ್ಮಿಕೊಳ್ಳಲಾಗುತ್ತಿದೆ.

ಈ ಅಭಿಯಾನದಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಮೋಟಾರು ಅಪಘಾತ ನ್ಯಾಯಾಧಿಕರಣದ ಪ್ರಕರಣಗಳು, ಚೆಕ್ ಅಮಾನ್ಯ ಪ್ರಕರಣಗಳು, ವಾಣಿಜ್ಯ ಹಾಗೂ ಸೇವಾ ಪ್ರಕರಣಗಳು, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು ಸೇರಿದಂತೆ ಇತರೆ ಸಿವಿಲ್ ಪ್ರಕರಣಗಳನ್ನು ಮಧ್ಯಸ್ಥಿಕೆ ಮೂಲಕ ಇತ್ಯರ್ಥಪಡಿಸಲು ಅವಕಾಶ ಕಲ್ಪಿಸಲಾಗಿದೆ.

ರಾಜಿ ಸಂಧಾನಕ್ಕೆ ಇಚ್ಛಿಸುವ ಪ್ರಕರಣಗಳನ್ನು ನ್ಯಾಯಾಲಯಗಳಿಂದ ಮಧ್ಯಸ್ಥಿಕೆ ಕೇಂದ್ರಗಳಿಗೆ ಸೂಚಿಸಿದ ಬಳಿಕ ಉಭಯ ಪಕ್ಷಗಾರರನ್ನು ಕರೆಸಿ, ಜಿಲ್ಲಾ ನ್ಯಾಯಾಲಯದ ಸಮುಚ್ಚಯದಲ್ಲಿರುವ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಾಗೂ ತಾಲ್ಲೂಕು ನ್ಯಾಯಾಲಯಗಳ ಆವರಣದಲ್ಲಿರುವ ಮಧ್ಯಸ್ಥಿಕೆ ಕೇಂದ್ರಗಳಲ್ಲಿ ರಾಜಿ ಸಂಧಾನದ ಮೂಲಕ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ. ಉಚ್ಚ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇರುವವರು ಬೆಂಗಳೂರು, ಧಾರವಾಡ ಹಾಗೂ ಕಲಬುರಗಿಯಲ್ಲಿರುವ ಉಚ್ಚ ನ್ಯಾಯಾಲಯದ ಮಧ್ಯಸ್ಥಿಕೆ ಕೇಂದ್ರಗಳನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

# ಸಾವಿನ ಭಯಕ್ಕೆ ಬೈ, ಬದುಕಿಗೆ ಹಾಯ್!



ಸಾವು ಅನಿವಾರ್ಯ ಎಂಬ ಅರಿವಾದಾಗಲೇ ಬದುಕು ಗಟ್ಟಿಯಾಗುತ್ತದೆ. ನಮ್ಮ ದೇಹದಲ್ಲಿ ಅಪೊಪ್ಟೋಸಿಸ್ ಎಂಬ ನೈಸರ್ಗಿಕ ದುರಸ್ತಿ ವ್ಯವಸ್ಥೆ ಇದೆ. ಅದು ಹಳೆಯ, ಹಾಳಾದ ಕೋಶಗಳನ್ನು ತಾನಾಗಿಯೇ ತೆಗೆದು ಹೊಸ ಕೋಶಗಳಿಗೆ ಜಾಗ ಮಾಡಿಕೊಡುತ್ತದೆ. ಈ ಕ್ರಿಯೆ ಚೆನ್ನಾಗಿ ನಡೆಯಲು ದಿನಕ್ಕೆ ಎಂಟು ಗಂಟೆ ಗಾಢ ನಿದ್ದೆ, ಬೆಳಗಿನ ಬಿಸಿಲಿನ ಸ್ಪರ್ಶ ಮತ್ತು ಗಿಡಮೂಲಿಕೆ ಕಷಾಯ ಬೇಕು.

ರಕ್ತದಲ್ಲಿ ಸಿ-ರಿಯಾಕ್ಟಿವ್ ಪ್ರೋಟೀನ್ ಹೆಚ್ಚಾದರೆ ದೇಹದಲ್ಲಿ ಉರಿಯೂತ ಇದೆ ಎಂದರ್ಥ. ಅದನ್ನು ಕಡಿಮೆ ಮಾಡಲು ಅರಿಶಿನ-ಕಾಳುಮೆಣಸು ಮಿಶ್ರಣ ಮತ್ತು ತುಳಸಿ ರಸ ಒಳ್ಳೆಯದು ಎಂದು ವೈದ್ಯರು ಹೇಳುತ್ತಾರೆ.

ಆರೋಗ್ಯ ಜಾಗೃತಿ ಎಲ್ಲರ ಹೊಣೆ. ಗ್ರಂಥಾಲಯದ ಆರೋಗ್ಯ ಶಿಬಿರ, ಅಂಗನವಾಡಿ ಕಾರ್ಯಕರ್ತೆಯರ ರಕ್ತಹೀನತೆ ಬೀದಿ ನಾಟಕ, ದೇವಸ್ಥಾನದ ಆಯುರ್ವೇದ ಮಾತುಕತೆಗಳು ಜನರ ತಪ್ಪು ಕಲ್ಪನೆ ಹೋಗಲಾಡಿಸುತ್ತವೆ. ಯುವಕರ ಮೊಬೈಲ್ ಕ್ಲಿನಿಕ್ ಹಳ್ಳಿಗೆ ಹೋದಾಗ ವೃದ್ಧರ ಒಂಟಿತನ ಕಡಿಮೆಯಾಗಿ ಮುನ್ನೆಚ್ಚರಿಕೆ ಮನೆಮನೆಗೆ ತಲುಪುತ್ತದೆ.

ವರ್ಷಕ್ಕೆರಡು ಬಾರಿ ಬಿಪಿ, ಸಕ್ಕರೆ, ಕೊಲೆಸ್ಟ್ರಾಲ್ ಪರೀಕ್ಷೆ ಮಾಡಿಸಿ. ತಿಂಗಳಿಗೊಮ್ಮೆ ಮನೆಯಲ್ಲಿ ಆರೋಗ್ಯದ ಬಗ್ಗೆ ಮಾತನಾಡಿ. ನೀರು ಕುಡಿಯಲು, ಕಣ್ಣಿನ ವ್ಯಾಯಾಮಕ್ಕೆ ಮೊಬೈಲ್ ಜ್ಞಾಪನೆ ಇಡಿ. ಮನೆಯ ಪ್ರಥಮ ಚಿಕಿತ್ಸೆ ಪೆಟ್ಟಿಗೆಯಲ್ಲಿ ಬ್ಯಾಂಡೇಜ್, ಕರ್ಪೂರ, ಲವಂಗ ಎಣ್ಣೆ ಇರಲಿ. ರಕ್ತದ ಗುಂಪು, ತುರ್ತು ನಂಬರ್ ಕಾರ್ಡ್ ಜೇಬಿನಲ್ಲಿರಲಿ. ಅರಿವೇ ಜೀವದ ಗುರಾಣಿ.

ಅಂಕಣ-10

**ಸಾವು ಸಂಕಟಪಡುವ ಸಂಗತಿಗಳು..!**



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಕಲಿಯುವುದಿನ್ನು ಸಾಗರದಂತಿದೆ, ಕಲಿತವರಾರಿಲ್ಲ



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

ಜೀವನವನ್ನು ನಾವು ಸಾಮಾನ್ಯವಾಗಿ ಅನುಭವಗಳ ಸರಣಿಯೆಂದು ನೋಡುತ್ತೇವೆ. ಬೆಳಿಗ್ಗೆ ಎದ್ದು ಕೆಲಸಕ್ಕೆ ಹೋಗುವುದು, ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುವುದು, ಸಂಬಂಧಗಳನ್ನು ಕಾಪಾಡಿಕೊಳ್ಳುವುದು, ಯಶಸ್ಸನ್ನು ಬೆನ್ನಟ್ಟುವುದು, ಸೋಲನ್ನು ಎದುರಿಸುವುದು?ಇವೆಲ್ಲವೂ ದಿನನಿತ್ಯದ ಸಹಜ ಸಂಗತಿಗಳಂತೆ ಕಾಣುತ್ತವೆ. ಆದರೆ ಸ್ವಲ್ಪ ನಿಂತು ನೋಡಿದಾಗ ಗೊತ್ತಾಗುವುದು ಒಂದೇ: ನಾವು ಬದುಕುತ್ತಿರುವ ಪ್ರತಿದಿನವೂ ನಮ್ಮನ್ನು ಯಾವುದೋ ಒಂದು ರೀತಿಯಲ್ಲಿ ಕಲಿಸುತ್ತಿರುತ್ತದೆ.

ಪುಸ್ತಕಗಳು ಜ್ಞಾನವನ್ನು ಕೊಡುತ್ತವೆ. ಶಿಕ್ಷಕರು ದಾರಿ ತೋರಿಸುತ್ತಾರೆ. ಆದರೆ ಅನುಭವ ಆ ಜ್ಞಾನಕ್ಕೆ ಅರ್ಥ ನೀಡುತ್ತದೆ. ಬದುಕು ಕಲಿಸುವ ಪಾಠಕ್ಕೆ ಒಂದು ವಿಭಿನ್ನವಾದ ಆಳವಿದೆ. ಏಕೆಂದರೆ ಜೀವನದ ತರಗತಿಯಲ್ಲಿ ನಾವು ವಿದ್ಯಾರ್ಥಿಗಳೂ ಹೌದು, ಪ್ರಶ್ನೆಪತ್ರಿಕೆಯೂ ಹೌದು, ಉತ್ತರ ಬರೆಯುವವರೂ ಹೌದು.

ಶಾಲೆಯಲ್ಲಿ ತಪ್ಪಾದ ಉತ್ತರಕ್ಕೆ ಅಂಕ ಕಡಿಮೆಯಾಗಬಹುದು. ಜೀವನದಲ್ಲಿ ತಪ್ಪಾದ ನಿರ್ಧಾರದ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ. ಅದಕ್ಕಾಗಿಯೇ ಜೀವನದ ಪಾಠಗಳು ಹೆಚ್ಚು ಗಾಢವಾಗಿರುತ್ತವೆ. ಕೆಲವೊಮ್ಮೆ ಒಂದು ತಪ್ಪು, ಹತ್ತು ಪುಸ್ತಕಗಳು ಕಲಿಸಲಾಗದ ಸಂಗತಿಯನ್ನು ಕಲಿಸುತ್ತದೆ.

**ಯಶಸ್ಸು ಕೂಡ ಒಬ್ಬ ಉತ್ತಮ ಶಿಕ್ಷಕ.**
ನಾವು ಗೆದ್ದಾಗ ನಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಬರುತ್ತದೆ. ಆದರೆ ಗೆಲುವಿನ ಹಿಂದೆ ಎಷ್ಟು ಜನರ ಸಹಕಾರವಿದೆ ಎಂಬುದೂ ತಿಳಿಯುತ್ತದೆ. ಒಂದು ಅವಕಾಶ ಕೊಟ್ಟವರು, ಧೈರ್ಯ ತುಂಬಿದವರು, ನಾವು ಕುಗ್ಗಿದಾಗ ಬೆಂಬಲಿಸಿದವರು?ಇವರ ಪಾತ್ರವನ್ನು ಆಗ ಅರಿಯುತ್ತೇವೆ. ಯಶಸ್ಸು ನಮಗೆ ಸಾಮರ್ಥ್ಯದ ಜೊತೆಗೆ ಕೃತಜ್ಞತೆಯನ್ನೂ ಕಲಿಸಬೇಕು.

**ಆದರೆ ಸೋಲು ಇನ್ನೂ ಕಠಿಣ ಶಿಕ್ಷಕ.**



ಸೋತಾಗ ನಮ್ಮ ಬಗ್ಗೆ ನಮಗೇ ಇದ್ದ ಕೆಲವು ಭ್ರಮೆಗಳು ಒಡೆಯುತ್ತವೆ. ನಮ್ಮ ಸಾಮರ್ಥ್ಯದ ಮಿತಿ ಗೋಚರಿಸುತ್ತದೆ. ನಮ್ಮದೇ ತಪ್ಪುಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸೋಲು ನೋವು ಕೊಡುತ್ತದೆ; ಆದರೆ ಆ ನೋವಿನೊಳಗೆ ಆತ್ಮಪರಿಶೀಲನೆಗೆ ಅವಕಾಶವೂ ಇರುತ್ತದೆ. ಕೆಲವೊಮ್ಮೆ ಸೋಲು ನಮ್ಮನ್ನು ಗೆಲುವಿಗಿಂತ ಹೆಚ್ಚು ಪರಿಪಕ್ವರನ್ನಾಗಿ ಮಾಡುತ್ತದೆ.

**ಪ್ರತಿಯೊಬ್ಬರ ಬದುಕಿನ ಪಾಠವೂ ವಿಭಿನ್ನ.**
ಒಬ್ಬರಿಗೆ ಹಣ ಕಲಿಸುವ ಪಾಠವನ್ನು ಮತ್ತೊಬ್ಬರಿಗೆ ಸಂಬಂಧಗಳು ಕಲಿಸಬಹುದು. ಒಬ್ಬರಿಗೆ ಯಶಸ್ಸು ಕಲಿಸುವ ಸಂಗತಿಯನ್ನು ಮತ್ತೊಬ್ಬರಿಗೆ ವೈಫಲ್ಯ, ಏಕಾಂತ ಅಥವಾ ನಿರೀಕ್ಷಿಸದ ಬದಲಾವಣೆ ಕಲಿಸಬಹುದು. ಜೀವನ ಎಲ್ಲರಿಗೂ ಒಂದೇ ರೀತಿಯ ಪ್ರಶ್ನೆಪತ್ರಿಕೆಯನ್ನು ಕೊಡುವುದಿಲ್ಲ. ಆದ್ದರಿಂದ ನಮ್ಮ ಬದುಕನ್ನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಸುವುದಕ್ಕೂ ಅರ್ಥವಿಲ್ಲ.

ವಿಶೇಷವಾಗಿ ಇಂದಿನ ಸಾಮಾಜಿಕ ಮಾಧ್ಯಮದ ಕಾಲದಲ್ಲಿ ಈ ಸತ್ಯವನ್ನು ಮರೆಯಬಾರದು. ಇತರರ ಯಶಸ್ಸು, ಪ್ರವಾಸ, ಪ್ರಶಸ್ತಿ, ಹೊಸ ಮನೆ ಅಥವಾ ಸಂಭ್ರಮದ ಕ್ಷಣಗಳು ನಮ್ಮ ಕಣ್ಣಿಗೆ ನಿರಂತರವಾಗಿ ಬೀಳುತ್ತವೆ. ಆದರೆ ಆ ಚಿತ್ರಗಳ ಹಿಂದೆ ಇರುವ ಹೋರಾಟ, ಆತಂಕ ಮತ್ತು ವೈಫಲ್ಯ ನಮಗೆ ಕಾಣುವುದಿಲ್ಲ. ನಾವು ಇನ್ನೊಬ್ಬರ ಪ್ರದರ್ಶಿತ ಬದುಕನ್ನು ನಮ್ಮ ನಿಜವಾದ ಬದುಕಿನೊಂದಿಗೆ ಹೋಲಿಸಬಾರದು.

**ಕೆಲವು ಜೀವನಪಾಠಗಳು ನಮಗೆ ಅರ್ಥವಾಗುವುದು ಬಹಳ ತಡವಾಗಿ.**
ಯೌವನದಲ್ಲಿ ತಂದೆ–ತಾಯಿಯ ಕೆಲವು ಮಾತುಗಳು ಹಳೆಯ ಕಾಲದ ಉಪದೇಶದಂತೆ ಕಾಣಬಹುದು. ವರ್ಷಗಳು ಕಳೆದ ಮೇಲೆ ಅದೇ ಮಾತಿನ ಒಳಾರ್ಥ ತಿಳಿಯಬಹುದು. ಸ್ನೇಹದ ಮೌಲ್ಯವನ್ನು ಸ್ನೇಹಿತನನ್ನು ಕಳೆದುಕೊಂಡ ನಂತರ ಅರಿಯಬಹುದು. ಸಮಯದ ಬೆಲೆಯನ್ನು ಅದು ಕೈತಪ್ಪಿದ ನಂತರ ತಿಳಿಯಬಹುದು. ಆರೋಗ್ಯದ ಮಹತ್ವವನ್ನು ದೇಹ ಎಚ್ಚರಿಸಿದ ನಂತರ ಅರಿಯಬಹುದು.

**ಅದಕ್ಕಾಗಿಯೇ ಬದುಕಿನ ಪಾಠಗಳಿಗೆ ನಿಗದಿತ ಪಠ್ಯಕ್ರಮವಿಲ್ಲ.**

ಪ್ರತಿಯೊಂದು ಸಂಬಂಧವೂ ಒಂದು ಅಧ್ಯಾಯ. ಪ್ರತಿಯೊಂದು ನಿರ್ಧಾರವೂ ಒಂದು ಪ್ರಯೋಗ. ಪ್ರತಿಯೊಂದು ತಪ್ಪೂ ಒಂದು ಟಿಪ್ಪಣಿ. ಪ್ರತಿಯೊಂದು ಭೇಟಿಯೂ ಒಂದು ಪಾಠ. ಕೆಲವರು ವರ್ಷಗಳ ಕಾಲ ನಮ್ಮೊಂದಿಗೆ ಉಳಿದು ಕಲಿಸುತ್ತಾರೆ. ಕೆಲವರು ಕೆಲವೇ ದಿನಗಳ ಕಾಲ ಇದ್ದು, ಮರೆಯಲಾಗದ ಪಾಠವೊಂದನ್ನು ಬಿಟ್ಟು ಹೋಗುತ್ತಾರೆ.

ಆದರೆ ಬದುಕಿನಿಂದ ಕಲಿಯುವುದು ಎಂದರೆ ಪ್ರತಿಯೊಂದು ಘಟನೆಗೂ ತಕ್ಷಣ ಅರ್ಥ ಹುಡುಕುವುದು ಎಂದಲ್ಲ. ಕೆಲವು ಘಟನೆಗಳಿಗೆ ಉತ್ತರಗಳು ತಡವಾಗಿ ಬರುತ್ತವೆ. ಕೆಲವು ಪ್ರಶ್ನೆಗಳಿಗೆ ಉತ್ತರವೇ ಸಿಗುವುದಿಲ್ಲ. ಕೆಲವು ನಷ್ಟಗಳಿಗೆ ಯಾವುದೇ ತರ್ಕ ಸಮಾಧಾನ ನೀಡುವುದಿಲ್ಲ.

ಅಲ್ಲಿಯೇ ಜೀವನದ ಮತ್ತೊಂದು ಪಾಠ ಆರಂಭವಾಗುತ್ತದೆ?ಎಲ್ಲವನ್ನೂ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಒಪ್ಪಿಕೊಳ್ಳುವುದು.

ಪಕ್ವತೆ ಎಂದರೆ ಎಲ್ಲ ಪ್ರಶ್ನೆಗಳಿಗೆ ಉತ್ತರ ತಿಳಿದಿರುವುದು ಅಲ್ಲ. ಉತ್ತರ ಸಿಗದ ಪ್ರಶ್ನೆಗಳೊಂದಿಗೂ ಶಾಂತಿಯಿಂದ ಬದುಕಲು ಕಲಿಯುವುದು. ಬದಲಾಗದ ಸಂಗತಿಗಳನ್ನು ಒಪ್ಪಿಕೊಳ್ಳುವುದು. ಬದಲಾಯಿಸಬಹುದಾದ ಸಂಗತಿಗಳ ಮೇಲೆ ಗಮನ ಹರಿಸುವುದು. ಹಿಂದಿನ ತಪ್ಪುಗಳಿಂದ ಪಾಠ ಕಲಿಸಿಕೊಂಡು, ಅವುಗಳ ನೆರಳಿನಲ್ಲಿ ಸದಾ ಬದುಕದೇ ಇರುವುದು.

ನಮ್ಮ ಬದುಕನ್ನು ಹಿಂದಿರುಗಿ ನೋಡಿದಾಗ, ದೊಡ್ಡ ಘಟನೆಗಳಿಗಿಂತ ಸಣ್ಣ ಕ್ಷಣಗಳೇ ಹೆಚ್ಚು ಕಲಿಸಿರುತ್ತವೆ. ಒಂದು ಸರಳ ಮಾತು, ನಿರೀಕ್ಷಿಸದ ಸಹಾಯ, ತಪ್ಪಾದ ನಿರ್ಧಾರ, ಕಳೆದುಕೊಂಡ ಅವಕಾಶ, ಮತ್ತೆ ದೊರೆತ ಅವಕಾಶ?ಇವೆಲ್ಲವೂ ನಮ್ಮ ವ್ಯಕ್ತಿತ್ವವನ್ನು ನಿಧಾನವಾಗಿ ರೂಪಿಸಿವೆ.

ಬಹುಶಃ ಬದುಕಿನ ಸೌಂದರ್ಯವೂ ಅಲ್ಲಿಯೇ ಇದೆ.

ನಮಗೆ ಪ್ರತಿದಿನ ಪಾಠ ಹೇಳುವುದಿಲ್ಲ; ಅದು ಘಟನೆಗಳನ್ನು ನೀಡುತ್ತದೆ. ಆ ಘಟನೆಗಳಿಂದ ನಾವು ಏನು ಕಲಿಯುತ್ತೇವೆ ಎಂಬುದೇ ನಮ್ಮ ಪಾಲಿನ ಕೆಲಸ.

ಪುಸ್ತಕ ಮುಚ್ಚಬಹುದು. ತರಗತಿ ಮುಗಿಯಬಹುದು. ಶಿಕ್ಷಕರು ಬದಲಾಗಬಹುದು. ಆದರೆ ಬದುಕಿನ ತರಗತಿಗೆ ರಜೆ ಇರುವುದಿಲ್ಲ.

ನಿನ್ನೆ ಕಲಿಸಿದ ಪಾಠ ಇಂದು ಮತ್ತೊಂದು ರೂಪದಲ್ಲಿ ಎದುರಾಗಬಹುದು.

ಇಂದು ಅರ್ಥವಾಗದ ಸಂಗತಿ ನಾಳೆ ಅರ್ಥವಾಗಬಹುದು. ವರ್ಷಗಳು ಉರುಳುತ್ತವೆ. ವಯಸ್ಸು ಹೆಚ್ಚುತ್ತದೆ. ಅನುಭವ ಗಾಢವಾಗುತ್ತದೆ. ಆದರೆ ಕಲಿಯುವ ಪ್ರಕ್ರಿಯೆ ಮಾತ್ರ ಮುಗಿಯುವುದಿಲ್ಲ.

ಕೊನೆಗೆ, ಮನುಷ್ಯ ತನ್ನ ಬದುಕನ್ನು ಎಷ್ಟು ವರ್ಷ ಬದುಕಿದ ಎಂಬುದಕ್ಕಿಂತ, ಆ ವರ್ಷಗಳು ಅವನಿಗೆ ಎಷ್ಟು ಅರ್ಥ ಕಲಿಸಿವೆ ಎಂಬುದೇ ಬಹುಶಃ ಮುಖ್ಯ.

ಜೀವನದ ಪುಸ್ತಕಕ್ಕೆ ಕೊನೆಯ ಪುಟ ಇರುವುದೇ ಸರಿ.

ಆದರೆ ಅದರ ಪಾಠಗಳು?ನಾವು ಇಲ್ಲದ ನಂತರವೂ?ಯಾರಾದರೂ ಒಬ್ಬರ ಬದುಕಿನಲ್ಲಿ ಮುಂದುವರಿಯುತ್ತಲೇ ಇರುತ್ತವೆ.




# ಗುಟ್ಕಾ ಬೇಡ, ಜೀವ ಉಳಿಸಿ



| ಶಿವಬಸಪ್ಪ ಗು ಜಂಗಾಲಿ

ಮನುಷ್ಯನ ಬದುಕಿನಲ್ಲಿ ಕೆಲವು ಅಭ್ಯಾಸಗಳು ನಿಧಾನವಾಗಿ ಪ್ರವೇಶಿಸುತ್ತವೆ; ಆದರೆ ಹೊರಹೋಗುವ ಹೊತ್ತಿಗೆ ಬದುಕಿನ ಬಾಗಿಲನ್ನೇ ಮುಚ್ಚಿಬಿಡುತ್ತವೆ. ಗುಟ್ಕಾ ಅಂತಹ ಅಪಾಯಕಾರಿ ಚಟಗಳಲ್ಲಿ ಒಂದು. ಕ್ಷಣಿಕ ರುಚಿ, ಕ್ಷಣಿಕ ಉತ್ಸಾಹ ಹಾಗೂ ಕ್ಷಣಿಕ ನೆಮ್ಮದಿಗಾಗಿ ಆರಂಭವಾಗುವ ಈ ಅಭ್ಯಾಸ, ದಿನಗಳು ಕಳೆದಂತೆ ದೇಹದ ಆರೋಗ್ಯವನ್ನಷ್ಟೇ ಅಲ್ಲ, ಕುಟುಂಬದ ನೆಮ್ಮದಿ, ಆರ್ಥಿಕ ಸ್ಥಿತಿ ಮತ್ತು ಭವಿಷ್ಯದ ಕನಸುಗಳನ್ನೂ ಕಸಿದುಕೊಳ್ಳುತ್ತದೆ. ಗುಟ್ಕಾ ಬೇಡ, ಜೀವ ಉಳಿಸಿ ಎಂಬ ಮಾತು ಕೇವಲ ಘೋಷಣೆಯಾಗದೆ ಪ್ರತಿಯೊಬ್ಬರ ಬದುಕಿನ ಸಂಕಲ್ಪವಾಗಬೇಕಿದೆ.

ಮೊದಲಿಗೆ ಗುಟ್ಕಾ ಕೈಗೆತ್ತಿಕೊಳ್ಳುವಾಗ ಬಹುತೇಕ ಯಾರಿಗೂ ಅದರ ಅಪಾಯದ ಸಂಪೂರ್ಣ ಅರಿವು ಇರುವುದಿಲ್ಲ. ಸ್ನೇಹಿತರ ಒತ್ತಾಯ, ಕುತೂಹಲ, ಒತ್ತಡ ಕಡಿಮೆ ಮಾಡಿಕೊಳ್ಳುವ ನೆಪ, ಕೆಲಸದ ನಡುವೆ ಚೈತನ್ಯ ಬೇಕೆಂಬ ಭಾವನೆ ಅಥವಾ ಸುತ್ತಮುತ್ತಲಿನವರ ಅನುಕರಣೆಯಿಂದ ಈ ಚಟ ಆರಂಭವಾಗಬಹುದು. ?ಒಮ್ಮೆ ತಿಂದರೆ ಏನಾಗುತ್ತದೆ?? ಎಂಬ ಸಣ್ಣ ಪ್ರಶ್ನೆಯೇ ಮುಂದೆ ?ಇದನ್ನು ಬಿಟ್ಟರೆ ಹೇಗೆ?? ಎಂಬ ದೊಡ್ಡ ಸಂಕಷ್ಟವಾಗಿ ಬದಲಾಗುತ್ತದೆ. ಚಟಕ್ಕೆ ಬಲಿಯಾದ ನಂತರ ಮನುಷ್ಯ ತನ್ನ ನಿರ್ಧಾರಗಳ ಮಾಲೀಕನಾಗಿರುವುದಕ್ಕಿಂತ ಅಭ್ಯಾಸದ ಕೈಗೊಂಬೆಯಾಗುವ ಅಪಾಯ ಹೆಚ್ಚುತ್ತದೆ.

ಗುಟ್ಕಾದ ಹಾನಿ ಬಾಯಿಯಿಂದ ಆರಂಭವಾಗಿ ದೇಹದ ಅನೇಕ ಭಾಗಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಬಾಯಿ, ಹಲ್ಲು ಮತ್ತು ಒಸಡುಗಳ ಆರೋಗ್ಯ ಹದಗೆಡಬಹುದು. ಬಾಯಿಯಲ್ಲಿ ಗಾಯಗಳು, ಬಿಳಿ ಅಥವಾ ಕೆಂಪು ಕಲೆಗಳು, ಹಲ್ಲಿನ ಸಮಸ್ಯೆಗಳು ಹಾಗೂ ಬಾಯಿ ತೆರೆಯಲು ತೊಂದರೆ ಉಂಟಾಗಬಹುದು. ದೀರ್ಘಕಾಲ ತಂಬಾಕು ಸೇವನೆಯಿಂದ ಬಾಯಿಯ ಕ್ಯಾನ್ಸರ್ ಸೇರಿದಂತೆ ಗಂಭೀರ ಕಾಯಿಲೆಗಳ ಅಪಾಯ ಹೆಚ್ಚುತ್ತದೆ. ಆರೋಗ್ಯ ಹಾಳಾದಾಗ ಆಸ್ಪತ್ರೆಯ ಬಾಗಿಲು ತಟ್ಟುವುದು ಸುಲಭ; ಆದರೆ ಕಳೆದುಹೋದ ಆರೋಗ್ಯ ಮತ್ತು ಸಮಯವನ್ನು ಮರಳಿ ಪಡೆಯುವುದು ಅಷ್ಟು ಸುಲಭವಲ್ಲ.

ಒಬ್ಬ ವ್ಯಕ್ತಿ ಗುಟ್ಕಾ ಸೇವಿಸುವಾಗ ಅವನೊಬ್ಬನೇ ಹಾನಿಗೊಳಗಾಗುವುದಿಲ್ಲ. ಅವನ ಕುಟುಂಬವೂ ಅದರ ಬೆಲೆ ಕಟ್ಟಬೇಕಾಗುತ್ತದೆ. ದುಡಿದು ತಂದ ಹಣದ ಒಂದು ಭಾಗ ಆರೋಗ್ಯ ಹಾಳುಮಾಡುವ ವಸ್ತುವಿಗೆ ಖರ್ಚಾಗುತ್ತದೆ. ನಂತರ ಅದೇ ಆರೋಗ್ಯಕ್ಕಾಗಿ ಆಸ್ಪತ್ರೆಗಳಲ್ಲಿ ಹೆಚ್ಚಿನ ಹಣ ವ್ಯಯವಾಗುತ್ತದೆ. ಮನೆಯವರ ಕಣ್ಣ ಮುಂದೆ ಪ್ರೀತಿಪಾತ್ರ ವ್ಯಕ್ತಿ ನೋವಿನಿಂದ ಬಳಲುವುದನ್ನು ನೋಡುವುದು ಯಾವುದೇ ಕುಟುಂಬಕ್ಕೂ ದೊಡ್ಡ ಮಾನಸಿಕ ಆಘಾತ. ಮಕ್ಕಳಿಗೆ ತಂದೆ–ತಾಯಿಯೇ ಮಾದರಿ. ಹಿರಿಯರು ತಮ್ಮ ಕೈಯಲ್ಲಿ ಹಿಡಿದಿರುವ ಗುಟ್ಕಾವನ್ನು ಮಕ್ಕಳು ಕುತೂಹಲದಿಂದ ನೋಡುವುದಕ್ಕಿಂತ, ಅವರ ಕೈಯಲ್ಲಿ ಪುಸ್ತಕ, ಪೆನ್ ಅಥವಾ ಆರೋಗ್ಯಕರ ಕನಸುಗಳು ಇರಬೇಕು.






ಗುಟ್ಕಾ ತಯಾರಿಸುವವರು ಅದರ ರುಚಿಯನ್ನು ಆಕರ್ಷಕವಾಗಿಸಬಹುದು; ಜಾಹೀರಾತುಗಳು ಅದರ ಅಪಾಯವನ್ನು ಮರೆಮಾಚಲು ಪ್ರಯತ್ನಿಸಬಹುದು; ಸ್ನೇಹಿತರು ?ಏನೂ ಆಗುವುದಿಲ್ಲ? ಎಂದು ಹೇಳಬಹುದು. ಆದರೆ ಆರೋಗ್ಯದ ಬೆಲೆ ಜಾಹೀರಾತಿನ ಬೆಲೆಗಿಂತ ದೊಡ್ಡದು. ಕ್ಷಣಿಕ ಆಸೆಗೆ ಶಾಶ್ವತ ನೋವನ್ನು ಖರೀದಿಸುವ ಅಗತ್ಯವೇನು?

ಈ ಚಟದಿಂದ ಹೊರಬರುವುದು ಅಸಾಧ್ಯವಲ್ಲ. ಇಂದು ತೀರ್ಮಾನಿಸಿದರೆ ಇಂದೇ ಬದಲಾವಣೆಯ ಮೊದಲ ಹೆಜ್ಜೆ ಇಡಬಹುದು. ಗುಟ್ಕಾ ಸೇವಿಸುವವರು ಕುಟುಂಬದವರೊಂದಿಗೆ ಮಾತನಾಡಬೇಕು, ವಿಶ್ವಾಸಾರ್ಹ ವೈದ್ಯರು ಅಥವಾ ಆರೋಗ್ಯ ತಜ್ಞರ ಸಹಾಯ ಪಡೆಯಬೇಕು ಮತ್ತು ಚಟ ಬಿಡಲು ಅಗತ್ಯವಿರುವ ಬೆಂಬಲವನ್ನು ಸ್ವೀಕರಿಸಬೇಕು. ಒಂದು ದಿನದಲ್ಲಿ ಎಲ್ಲವೂ ಬದಲಾಗದಿದ್ದರೂ, ಪ್ರತಿದಿನದ ಪ್ರಯತ್ನ ಬದುಕನ್ನು ಹೊಸ ದಾರಿಗೆ ಕರೆದೊಯ್ಯಬಹುದು.

ಯುವಕರು ವಿಶೇಷವಾಗಿ ಎಚ್ಚರವಾಗಬೇಕು. ಯುವ ವಯಸ್ಸು ಕನಸು ಕಟ್ಟುವ ಕಾಲ; ಚಟ ಕಟ್ಟುವ ಕಾಲವಲ್ಲ. ದೇಹದಲ್ಲಿ ಶಕ್ತಿ ಇರುವ ಸಮಯವನ್ನು ಆರೋಗ್ಯ ಹಾಳುಮಾಡುವ ಅಭ್ಯಾಸಕ್ಕೆ ಅರ್ಪಿಸುವ ಬದಲು ಶಿಕ್ಷಣ, ಉದ್ಯೋಗ, ಕ್ರೀಡೆ, ಕಲೆ ಮತ್ತು ಸೃಜನಶೀಲತೆಗೆ ಮೀಸಲಿಡಬೇಕು. ಸ್ನೇಹಿತನನ್ನು ಗುಟ್ಕಾ ತಿನ್ನಲು ಪ್ರೇರೇಪಿಸುವ ಸ್ನೇಹಕ್ಕಿಂತ, ?ಬಿಡು ಗೆಳೆಯ, ನಿನ್ನ ಆರೋಗ್ಯ ಮುಖ್ಯ? ಎಂದು ಹೇಳುವ ಸ್ನೇಹವೇ ನಿಜವಾದ ಸ್ನೇಹ.

ಸಮಾಜವೂ ತನ್ನ ಹೊಣೆಗಾರಿಕೆಯನ್ನು ಅರಿಯಬೇಕು. ಶಾಲೆಗಳು, ಕಾಲೇಜುಗಳು, ಕುಟುಂಬಗಳು, ಸಂಘ–ಸಂಸ್ಥೆಗಳು ಹಾಗೂ ಆರೋಗ್ಯ ಇಲಾಖೆಗಳು ನಿರಂತರ ಜಾಗೃತಿ ಮೂಡಿಸಬೇಕು. ತಂಬಾಕು ಉತ್ಪನ್ನಗಳ ವಿರುದ್ಧದ ಹೋರಾಟ ಕೇವಲ ಸರ್ಕಾರದ ಜವಾಬ್ದಾರಿಯಲ್ಲ; ಅದು ಪ್ರತಿಯೊಬ್ಬ ನಾಗರಿಕನ ಸಾಮಾಜಿಕ ಕರ್ತವ್ಯವೂ ಹೌದು.

ಬದುಕು ದೇವರು ಕೊಟ್ಟ ಅಮೂಲ್ಯ ಅವಕಾಶ. ಅದನ್ನು ಒಂದು ಸಣ್ಣ ಪ್ಯಾಕೆಟ್‌ಗಾಗಿ ಕಳೆದುಕೊಳ್ಳುವುದು ಯಾವತ್ತೂ ಜಾಣತನವಲ್ಲ. ನಮ್ಮ ತುಟಿಗಳ ನಡುವೆ ಹೋಗುವ ಒಂದು ಚಿಕ್ಕ ಪೊಟ್ಟಣ, ನಮ್ಮ ಕುಟುಂಬದ ಕಣ್ಣಲ್ಲಿ ದೊಡ್ಡ ಕಣ್ಣೀರಾಗಬಾರದು. ನಮ್ಮ ಕೈಯಲ್ಲಿರುವ ಗುಟ್ಕಾ ಪ್ಯಾಕೆಟ್‌ಗಿಂತ, ನಮ್ಮ ಕೈ ಹಿಡಿದಿರುವ ತಾಯಿ–ತಂದೆ, ಪತ್ನಿ, ಪತಿ, ಮಕ್ಕಳು ಮತ್ತು ಸ್ನೇಹಿತರ ಪ್ರೀತಿ ಬಹಳ ದೊಡ್ಡದು.

ಗುಟ್ಕಾವನ್ನು ಕೈಬಿಡಿ; ಬದುಕನ್ನು ಕೈಹಿಡಿಯಿರಿ.
ಚಟವನ್ನು ತ್ಯಜಿಸಿ; ಆರೋಗ್ಯವನ್ನು ಅಪ್ಪಿಕೊಳ್ಳಿ.
ಕ್ಷಣಿಕ ರುಚಿಯನ್ನು ಮರೆತು, ಶಾಶ್ವತ ಬದುಕನ್ನು ಆರಿಸಿಕೊಳ್ಳಿ.
ಗುಟ್ಕಾ ಬೇಡ?ಜೀವ ಉಳಿಸಿ.

# ಶಿಕ್ಷಣ ಶಿಕ್ಷಕರು, ಪ್ರಶಸ್ತಿಗಳು



| ಉಮೇಶ ಸರ್ಪನಕಟ್ಟೆ

ಶಿಕ್ಷಣವೆಂದರೆ ಕೇವಲ ಅಕ್ಷರ ಜ್ಞಾನವಲ್ಲ. ಅದು ಬದುಕನ್ನು ರೂಪಿಸುವ ಶಕ್ತಿ. ಒಬ್ಬ ವ್ಯಕ್ತಿಯ ಭವಿಷ್ಯವನ್ನು ಬದಲಾಯಿಸುವ ಸಾಮರ್ಥ್ಯ ಶಿಕ್ಷಣಕ್ಕಿದೆ. ಆ ಶಿಕ್ಷಣವನ್ನು ನೀಡುವ ಶಿಕ್ಷಕನ ಸ್ಥಾನ ಸಮಾಜದಲ್ಲಿ ಅತ್ಯಂತ ಮಹತ್ವದ್ದು. ಆದರೆ ಕಾಲ ಬದಲಾಗುತ್ತಿದ್ದಂತೆ ಶಿಕ್ಷಣದ ಸ್ವರೂಪವೂ ಬದಲಾಗಿದೆ; ಶಿಕ್ಷಕ?ವಿದ್ಯಾರ್ಥಿ ಸಂಬಂಧವೂ ಬದಲಾಗಿದೆ; ಶಿಕ್ಷಕರನ್ನು ಗುರುತಿಸುವ ಮತ್ತು ಗೌರವಿಸುವ ಮಾನದಂಡಗಳೂ ಬದಲಾಗಿವೆ.

ಹಿಂದಿನ ಕಾಲವನ್ನು ನೆನಪಿಸಿಕೊಂಡರೆ ಶಿಕ್ಷಣಕ್ಕೆ ಇದ್ದ ಗೌರವವೇ ಬೇರೆ. ಸೌಲಭ್ಯಗಳು ಕಡಿಮೆ, ತಂತ್ರಜ್ಞಾನ ಇರಲಿಲ್ಲ, ಇಂದಿನಂತ ವಿಶಾಲ ಕಟ್ಟಡಗಳಿರಲಿಲ್ಲ. ಆದರೆ ಗುರುಗಳ ಮೇಲಿನ ಗೌರವ, ಶಿಕ್ಷಣದ ಮೇಲಿನ ಭಕ್ತಿ ಮತ್ತು ಶಿಸ್ತಿನ ಮೇಲಿನ ನಂಬಿಕೆ ಅಪಾರವಾಗಿತ್ತು.

ಗುರು ದೇವೋ ಭವ ಎನ್ನುವುದು ಕೇವಲ ಮಾತಾಗಿರಲಿಲ್ಲ. ಅದು ಜೀವನದ ಒಂದು ಮೌಲ್ಯವಾಗಿತ್ತು. ಶಿಕ್ಷಕರು ಕೇವಲ ಪಾಠ ಹೇಳುವವರಾಗಿರಲಿಲ್ಲ. ಅವರು ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗಿದ್ದರು. ವಿದ್ಯಾರ್ಥಿಯ ತಪ್ಪನ್ನು ತಿದ್ದುತ್ತಿದ್ದರು, ಅವನ ಸಾಮರ್ಥ್ಯವನ್ನು ಗುರುತಿಸುತ್ತಿದ್ದರು, ಬದುಕಿನಲ್ಲಿ ಮುಂದೆ ಸಾಗಲು ಪ್ರೇರೇಪಿಸುತ್ತಿದ್ದರು.

ಆ ಕಾಲದಲ್ಲಿ ಶಿಕ್ಷಕರು ನೀಡಿದ ಕೆಲವು ಶಿಕ್ಷೆಗಳು ಇಂದು ನೆನಪಾದಾಗ ಕಠಿಣವಾಗಿ ಕಾಣಬಹುದು. ಆದರೆ ಕೆಲವೊಮ್ಮೆ ಆ ಶಿಸ್ತು, ಆ ಗದರಿಕೆ, ಆ ಶಿಕ್ಷೆಯೇ ಅನೇಕ ವಿದ್ಯಾರ್ಥಿಗಳ ಬದುಕನ್ನು ಸರಿದಾರಿಗೆ ತಂದಿರುವುದೂ ಸತ್ಯ. ಆದರೆ ಕಾಲ ಬದಲಾಗಿದೆ.

ಇಂದು ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಸಮಾಜ ಹೆಚ್ಚು ಜಾಗೃತವಾಗಿದೆ. ದೈಹಿಕ ಅಥವಾ ಅವಮಾನಕಾರಿ ಶಿಕ್ಷೆ ನೀಡುವುದು ತಪ್ಪು. ಶಿಕ್ಷಕನು ಮಕ್ಕಳಿಗೆ ಶಿಕ್ಷೆ ನೀಡುವ ಬದಲು ಸಂವಾದ, ಮಾರ್ಗದರ್ಶನ ಮತ್ತು ಮಾನವೀಯತೆಯ ಮೂಲಕ ಶಿಸ್ತನ್ನು ಬೆಳೆಸಬೇಕು.

ಆದರೆ ಇಲ್ಲಿ ಮತ್ತೊಂದು ಪ್ರಶ್ನೆ ಹುಟ್ಟುತ್ತದೆ.

ಮಕ್ಕಳಿಗೆ ಶಿಸ್ತು ಕಲಿಸುವ ಶಿಕ್ಷಕನೇ ಇಂದು ಭಯಪಟ್ಟು ಬದುಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆಯೇ?ಕೆಲವೊಮ್ಮೆ ಒಂದು ತಪ್ಪು ನಿರ್ಧಾರದಿಂದ ಶಿಕ್ಷಕನ ವೃತ್ತಿಜೀವನವೇ ಪ್ರಶ್ನೆಗೆ ಒಳಗಾಗಬಹುದು. ಹಿಂದೆ ಒಂದು ಶಿಕ್ಷೆ ವಿದ್ಯಾರ್ಥಿಯ ಬದುಕನ್ನು ಬದಲಾಯಿಸುತ್ತಿದ್ದರೆ, ಇಂದು ಅದೇ ಶಿಕ್ಷೆ ನೀಡಿದ ಶಿಕ್ಷಕನ ಬದುಕನ್ನೇ ಬದಲಾಯಿಸುವ ಪರಿಸ್ಥಿತಿ ಎದುರಾಗಬಹುದು.

ಆದ್ದರಿಂದ ಶಿಕ್ಷಕರಿಗೂ ಮಕ್ಕಳಿಗೂ ಸಮಾನವಾಗಿ ರಕ್ಷಣೆ ನೀಡುವ, ತಪ್ಪು?ಸರಿಗಳನ್ನು ಸಮತೋಲನದಿಂದ ನೋಡುವ ಶಿಕ್ಷಣ ವ್ಯವಸ್ಥೆ ಅಗತ್ಯ. ಗುರು ಶಿಷ್ಯರ ಸಂಬಂಧದಲ್ಲಿ ಬಿರುಕು,

ಶಿಕ್ಷಕನು ದೇವರೆಂದು ಕಾಣುತ್ತಿದ್ದ ಕಾಲದಿಂದ ಇಂದು ಶಿಕ್ಷಕನು ವಿದ್ಯಾರ್ಥಿಯ ಸ್ನೇಹಿತನಾಗಿರುವ ಕಾಲಕ್ಕೆ ಬಂದಿದ್ದೇವೆ.

ಶಿಕ್ಷಕನು ವಿದ್ಯಾರ್ಥಿಯ ಸ್ನೇಹಿತನಾಗುವುದು ತಪ್ಪಲ್ಲ. ಬದಲಾಗಿ ಅದು ಉತ್ತಮ ಶಿಕ್ಷಣಕ್ಕೆ ಸಹಕಾರಿಯಾಗಬಹುದು. ಆದರೆ ಸ್ನೇಹದ ಹೆಸರಿನಲ್ಲಿ ಗೌರವ, ಶಿಸ್ತು ಮತ್ತು ಗುರು?ಶಿಷ್ಯ ಸಂಬಂಧದ ಮೌಲ್ಯಗಳು ಕಳೆದುಹೋಗಬಾರದು.

ವಿದ್ಯಾರ್ಥಿ ಶಿಕ್ಷಕರನ್ನು ಪ್ರಶ್ನಿಸಬಹುದು; ತನ್ನ ಅಭಿಪ್ರಾಯವನ್ನು ಹೇಳಬಹುದು; ತನ್ನ ಹಕ್ಕುಗಳ ಬಗ್ಗೆ ಮಾತನಾಡಬಹುದು. ಆದರೆ ಅದರ ಜೊತೆಗೆ ಶಿಕ್ಷಕರ ಅನುಭವಕ್ಕೂ ಗೌರವ ಇರಬೇಕು.

ಹಾಗೆಯೇ ಶಿಕ್ಷಕರೂ ವಿದ್ಯಾರ್ಥಿಯ ವ್ಯಕ್ತಿತ್ವ, ಭಾವನೆ ಮತ್ತು ಹಕ್ಕುಗಳನ್ನು ಗೌರವಿಸಬೇಕು.



ಸಂಬಂಧದಲ್ಲಿ ಪರಸ್ಪರ ಗೌರವವಿದ್ದಾಗ ಮಾತ್ರ ಶಿಕ್ಷಣ ಸಂಪೂರ್ಣವಾಗುತ್ತದೆ.

**ಪ್ರಶಸ್ತಿಗಳ ಹಿಂದೆ ಓಡುವ ಕೆಲವು ಶಿಕ್ಷಕರು**
ಶಿಕ್ಷಕ ವೃತ್ತಿ ಪ್ರಶಸ್ತಿಗಾಗಿ ಮಾಡುವ ವೃತ್ತಿಯಲ್ಲ. ಆದರೂ ಶಿಕ್ಷಕರ ಸೇವೆಯನ್ನು ಗುರುತಿಸಿ ಪ್ರಶಸ್ತಿ ನೀಡುವುದು ಒಳ್ಳೆಯ ಪ್ರೋತ್ಸಾಹ.

**ಆದರೆ ಪ್ರಶ್ನೆ ಇಲ್ಲಿದೆ?** ಪ್ರಶಸ್ತಿಯನ್ನು ಯಾರು ಪಡೆಯುತ್ತಿದ್ದಾರೆ? ಯಾವ ಮಾನದಂಡದ ಮೇಲೆ ಪಡೆಯುತ್ತಿದ್ದಾರೆ? ನಿಜವಾಗಿ ಮಕ್ಕಳಿಗಾಗಿ ದುಡಿಯುವ ಶಿಕ್ಷಕರಿಗೆ ನ್ಯಾಯ ಸಿಗುತ್ತಿದೆಯೇ? ಕೆಲವೊಮ್ಮೆ ಪಾಠ ಬೋಧನೆಗಿಂತ ರಾಜಕೀಯ, ಶಿಫಾರಸು, ಪ್ರಭಾವ ಮತ್ತು ಸಂಪರ್ಕಗಳ ಮೂಲಕ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆಯುವವರಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತವೆ.

ಇಂತಹ ಬೆಳವಣಿಗೆಗಳು ನಿಜವಾಗಿ ದುಡಿಯುವ ಶಿಕ್ಷಕರ ಮನಸ್ಸಿಗೆ ನೋವುಂಟುಮಾಡುತ್ತವೆ.

ಪ್ರಶಸ್ತಿ ಪಡೆಯಲು ಕೆಲಸ ಮಾಡುವ ಶಿಕ್ಷಕನಿಗಿಂತ, ಪ್ರಶಸ್ತಿ ಸಿಗುವುದೇ ಗೊತ್ತಿಲ್ಲದೆ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವ ಶಿಕ್ಷಕನೇ ಸಮಾಜದ ನಿಜವಾದ ಆಸ್ತಿ.

ಇಂದಿಗೂ ಶಾಲೆಯನ್ನು ದೇವಾಲಯವೆಂದು ಕಾಣುವ ಶಿಕ್ಷಕರಿದ್ದಾರೆ, ಇಂದಿಗೂ ನಮ್ಮ ನಡುವೆ ಅಂತಹ ಶಿಕ್ಷಕರು ಇದ್ದಾರೆ. ತಮ್ಮ ಶಾಲೆಯನ್ನೇ ದೇವಾಲಯವೆಂದು ಭಾವಿಸುವವರು. ಅಲ್ಲಿರುವ ಮಕ್ಕಳನ್ನೇ ದೇವರುಗಳೆಂದು ಕಾಣುವವರು. ತಮ್ಮ ಸಮಯಕ್ಕಿಂತ ಹೆಚ್ಚು ಸಮಯ ಶಾಲೆಯಲ್ಲಿ ಕಳೆಯುವವರು. ಬಡ ವಿದ್ಯಾರ್ಥಿಯ ನೋವನ್ನು ತಮ್ಮ ನೋವಿನಂತೆ ಕಾಣುವವರು.

ವಿದ್ಯಾರ್ಥಿಯ ಯಶಸ್ಸನ್ನು ತಮ್ಮದೇ ಯಶಸ್ಸೆಂದು ಭಾವಿಸುವವರು. ಅವರಿಗೆ ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಬೇಕಿಲ್ಲ. ಅವರಿಗೆ ದೊಡ್ಡ ಪ್ರಶಸ್ತಿ ಬೇಕಿಲ್ಲ. ಅವರ ವಿದ್ಯಾರ್ಥಿಯೊಬ್ಬ ಉತ್ತಮ ಸ್ಥಾನಕ್ಕೆ ತಲುಪಿದಾಗ, ?ಸರ್, ನಿಮ್ಮಿಂದಲೇ ನಾನು ಇಂದು ಈ ಸ್ಥಾನದಲ್ಲಿದ್ದೇನೆ? ಎನ್ನುವ ಒಂದು ಮಾತೇ ಅವರಿಗೆ ಜೀವನದ ದೊಡ್ಡ ಪ್ರಶಸ್ತಿ.

ಆದರೆ ದುರದೃಷ್ಟವಶಾತ್, ಇಂತಹ ನಿಷ್ಠಾವಂತ ಶಿಕ್ಷಕರು ಕೆಲವೊಮ್ಮೆ ವ್ಯವಸ್ಥೆಯಲ್ಲಿ ಹಿಂದೆ ಉಳಿಯುತ್ತಾರೆ. ಇದು ಖಂಡಿತವಾಗಿಯೂ ಖೇದಕರ. ಸರ್ಕಾರದ ನೀತಿ?ನಿಯಮಗಳಲ್ಲಿ ಬದಲಾವಣೆ ಅಗತ್ಯ ಶಿಕ್ಷಕರಿಗೆ ನೀಡುವ ಪ್ರಶಸ್ತಿಗಳ ಆಯ್ಕೆ ಪ್ರಕ್ರಿಯೆ ಇನ್ನಷ್ಟು ಪಾರದರ್ಶಕವಾಗಬೇಕು.

ಕೇವಲ ದಾಖಲೆಗಳು, ಶಿಫಾರಸುಗಳು ಅಥವಾ ಪ್ರಭಾವದ ಆಧಾರದ ಮೇಲೆ ಶಿಕ್ಷಕರನ್ನು ಆಯ್ಕೆ ಮಾಡುವ ಬದಲು, ಅವರ ವಾಸ್ತವಿಕ ಸೇವೆ, ಬೋಧನಾ ಗುಣಮಟ್ಟ, ವಿದ್ಯಾರ್ಥಿಗಳ ಪ್ರಗತಿ, ಶಾಲೆಯ ಅಭಿವೃದ್ಧಿಗೆ ನೀಡಿದ ಕೊಡುಗೆ, ಸಾಮಾಜಿಕ ಜವಾಬ್ದಾರಿ ಮತ್ತು ವಿದ್ಯಾರ್ಥಿಗಳ ಬದುಕಿನಲ್ಲಿ ತಂದ ಬದಲಾವಣೆ ಮುಂತಾದ ಅಂಶಗಳನ್ನು ಪರಿಗಣಿಸಬೇಕು. ಒಬ್ಬ ಶಿಕ್ಷಕನ ನಿಜವಾದ ಸಾಧನೆಯನ್ನು ಅಳೆಯಬೇಕಾದರೆ, ಅವನು ಪಡೆದ ಪ್ರಶಸ್ತಿಗಳ ಸಂಖ್ಯೆಯನ್ನು ನೋಡುವುದಕ್ಕಿಂತ, ಅವನು ರೂಪಿಸಿದ ವಿದ್ಯಾರ್ಥಿಗಳ ಸಂಖ್ಯೆಯನ್ನು ನೋಡಬೇಕು.

**ಆಧುನಿಕ ಶಿಕ್ಷಣದಲ್ಲಿ ಶಿಕ್ಷಕನ ಸ್ಥಾನ:**
ಇಂದು ತಂತ್ರಜ್ಞಾನ ಶಿಕ್ಷಣ ಕ್ಷೇತ್ರವನ್ನು ಸಂಪೂರ್ಣವಾಗಿ ಬದಲಾಯಿಸಿದೆ. ಸ್ಮಾರ್ಟ್ ಕ್ಲಾಸ್‌ಗಳು, ಆನ್‌ಲೈನ್ ಶಿಕ್ಷಣ, ಮೊಬೈಲ್, ಇಂಟರ್ನೆಟ್ ಮತ್ತು ಕೃತಕ ಬುದ್ಧಿಮತ್ತೆ ಶಿಕ್ಷಣದ ಭಾಗವಾಗಿವೆ.

ನಾಳೆ ಇನ್ನಷ್ಟು ತಂತ್ರಜ್ಞಾನ ಬರಬಹುದು. ಆದರೆ ಒಂದು ವಿಷಯವನ್ನು ಯಾವುದೇ ತಂತ್ರಜ್ಞಾನ ಬದಲಾಯಿಸಲು ಸಾಧ್ಯವಿಲ್ಲ? ಒಬ್ಬ ನಿಷ್ಠಾವಂತ ಶಿಕ್ಷಕನ ಮಾನವೀಯ ಸ್ಪರ್ಶ. ಕಂಪ್ಯೂಟರ್ ಪಾಠ ಹೇಳಬಹುದು. ಇಂಟರ್ನೆಟ್ ಮಾಹಿತಿ ನೀಡಬಹುದು. ಕೃತಕ ಬುದ್ಧಿಮತ್ತೆ ಉತ್ತರ ನೀಡಬಹುದು.

ಆದರೆ ವಿದ್ಯಾರ್ಥಿಯ ಕಣ್ಣಿನಲ್ಲಿರುವ ನೋವನ್ನು ಗುರುತಿಸಿ, ?ನೀನು ಮಾಡಬಲ್ಲೆ? ಎಂದು ಆತ್ಮವಿಶ್ವಾಸ ತುಂಬುವ ಹೃದಯ ಶಿಕ್ಷಕನಲ್ಲದೆ ಮತ್ತಾರಿಗಿದೆ? ಆದ್ದರಿಂದ ಆಧುನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಕನ ಸ್ಥಾನಮಾನ ಅಪಾಯದಲ್ಲಿದೆ ಎನ್ನುವುದು ಅತಿಶಯೋಕ್ತಿಯಲ್ಲ. ಪ್ರಶಸ್ತಿ ಸರ್ಕಾರದಿಂದ ಬರದಿದ್ದರೂ ಸಮಾಜದಿಂದ ಬರಲಿ ಒಬ್ಬ ಉತ್ತಮ ಶಿಕ್ಷಕನನ್ನು ಸರ್ಕಾರ ಗುರುತಿಸದೇ ಇರಬಹುದು. ಅವನ ಹೆಸರು ಪ್ರಶಸ್ತಿ ಪಟ್ಟಿಯಲ್ಲಿ ಇರದೇ ಇರಬಹುದು.

ಆದರೆ ಅವನು ರೂಪಿಸಿದ ವಿದ್ಯಾರ್ಥಿಗಳು ಸಮಾಜದಲ್ಲಿ ಎಲ್ಲೋ ಇದ್ದಾರೆ. ಅವರ ಬದುಕಿನಲ್ಲಿ ಆ ಶಿಕ್ಷಕನ ಛಾಪು ಇರುತ್ತದೆ. ಅದೇ ಶಿಕ್ಷಕನ ನಿಜವಾದ ಪ್ರಶಸ್ತಿ. ಆದ್ದರಿಂದ ಸರ್ಕಾರದ ಪ್ರಶಸ್ತಿಗಾಗಿ ಕಾಯದೆ, ಸಮಾಜವೇ ತನ್ನ ನಿಜವಾದ ಶಿಕ್ಷಕರನ್ನು ಗುರುತಿಸಿ ಗೌರವಿಸಬೇಕು.

ಒಬ್ಬ ಶಿಕ್ಷಕನಿಗೆ ಹೂವಿನ ಹಾರ ಹಾಕುವುದಕ್ಕಿಂತ, ಅವನ ಸೇವೆಯನ್ನು ಗುರುತಿಸಿ ಗೌರವಿಸುವುದು ದೊಡ್ಡ ವಿಷಯ. ಕೊನೆಯ ಮಾತು ಶಿಕ್ಷಕರನ್ನು ಪ್ರಶಸ್ತಿಗಳಿಂದ ಅಳೆಯಬೇಡಿ. ಅವರು ರೂಪಿಸಿದ ವಿದ್ಯಾರ್ಥಿಗಳ ಬದುಕಿನಿಂದ ಅಳೆಯಿರಿ. ಪ್ರಶಸ್ತಿ ಪಡೆದವರೆಲ್ಲರೂ ಉತ್ತಮ ಶಿಕ್ಷಕರಾಗಬೇಕೆಂದಿಲ್ಲ. ಆದರೆ ಮಕ್ಕಳ ಬದುಕಿಗಾಗಿ ಪ್ರಾಮಾಣಿಕವಾಗಿ ದುಡಿಯುವ ಪ್ರತಿಯೊಬ್ಬ ಶಿಕ್ಷಕರೂ ಗೌರವಕ್ಕೆ ಅರ್ಹರು.

ಶಿಕ್ಷಣ ವ್ಯವಸ್ಥೆ ಬದಲಾಗಲಿ.
ಕಾನೂನುಗಳು ಬದಲಾಗಲಿ.
ನೀತಿ?ನಿಯಮಗಳು ಬದಲಾಗಲಿ.
ಪ್ರಶಸ್ತಿ ನೀಡುವ ಮಾನದಂಡಗಳು ಬದಲಾಗಲಿ.
ಆದರೆ ಶಿಕ್ಷಕನ ಮೇಲಿನ ಸಮಾಜದ ಗೌರವ ಮಾತ್ರ ಕಡಿಮೆಯಾಗಬಾರದು.

ಏಕೆಂದರೆ ಒಂದು ಶಾಲೆಯ ಕಟ್ಟಡವನ್ನು ಸರ್ಕಾರ ನಿರ್ಮಿಸಬಹುದು. ಪಠ್ಯಪುಸ್ತಕವನ್ನು ಸರ್ಕಾರ ನೀಡಬಹುದು. ತಂತ್ರಜ್ಞಾನವನ್ನು ಸರ್ಕಾರ ಒದಗಿಸಬಹುದು. ಆದರೆ ಒಬ್ಬ ಮಗುವಿನ ಬದುಕನ್ನು ರೂಪಿಸುವ ಶಿಕ್ಷಕನನ್ನು ಸೃಷ್ಟಿಸುವುದು ಸುಲಭವಲ್ಲ. ಅಂತಹ ಶಿಕ್ಷಕರನ್ನು ಗುರುತಿಸುವುದು ಸರ್ಕಾರದ ಕರ್ತವ್ಯವಾದರೆ, ಅವರನ್ನು ಗೌರವಿಸುವುದು ಇಡೀ ಸಮಾಜದ ಜವಾಬ್ದಾರಿ. ಪ್ರಶಸ್ತಿ ಒಂದು ದಿನದ ಗೌರವ. ಆದರೆ ಒಬ್ಬ ವಿದ್ಯಾರ್ಥಿಯ ಬದುಕನ್ನು ಬದಲಿಸಿದ ಶಿಕ್ಷಕನ ಗೌರವ ಜೀವಮಾನದ್ದು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,